# ಪ್ರಸಾದ

ದ್ವೈಮಾಸಿಕ

ಸಂಪುಟ ೩೬ ಸಂಚಿಕೆ ೪ ಜುಲೈ-ಆಗಸ್ಟ್ ೨೦೨೧



ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ
ಮಹಾಸ್ವಾಮಿಗಳವರ

## 106 ನೆಯ ಜಯಂತಿ ಮಹೋತ್ಸವ

**ವಿಶೇಷ ಸಂಚಿಕೆ**

ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು



ಸುತ್ತೂರು ಶ್ರೀಕ್ಷೇತ್ರಕ್ಕೆ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಭೇಟಿ ನೀಡಿ ಪೂಜ್ಯರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳು ಸನ್ಮಾನಿಸಿ ಆಶೀರ್ವದಿಸಿದರು. ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಸಚಿವರಾದ ಶ್ರೀ ವಿ. ಸೋಮಣ್ಣ, ಶಾಸಕರುಗಳಾದ ಶ್ರೀ ಆನಂದ್ ಮಾಮನಿ, ಶ್ರೀ ಎಂ.ಪಿ. ರೇಣುಕಾಚಾರ್ಯ ಶ್ರೀ ಮಹಾಂತೇಶ ಕವಟಗಿಮಠ, ಶ್ರೀ ಎನ್. ಮಹೇಶ್ ಮೊದಲಾದವರುಗಳಿದ್ದಾರೆ (9.8.2021)

# ಪ್ರಸಾದ

**ಸಂಪುಟ 36 : ಸಂಚಿಕೆ 4** **ಜುಲೈ–ಆಗಸ್ಟ್ 2021**

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**
**106ನೆಯ ಜಯಂತಿ ಮಹೋತ್ಸವದ**
**ವಿಶೇಷ ಸಂಚಿಕೆ**

ಸಂಪಾದಕ
**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

---


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


| | |
|---|---|
| ಗುರುವಾಣಿ | 5 |
| ಸಂಪಾದಕೀಯ | 7 |
| ನರನಾಗಿ ಬಂದೆಲ್ಲಾ | 10 |
| ಜಗತ್ತಿನ ಧಾರ್ಮಿಕ ರಾಜಧಾನಿ ಸುತ್ತೂರು<br>**ನಾಡೋಜ ದೇಜಗೌ** | 11 |
| ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ<br>ಮಹಾಸ್ವಾಮಿಗಳವರಿಗೆ ನುಡಿನಮನ<br>**ಡಾ. ಬಿ. ನಂಜುಂಡಸ್ವಾಮಿ** | 31 |
| ಸುತ್ತೂರು ಜಗದ್ಗುರುಗಳು<br>**ಜೋಳದರಾಶಿ ದೊಡ್ಡನಗೌಡ** | 39 |
| 'ಶ್ರೀಶೈಲ ಪೀಠ ದರ್ಶನ' ಕೃತಿಗೆ ಜಗದ್ಗುರು<br>ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಬರೆದ ಮುನ್ನುಡಿ | 41 |
| ಪ್ರೊ. ಶಿ.ಶಿ. ಬಸವನಾಳರು ಮೈಸೂರಿನ ಶ್ರೀ ಸುತ್ತೂರು<br>ಮಠದ ಪ್ರಸಾದನಿಲಯದಲ್ಲಿ ಪದವೀಧರರಿಗೆ<br>ನೀಡಿದ ಉಪನ್ಯಾಸ (1944) | 44 |
| ಕಾಯಕಯೋಗಿ ಗುರುದೇವರಿಗೆ<br>**ಡಾ. ದೊಡ್ಡರಂಗೇಗೌಡ** | 54 |
| ಸುತ್ತೂರು ಹೊಳೆದಂಡಿ ಸುತ್ತುಮಲ್ಲಿಗಿ ದಂಡಿ!<br>**ಪ್ರೊ. ಜಿ.ಎಚ್. ಹನ್ನೆರಡುಮಠ** | 55 |
| ಸುತ್ತೂರ ವೀರಸನ್ಯಾಸಿ<br>**ಡಾ. ಕೆ. ಲೀಲಾ ಪ್ರಕಾಶ್** | 56 |

ಮಹೋದಧಿ 58
**ಡಾ. ಎನ್.ಎಂ. ಗಿರಿಜಾಪತಿ**

ಸುತ್ತೂರು ಸ್ಮರಣೆ 60
**ಶಾಂತಮ್ಮ ಎಂ. ಕವಟಗಿಮಠ**

ತ್ರಿವಿಧ ದಾಸೋಹಿ 61
**ಸಂಗೀತ ಶಾಂಭವೀ (ಮುತ್ತುಲಕ್ಷ್ಮಿ ರಾಮಚಂದ್ರ)**

ವಾರ್ತಾವಿಹಾರ 62
**ಕುಮಾರಸ್ವಾಮಿ ವಿರಕ್ತಮಠ**

- ಸತ್ಯಶುದ್ಧವಾದ ಕಾಯಕನಿಷ್ಠೆಯನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
- ಯಾವುದೇ ಕಾಯಕವಾಗಲಿ, ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡಿದರೆ ಫಲ ಖಂಡಿತ ಲಭಿಸುತ್ತದೆ.
- ಒಳ್ಳೆಯ ಕೆಲಸವನ್ನು ಮಾಡಬೇಕು ಎನಿಸಿದ ಕೂಡಲೇ ಮಾಡ ಬೇಕು, ನಾಳೆ ನೋಡೋಣ ಎಂದು ಮುಂದೆ ಹಾಕಬಾರದು.
- ನಾವು ಮಾಡುವ ಕಾಯಕ ಶುದ್ಧವಾಗಿರಬೇಕು. ಕಾಯಕವಿಲ್ಲದವನಿಗೆ ಧರ್ಮವಿಲ್ಲ, ಧರ್ಮವಿಲ್ಲದವನಿಗೆ ದೇವರಿಲ್ಲ. ಎಲ್ಲರೂ ದುಡಿಯ ಬೇಕು, ಎಲ್ಲರೂ ಉಣ್ಣಬೇಕು.
- ಸಮಾಜದ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ ಬಡ ವಿದ್ಯಾರ್ಥಿ ಗಳಿಗೆ ಸಹಾಯಮಾಡಿ ಉತ್ತಮ ಪ್ರಜೆಗಳಾಗಿ ಬೆಳೆಯಲು ಅವರಿಗೆ ಅವಕಾಶ ಕಲ್ಪಿಸುವುದು.
- ಜ್ಞಾನದಾನದ ವಿದ್ಯಾಮಂದಿರಗಳೇ ನಿಜವಾದ ದೇವಾಲಯಗಳು.

**– ಪರಮಪೂಜ್ಯ ಜಗದ್ಗುರು**
**ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು**

# ಗುರುವಾಣಿ

ಪ್ರತಿ ವರ್ಷ ಆಗಸ್ಟ್ ತಿಂಗಳ 29ನೇ ತಾರೀಕು ಸುತ್ತೂರು ಶ್ರೀಮಠ ಹಾಗೆಯೇ ಶ್ರೀಮಠದ ಭಕ್ತಸಮುದಾಯದ ಪಾಲಿಗೆ ಒಂದು ಪವಿತ್ರ ದಿನ. ಎಲ್ಲರ ಮನದಲ್ಲಿಯೂ ಒಂದು ರೀತಿಯ ಉತ್ಸಾಹ, ಭಕ್ತಿ, ಕೃತಜ್ಞತಾಭಾವ ಗರಿಗಟ್ಟಿದ ಅನುಭವ. ಅಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿಯ ದಿನವಾಗಿರುವುದು ಇದಕ್ಕೆ ಪ್ರಮುಖ ಕಾರಣ. ಶ್ರೀಮಠದ ಸುದೀರ್ಘ ಚರಿತ್ರೆಯಲ್ಲಿ ಒಬ್ಬೊಬ್ಬ ಗುರುವರ್ಯರೂ ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಅವರವರದೇ ರೀತಿಯ ವಿಶಿಷ್ಟ ಹೆಜ್ಜೆ ಗುರುತುಗಳನ್ನು ಮೂಡಿಸಿರುವುದು ಕಂಡುಬರುತ್ತದೆ. ಆಯಾ ಕಾಲಮಾನದ ಜನಸಮುದಾಯದ ಅಭೀಪ್ಸೆಗಳನ್ನು ಪೂರೈಸುತ್ತಾ, ಮಾರ್ಗದರ್ಶನ ಮಾಡುತ್ತಾ, ಜನರ ನೆಮ್ಮದಿಯ ಬದುಕಿಗೆ ಒತ್ತಾಸೆಯಾಗಿ ನಿಂತಿರುವುದು ಚರಿತ್ರೆಯಲ್ಲಿ ದಾಖಲಾಗಿರುವ ಅಂಶವೇ ಆಗಿದೆ. ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜೀವಿತಾವಧಿಯಲ್ಲಿ ಶ್ರೀಮಠದ ಸೇವಾಸ್ವರೂಪದಲ್ಲಿ ಉಂಟಾದ ಮಹತ್ ಮೌನಕ್ರಾಂತಿ ಅಭೂತಪೂರ್ವವಾದುದು. ಶ್ರೀಮಠದ ಸೇವಾವ್ಯಾಪ್ತಿ ವಿಸ್ತಾರವಾಗಿ ಹರಡಿದುದರ ಹಿಂದೆ ಪೂಜ್ಯರ ಧೀಶಕ್ತಿ ಹಾಗೂ ಕ್ರಿಯಾಶಕ್ತಿಗಳು ಒಂದರೊಳಗೊಂದು ಬೆರೆತು ಸಮಾಜಮುಖಿಯಾಗಿ ಹರಿದ ಪರಿ, ನವನಾಗರಿಕ ಕಾಲದ ಪವಾಡವೆಂದೇ ಹೇಳಬೇಕು. ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಶ್ರೀಮಠದ ಆರ್ಥಿಕ ಸ್ಥಿತಿಗತಿಗಳೇನೂ ಅಂತಹ ಸಮಾಧಾನಕರವಾಗಿಲ್ಲದ ಸಂದರ್ಭದಲ್ಲಿ, ರಾಜೇಂದ್ರ ಶ್ರೀಗಳು ಮಾನವೀಯ ಅಂತಃಕರಣದಿಂದ ಇಟ್ಟ ದಿಟ್ಟ ಹೆಜ್ಜೆ, ಇದನ್ನು ಆಗುಮಾಡಿಯೇ ತೀರಬೇಕೆಂದು ಶ್ರಮಿಸಿದ ಧೀರ ನಡೆ ಇವುಗಳನ್ನು ನೆನೆದರೆ ಇಂದಿಗೂ ಅಚ್ಚರಿಯಾಗುವುದು.

ಹಾಗೆ ನೋಡಿದರೆ ಪರಮಪೂಜ್ಯ ಶ್ರೀ ರಾಜೇಂದ್ರ ಶ್ರೀಗಳಿಗೆ ಹೆಚ್ಚಿನ ವ್ಯಾಸಂಗಕ್ಕೆ ಅವಕಾಶವಾಗಲಿಲ್ಲ. ಜಗದ ವ್ಯಾವಹಾರಿಕ ಜಂಜಡಗಳಿಗೆ ತಮ್ಮ ಮನಸ್ಸನ್ನು ತೆರೆದುಕೊಂಡವರೂ ಅಲ್ಲ. ಆದರೆ ಅವರ ಮಾತೃಹೃದಯ ಮಿಡಿದದ್ದು ಪರರ ಸಂಕಟಗಳನ್ನು ತಮ್ಮದೆಂದೇ ಭಾವಿಸಿ, ಅದನ್ನು ಪರಿಹರಿಸುವ ಮಾರ್ಗೋಪಾಯಗಳಾಗಿ, 'ಜಗವೆಲ್ಲ ನಗುತಿರಲಿ ಜಗದಳಲು ನನಗಿರಲಿ' ಎನ್ನುವ ಕವಿವಾಣಿಗೆ ಭಾಷ್ಯ ಬರೆದಂತೆ ಜೀವಂತ ಉದಾಹರಣೆಯಾದರು. ಅವರು ಪಟ್ಟ ಪಾಡು, ಶ್ರೀಸಾಮಾನ್ಯನು ಊಹಿಸಿಕೊಳ್ಳುವುದಕ್ಕೂ ಸಾಧ್ಯವಾಗದಂತಹುದು. ಅವರು ಲೌಕಿಕ ಸೇವೆಯಲ್ಲಿದ್ದೂ

ಅಲೌಕಿಕರಾಗಿದ್ದವರು. ಅವರಿಗೆ ಸಾಂಪ್ರದಾಯಿಕ ಪೂಜಾಕೈಂಕರ್ಯದಷ್ಟೇ, ಸೇವಾಪೂಜೆಯೂ ಮಹತ್ವವಾದುದು ಎನಿಸಿತ್ತು.

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು,
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು;
ನಿಮ್ಮ ಸೊಮ್ಮಿಂಗೆ ಸವೆಸುವೆನು, ನಿಮ್ಮಾಣೆ,
ಕೂಡಲಸಂಗಮದೇವಾ.

ಬಸವಣ್ಣನವರ ಈ ವಚನವನ್ನು ಶ್ರೀ ರಾಜೇಂದ್ರ ಮಹಾಸ್ವಾಮಿಗಳವರ ಬದುಕಿಗೂ ಹೊಂದಿಸಿ ಅರ್ಥೈಸಿಕೊಂಡರೆ ಪರಮಪೂಜ್ಯರ ಎಲ್ಲ ಶ್ರಮದ ಹಿಂದಿನ ಧ್ಯೇಯ, ಧೋರಣೆಗಳು ಸ್ಪಷ್ಟವಾಗುತ್ತವೆ. ಅವರ ದೂರದರ್ಶಿತ್ವದ ಕ್ರಿಯಾಶಕ್ತಿ ಇಂದಿಗೂ ನಿರಂತರ ಬೆಳಕಿನ ಕಿರಣಪುಂಜವಾಗಿ  ನಮಗೆಲ್ಲ ಚೈತನ್ಯವನ್ನು ತುಂಬುತ್ತದೆ. ಇಲ್ಲಿ ನಮ್ಮದೇನೂ ಇಲ್ಲ, ಎಲ್ಲ ಅವರದೇ ಎನ್ನುವುದು ನಮ್ಮ ಯಾವತ್ತೂ ನಂಬಿಕೆಯಾಗಿದೆ. ಅವರಿಂದ ಪರಿಪೋಷಿತವಾದ ಸಮಾಜ, ಇಂದಿಗೂ ಪರಮಪೂಜ್ಯರಲ್ಲಿ ಭಕ್ತಿ ಗೌರವಗಳನ್ನು ಹೊಂದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಅವರು ಜನಪರವಾಗಿ ರೂಪಿಸಿದ ಯೋಜನೆಗಳು, ಇಂದು ಸಮಾಜದ ಬೇರೆ ಬೇರೆ ಸ್ತರಗಳಲ್ಲಿ ಫಲ ಕೊಡುತ್ತಿವೆ. ಇದರಿಂದ ಸಮುದಾಯ ಎಂದಿಗಿಂತ ಇಂದು ಶೈಕ್ಷಣಿಕವಾಗಿ ಸಾಮಾಜಿಕವಾಗಿ ಉನ್ನತೀಕರಣಗೊಂಡಿರುವುದು ನಿಚ್ಚಳವಾಗಿ ಕಂಡುಬರುತ್ತಿದೆ.

ಶ್ರೀಮಠ ಇಂದು ಸಹಸ್ರಾರು ಜನರಿಗೆ ಉದ್ಯೋಗ, ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯೆ ಕೊಡುತ್ತಿರುವುದು, ತಾಂತ್ರಿಕ ಮತ್ತು ಆರೋಗ್ಯ ವಿಶ್ವವಿದ್ಯಾಲಯದ ಸ್ಥಾಪನೆ ಹಾಗೂ ಸಾಗರದಾಚೆಯೂ ಸಂಸ್ಥೆಗಳನ್ನು ಸ್ಥಾಪಿಸಿರುವುದು – ಈ ಎಲ್ಲವನ್ನು ನೋಡಿದಾಗ, ಇದಕ್ಕೆ ಕಾರಣೀಭೂತರಾದ ಪರಮಪೂಜ್ಯರನ್ನು ನೆನೆದು ಮನಸ್ಸು ತುಂಬಿ ಬರುತ್ತದೆ. ಭಕ್ತಿಭಾವದಿಂದ ಹೃದಯ ಆರ್ದ್ರಗೊಳ್ಳುತ್ತದೆ.

106ನೇ ಜಯಂತಿಯ ಸಂದರ್ಭದಲ್ಲಿ ಪೂಜ್ಯರನ್ನು ಮನಸಾ ಸ್ಮರಿಸುತ್ತಾ, ಅವರು ಹೀಗೆಯೇ ನಮ್ಮೆಲ್ಲರನ್ನೂ ಕೈ ಹಿಡಿದು ನಡೆಸುವುದರ ಮೂಲಕ ನಮಗೆಲ್ಲ ನಿರಂತರ ದಾರಿದೀಪವಾಗಲಿ ಎಂದು ಆಶಿಸುತ್ತೇವೆ. ಹಾಗೆಯೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ, ಸಮುದಾಯದಲ್ಲಿ ಸಾಮರಸ್ಯ ಸಮನ್ವಯಗಳು ಬೆಳೆದು ಧರ್ಮಪ್ರಜ್ಞೆ ಹಾಗೂ ರಾಷ್ಟ್ರಪ್ರಜ್ಞೆಗಳು ಉದ್ದೀಪನಗೊಳ್ಳಲೆಂದು ಹಾರೈಸುತ್ತೇವೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

**ಪ್ರ**ತಿವರ್ಷದ ಆಗಸ್ಟ್ 15 ಭಾರತೀಯರಿಗೆ ಬಹು ಸಂಭ್ರಮದ ದಿನ. ಕಾರಣ, ಅಂದು ಯೂನಿಯನ್ ಜಾಕ್ ಕೆಳಗಿಳಿದು ಭಾರತದ ಸ್ವಾತಂತ್ರ್ಯದ ಸಂಕೇತವಾದ ತ್ರಿವರ್ಣ ಧ್ವಜ ಆಗಸದಲ್ಲಿ ಹಾರಾಡಿತು. ಯಾವುದೇ ವ್ಯಕ್ತಿಯ ಹಾಗೆಯೇ ಸಮುದಾಯದ ಬಹು ದೊಡ್ಡ ಅಭೀಪ್ಸೆ ಎಂದರೆ 'ಸ್ವತಂತ್ರ'ವಾಗಿ ಬದುಕುವುದು, ಪಶುಪಕ್ಷಿಗಳೂ ಸಹ ಬಂಧನದ ಬದುಕನ್ನು ಬಯಸುವುದಿಲ್ಲ; ಅದರಿಂದ ಬಿಡುಗಡೆ ಪಡೆಯಲು ಅವು ಏನೆಲ್ಲ ಪ್ರಯತ್ನಗಳನ್ನು ಮಾಡುತ್ತವೆ. ಅಂತಾದ್ದರಲ್ಲಿ ಪ್ರಜ್ಞಾವಂತ ಮನುಷ್ಯ ಯಾವುದೇ ಸಂಕೋಲೆಗಳನ್ನು ಇಷ್ಟಪಡುವುದು ಊಹಾತೀತವಾದ ಸಂಗತಿಯಾಗಿದೆ. ಭಾರತೀಯರು ಹೆಚ್ಚುಕಾಲ ದಾಸ್ಯದಲ್ಲಿಯೇ ಬದುಕಿದವರು. ಫ್ರೆಂಚರು, ಡಚ್ಚರು, ಮುಸಲ್ಮಾನರು, ಆಂಗ್ಲರು ಹೀಗೆ ಒಬ್ಬೊಬ್ಬರೂ ನಮ್ಮನ್ನು ಶತಮಾನಗಳ ಕಾಲ ಆಳಿದರು. ದೇಶದ ಸಂಪತ್ತನ್ನು ಲೂಟಿ ಮಾಡಿ ಹಡಗುಗಟ್ಟಲೆ ತಮ್ಮ ದೇಶಗಳಿಗೆ ಸಾಗಿಸಿದರು. ಇಲ್ಲಿನ ಐದುನೂರಕ್ಕೂ ಹೆಚ್ಚಿಗೆ ಇದ್ದ ಪುಟ್ಟ ಪುಟ್ಟ ರಾಜ್ಯಗಳನ್ನು ತಮ್ಮ ತಂತ್ರ ಕುತಂತ್ರಗಳಿಂದ ಒಂದೊಂದಾಗಿ ವಶಪಡಿಸಿಕೊಂಡರು. 'ಬಹುಸಂಸ್ಕೃತಿ' ಹಾಗೂ ಸಂಘಟನಾ ರಾಹಿತ್ಯವೇ ಇವರನ್ನು ಒಡೆದು ಆಳುವುದಕ್ಕೆ ಅವರಿಗೆ ಅನುಕೂಲ ಮಾಡಿಕೊಟ್ಟಿತು. ಅಂತೂ ಮಹಾನ್ ದೇಶಪ್ರೇಮಿಗಳ ತ್ಯಾಗ ಮತ್ತು ಬಲಿದಾನಗಳಿಂದ ದೇಶ ಸ್ವಾತಂತ್ರ್ಯವನ್ನು ಪಡೆಯುವಂತಾಗಿ, ದೇಶದ ಭೂಪಟದಲ್ಲಿ ಬೆಳ್ಳಿ ರೇಖೆಯೊಂದು ಮೂಡಿತು. ಸ್ವಲ್ಪ ಮಂದಗತಿಯ ಚಲನೆ ಎನಿಸಿದರೂ ಭಾರತ ಇಂದು ಸಾಕಷ್ಟು ಪ್ರಗತಿಯನ್ನು ಸಾಧಿಸಿರುವುದು ನಾವು ಹೆಮ್ಮೆಪಡಬೇಕಾದ ವಿಷಯವೇ. ಈಗ ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ವನ್ನು (75 ವರ್ಷ) ಆಚರಿಸುತ್ತಿದ್ದೇವೆ. ಈ ಎಪ್ಪತ್ತೈದು ವರ್ಷಗಳ ಸುದೀರ್ಘ ಹಾದಿಯನ್ನು ಒಮ್ಮೆ ತಿರುಗಿ ನೋಡಿದರೆ ಖಂಡಿತವಾಗಿಯೂ 'ಮೇರಾ ಭಾರತ್ ಮಹಾನ್' ಎನ್ನುವ ಮಾತು ನಿಜಕ್ಕೂ ಅಭಿಮಾನ ಪಡಬೇಕಾದ ಮಾತೇ ಆಗಿದೆ. ಎಲ್ಲ ಕ್ಷೇತ್ರಗಳಲ್ಲಿಯೂ 'Make in India' ಎನ್ನುವುದು ಕಾರ್ಯಗತವಾಗತೊಡಗಿದೆ. ಪತ್ರಿಕಾ ವರದಿಗಳ ಪ್ರಕಾರ 1947ರ ಸಂದರ್ಭದಲ್ಲಿ ಕೇವಲ ಶೇಕಡಾ 16 ಇದ್ದ ಶೈಕ್ಷಣಿಕ ಪ್ರಗತಿ ಈಗ 77 ರಷ್ಟಾಗಿದೆ. ಸರಾಸರಿ ಜೀವಿತಾವಧಿ ವಯಸ್ಸು 32ರಿಂದ 70ಕ್ಕೆ ಏರಿದೆ. ನಮ್ಮ ರಕ್ಷಣಾ ಕ್ಷೇತ್ರ ಯಾವ ಮುಂದುವರಿದ ರಾಷ್ಟ್ರಕ್ಕೂ ಕಮ್ಮಿ ಇಲ್ಲದಂತೆ, ವಿಶ್ವದ ಎರಡನೇ ಮಿಲಿಟರಿ ಪಡೆಯನ್ನು ಹೊಂದಿದೆ. ಸಿಬ್ಬಂದಿಯ ಸಂಖ್ಯೆ 14.4 ಲಕ್ಷ (1947ರಲ್ಲಿ 4 ಲಕ್ಷವಿತ್ತು)

ಕ್ಕೆ ಏರಿಕೆಯಾಗಿದೆ. ರಕ್ಷಣಾ ಬಜೆಟ್ 4.78 ಲಕ್ಷ ಕೋಟಿಯಾಗಿದೆ. (1947ರಲ್ಲಿ 93 ಕೋಟಿ) ಇನ್ನು ಆರೋಗ್ಯ ಕ್ಷೇತ್ರದಲ್ಲಿಯೂ ಕ್ರಾಂತಿಕಾರಕ ಪ್ರಗತಿಯಾಗಿದೆ. 1947ರಲ್ಲಿ 35 ಕೋಟಿ ಜನರಿಗೆ 50 ಸಾವಿರ ವೈದ್ಯರು ಮಾತ್ರ ಇದ್ದರು. (ಆಸ್ಪತ್ರೆಗಳು 7 ಸಾವಿರ) ಇಡೀ ದೇಶದಲ್ಲಿ ಇದ್ದದ್ದು ಕೇವಲ 23 ಮೆಡಿಕಲ್ ಕಾಲೇಜುಗಳು. ಈಗ ಇರುವ ಆಸ್ಪತ್ರೆಗಳ ಸಂಖ್ಯೆ 69 ಸಾವಿರ. ವೈದ್ಯರ ಸಂಖ್ಯೆ 12 ಲಕ್ಷ. ಎಂಬಿಬಿಎಸ್ ಸೀಟುಗಳ ಸಂಖ್ಯೆ 83,275, ಸ್ನಾತಕೋತ್ತರ ಸೀಟುಗಳು 42,720, ವೈದ್ಯಕೀಯ ಕಾಲೇಜುಗಳ ಸಂಖ್ಯೆ 558 (ಖಾಸಗಿ 269, ಸರ್ಕಾರಿ 289) ಸಂವಹನ ವಲಯದಲ್ಲಿಯಂತೂ ಬಹು ದೊಡ್ಡ ಕ್ರಾಂತಿಯೇ ಆಗಿದೆ. 1947ರಲ್ಲಿ ಇದ್ದ ಟೆಲಿಫೋನ್ ಸಂಪರ್ಕಗಳು 82 ಸಾವಿರ ಮಾತ್ರ. ಈಗ ಅದರ ಬಳಕೆ 120 ಕೋಟಿ. ಹಾಗೆಯೇ 74 ಕೋಟಿಯಷ್ಟು ಬ್ರಾಡ್ ಇಂಟರ್ನೆಟ್ ಬಳಕೆದಾರರು ಇದ್ದಾರೆ.

ಈ ನಡುವೆಯೇ ಕರೋನಾ ಸಾಂಕ್ರಾಮಿಕ ರೋಗ ಇಡೀ ಜಗತ್ತನ್ನು ತತ್ತರ ಗೊಳಿಸಿದೆ. 1918ರಲ್ಲಿ ಉಂಟಾದ ಸ್ಪ್ಯಾನಿಶ್ ಫ್ಲೂ ಭಾರತದಲ್ಲಿ ಸುಮಾರು 1.8 ಕೋಟಿ ಜನರನ್ನು ಬಲಿ ತೆಗೆದುಕೊಂಡರೆ, 1974ರಲ್ಲಿ ಬಂದ ದಡಾರ ಸುಮಾರು 15 ಸಾವಿರ ಜನರನ್ನು ಬಲಿ ಪಡೆಯಿತು. ಹಾಗೆಯೇ 1994ರಲ್ಲಿ ಪ್ಲೇಗ್‌ನಿಂದ 56 ಜನ ಸತ್ತರೆ, 2009ರಲ್ಲಿ ಕಾಣಿಸಿಕೊಂಡ ಹಕ್ಕಿ ಜ್ವರ 1035 ಜನರ ಸಾವಿಗೆ ಕಾರಣವಾಯಿತು. 1977ರಲ್ಲಿ ಭಾರತ ಸಿಡುಬಿನಿಂದ ಮುಕ್ತವಾದರೆ, 2014ರಲ್ಲಿ ಪೋಲಿಯೋದಿಂದ ಮುಕ್ತವಾಯಿತು. ಈಗ ಇವೆಲ್ಲಕ್ಕಿಂತ ಹೆಚ್ಚಾಗಿ ಕರೋನಾ ಮಾರಿ ಅಪ್ಪಳಿಸಿದ್ದು, ಇಡೀ ಭರತಖಂಡದ ಎಲ್ಲ ಚಟುವಟಿಕೆಗಳನ್ನು ಭಾಗಶಃ ಸ್ತಬ್ಧಗೊಳಿಸಿದ್ದು, ಸಾಮಾನ್ಯರ ಬದುಕು ಬಹಳ ದುರ್ಭರವಾಗಿದ್ದು, ಸಾಮಾಜಿಕ ಜನಜೀವನ, ಭಯದ ವಾತಾವರಣದಲ್ಲಿ ಜೀವ ಹಿಡಿದುಕೊಂಡಿದೆ.

ಇಷ್ಟೆಲ್ಲದರ ನಡುವೆ ಭಾರತ ಪ್ರಗತಿಪಥದಲ್ಲಿ ಸಾಗುತ್ತಿರುವುದು ನಿಚ್ಚಳವಾಗಿ ಗೋಚರವಾಗುತ್ತಿದೆ. ದುಡಿಯುವ ಕೈಗಳಿಗಂತೂ ಕೆಲಸ ಇದ್ದೇ ಇದೆ. ಜಾಗತೀಕರಣದ ಎಲ್ಲ ಸವಾಲುಗಳನ್ನು ಎದುರಿಸುತ್ತಲೇ ನಮ್ಮ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ವಿದ್ಯಾಭ್ಯಾಸ, ರೈತೋತ್ಪನ್ನಗಳ ಹೆಚ್ಚಳ – ಇವೆಲ್ಲದರಲ್ಲಿಯೂ ಅಭೂತಪೂರ್ವ ಸಾಧನೆಯಾಗಿದೆ. ಇನ್ನೂ ಅಲ್ಲಲ್ಲಿ ಅಸ್ಪೃಶ್ಯತೆ, ಲಿಂಗ ಅಸಮಾನತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇವುಗಳು ಉಳಿದಿದ್ದರೂ ಅವೆಲ್ಲಾ ಶಿಥಿಲಾವಸ್ಥೆಗೆ ತಲುಪುತ್ತಿವೆ. ರಾಜಕೀಯ ಕ್ಷೇತ್ರವೊಂದು ಮಾತ್ರ ಶುದ್ಧೀಕರಣಕ್ಕೆ ಒಳಗಾಗಬೇಕಾಗಿದೆ. ಪತ್ರಿಕಾ ವರದಿಯೊಂದರಂತೆ ಶೇಕಡ 40ರಷ್ಟು ಕ್ರಿಮಿನಲ್ ಹಿನ್ನೆಲೆ ಇರುವವರು ನಮ್ಮ ಪ್ರತಿನಿಧಿಗಳಾಗುತ್ತಿದ್ದಾರೆ ಎನ್ನುವುದೇ ಬಹು ದೊಡ್ಡ ದುರಂತ. ಇದು ಅವರ ತಪ್ಪಲ್ಲ, ಮತದಾರರ ಅಪ್ರಜ್ಞಾವಂತಿಕೆ ಯಲ್ಲಿರುವ ದೋಷವಷ್ಟೆ! ಇಷ್ಟೆಲ್ಲಾ ಇದ್ದಾಗ್ಯೂ 'ಮೇರಾ ಭಾರತ್ ಮಹಾನ್' ಎಂದು ನಾವು ಎದೆ ತಟ್ಟಿ (ಇದು ಬೇರೆಯದೇ ಚರ್ಚೆಯ ಆಯಾಮವನ್ನು ಬಯಸುತ್ತದೆ) ಹೇಳಿಕೊಳ್ಳುವ ಸಂದರ್ಭ 75ನೇ ಸ್ವಾತಂತ್ರ್ಯೋತ್ಸವ.

ಈ ಸಂತಸದ ಜೊತೆಗೆ ನಮ್ಮ ಸಂತೋಷಕ್ಕೆ ಮತ್ತೊಂದು ಪ್ರಮುಖ ಕಾರಣವೆಂದರೆ ಇದೇ 29ರಂದು ಆಚರಿಸಲ್ಪಡುವ ಜಗದ್ಗುರು ಶ್ರೀ ರಾಜೇಂದ್ರ ಶ್ರೀಗಳವರ 106ನೇ ಜಯಂತಿ ಮಹೋತ್ಸವ. ಬಸವಾದಿ ಪ್ರಮಥರ ತತ್ವ ಬೀಜಗಳನ್ನು ಸಮಾಜದಲ್ಲಿ ಬಿತ್ತಿ ಬೆಳೆಯುವುದೇ ತಮ್ಮ ಬದುಕಿನ ನಿಜ ಪೂಜೆ, ನಿಜ ಕಾಯಕ ಎಂದು ತಮ್ಮ ಕೊನೆಯ ಉಸಿರಿನ ತನಕವೂ ಅದನ್ನು ಒಂದು ವ್ರತವಾಗಿ ಸ್ವೀಕರಿಸಿದವರು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಕರ್ನಾಟಕದಲ್ಲಿರುವ ಅನೇಕ 'ಘನ' ಸ್ಥಾನಗಳಲ್ಲಿ ಶ್ರೀ ಸುತ್ತೂರು ಮಠವೂ ಒಂದು. ವೀರಶೈವ ಧರ್ಮದ ಚರಿತ್ರೆಯಲ್ಲಿ ಮಠಗಳ ಪಾತ್ರ ತುಂಬಾ ಮಹತ್ತರವಾದದ್ದು. ನಾಡಿನಾದ್ಯಂತ ಸುಮಾರು 5 ಸಾವಿರಕ್ಕೂ ಮಿಗಿಲಾಗಿ ಇದ್ದ ಮಠಗಳು, ಸ್ವಾತಂತ್ರ್ಯ ಚಳವಳಿಯಲ್ಲಿ, ಕನ್ನಡ ಭಾಷೆಯನ್ನು ಉಳಿಸುವುದರಲ್ಲಿ, ಬೆಳೆಸುವುದರಲ್ಲಿ ವಹಿಸಿದ ಪಾತ್ರ ಚರಿತ್ರೆಯಲ್ಲಿ ದಾಖಲಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ, ಅನ್ನ ಮತ್ತು ಜ್ಞಾನ ದಾಸೋಹಗಳ ಮೂಲಕ ಮಠಗಳು ಮಾಡಿದ 'ಮೌನಕ್ರಾಂತಿ' ಸಂಪುಟಗಟ್ಟಲೆ ಬರವಣಿಗೆಗೆ ವಸ್ತುವನ್ನು ಒದಗಿಸುತ್ತವೆ.

ಈ ದೃಷ್ಟಿಯಿಂದ ಪರಮಪೂಜ್ಯ ರಾಜೇಂದ್ರ ಶ್ರೀಗಳು ನಡೆಸಿದ 'ದಾಸೋಹ' ಬಹು ದೊಡ್ಡದು. ಮಠಗಳೆಂದರೆ ಧರ್ಮ ಮತ್ತು ತತ್ವಜಿಜ್ಞಾಸೆಯ ಧರ್ಮಸೂಕ್ಷ್ಮಗಳನ್ನು ಪರಿಹರಿಸುವ, ನೊಂದು ಬಂದ ಮನಸ್ಸುಗಳಿಗೆ ಸಾಂತ್ವನ ಹೇಳುವ ಕೇಂದ್ರಗಳಾಗಿರ ಬೇಕಿರುವಂತೆಯೇ ಕಾಲಘಟ್ಟದ ಅಭೀಪ್ಸೆಗಳಿಗೆ ತಕ್ಕಂತೆ, ಅದರಾಚೆಗೂ ತನ್ನನ್ನು ವಿಸ್ತರಿಸಿಕೊಳ್ಳುವ ಅನಿವಾರ್ಯತೆ ಇದೆ. ಏಕೆಂದರೆ ಧರ್ಮಸಂಬಂಧಿ ಜಿಜ್ಞಾಸೆಗಳು ಈಗ ಬೇರೆ ಬೇರೆ ಆಯಾಮವನ್ನು ಪಡೆದುಕೊಳ್ಳುವುದರ ಜೊತೆಗೆ ಬೇರೆ ಬೇರೆ ವ್ಯಾಖ್ಯೆ ವ್ಯಾಖ್ಯಾನಗಳನ್ನು ಪಡೆದುಕೊಳ್ಳುತ್ತಿರುವ ದಿನಮಾನಗಳಲ್ಲಿ ಇದು ಅನಿವಾರ್ಯವೂ ಆಗಿದೆ. ಇದನ್ನು ಆಗಲೇ ದರ್ಶಿಸಿದ ರಾಜೇಂದ್ರ ಶ್ರೀಗಳು ಸಮಾಜಮುಖಿ ಮಾರ್ಗದಲ್ಲಿ ಕ್ರಮಿಸಿ, ಮಠ ಪರಂಪರೆಗೆ ಒಂದು 'ಮಹಾಮಾರ್ಗ'ವನ್ನು ನಿರ್ಮಿಸಿದ್ದು ಬಹು ದೊಡ್ಡ ಕ್ರಾಂತಿಯೇ ಆಗಿದೆ. ಅದು ಇಂದಿಗೂ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವುದು ನಾವೆಲ್ಲ ಹೆಮ್ಮೆ ಪಡಬೇಕಾದ ಸಂಗತಿಯಾಗಿದೆ.

ಅಂತಹ ಪೂಜ್ಯರ 106ನೇ ಜಯಂತಿ ಹಾಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆ ಈ ಎರಡೂ ಒಂದರೊಳಗೊಂದು ಬೆರೆತು ವಿಶೇಷ ಅರ್ಥವನ್ನು ಧ್ವನಿಸುವಂತಿವೆ. ಪ್ರತಿ ಬಾರಿಯೂ ಪರಮಪೂಜ್ಯರ ಜಯಂತಿಯ ಸಂದರ್ಭದ 'ಪ್ರಸಾದ' ಸಂಚಿಕೆಯನ್ನು 'ಅವರಿಗಾಗಿಯೇ' ಮೀಸಲಿಡುತ್ತಾ ಬರಲಾಗಿದೆ. ಒಂದೊಂದು ಸಂಚಿಕೆಯೂ ಒಂದೊಂದು ರೀತಿಯಲ್ಲಿ ನೂತನವಾಗಿ ಮೂಡಿಬರಲು ಪ್ರಯತ್ನಿಸಲಾಗಿದೆ. ಅಂತೆಯೇ ಈ ಸಂಚಿಕೆಯಲ್ಲೂ ಕೆಲವು ವಿಶೇಷಗಳಿವೆ. ಅದಕ್ಕಾಗಿ ಸಹಕರಿಸಿದ ಎಲ್ಲರಿಗೂ 'ಪ್ರಸಾದ' ಬಳಗದ ಕೃತಜ್ಞತೆಗಳು ಸಲ್ಲುತ್ತವೆ.

**ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ನರನಾಗಿ ಬಂದೆಲ್ಲಾ

**ನ**ರನಾಗಿ ಬಂದೆಲ್ಲಾ ಗುರುವೆ ನನಗೆ ಅರುವನ್ನು ಕೊಟ್ಟೆಲ್ಲಾ
ಹರಿಹರಾದಿಗಳೆಲ್ಲಾ ನಿನ್ನ ಸರಿಸಮರ್ಯಾರೂ ಈ ಜಗದಿಲ್ಲಾ ॥ ಪ ॥

ಸಿರಿಸಂಪದಗಳು ನರಗಿರುತಿಹ ಅದನು
ತ್ವರಿತೋರಿ ಪರಸುಖಾ ಕೊಟ್ಟೆಲ್ಲಾ ॥ ಅ.ಪ ॥

ಗರುಡ ಗಂಧರ್ವರು ನಿರುತ ಕಿಂಪುರುಷಾರು
ನರಗಾನುಭವವನು ತಿಳಿಸಲಿಲ್ಲ
ಮರಳ ಜಗದೀ ಸ್ಥಿರ ಸಿರಿ ಸಂಪದವೆಂದು
ಹರುಷದಿಂದ ತಾವಿಹರಲ್ಲಾ ॥ 1 ॥

ಹರಿಹರ ಅಜರೇನು ಬ್ಯಾರಿಲ್ಲಾ
ನಮಗಿರುವ ತ್ರಿಗುಣಗಳೊಂದೆಲ್ಲಾ
ಹರಿಶಾಪ ಹರಕೋಪ ಅಜಸೃಷ್ಟಿಪನಿದೆಲ್ಲಾ ॥ 2 ॥

ಮದಗಳೆಂಟರಲೀ ನೀನಲ್ಲಾ
ಉದಿಸಿ ಉದಿಸಿ ಬರುತಿಹವಲ್ಲಾ
ವದನ ಬಾಗಿಸಿ ನೀ ಮುದದೀ ಮೂರ್ಗುಣಗಳು
ಬದಿಯಲಿರಲ್ಕೇನು ಭಯವಿಲ್ಲಾ ॥ 3 ॥

ಅರಿಷಡ್ವರ್ಗೇಂದ್ರಿಯಗಳೆಲ್ಲಾ
ಆರುಕೂಡಿ ಒಂದಾಗ್ಯಾವಲ್ಲಾ
ನರಗೆ ಪಂಚವಿಂಶತಿ ಬೆರತಿಹದಲ್ಲಾ
ಚರಿತ ನಾಲ್ಕನು ಸರಿಸಿಹವಲ್ಲಾ ॥ 4 ॥

ನರ ನಾನತ್ವದ ಚರಿತೆಯಿದೆಲ್ಲಾ
ಮರತಿದೆ ಪೂರ್ವದ ಸ್ಥಿತಿಯಲ್ಲಾ
ನಿರುತವಾಗಿಹ ಎನ್ನ ಚರಿತೆಯ ತಿಳುಹಿದ
ಗುರು ನಾಗಲಿಂಗೇಶಾ ನೀನಲ್ಲಾ ॥ 5॥

**ನಾಗಲಿಂಗಸ್ವಾಮಿ ತತ್ವಪದಗಳು**
**ಕೃಪೆ: ತತ್ವಪದಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**

# ಜಗತ್ತಿನ ಧಾರ್ಮಿಕ ರಾಜಧಾನಿ ಸುತ್ತೂರು

**ನಾಡೋಜ ದೇಜಗೌ**

ಜಗತ್ತಿನ ಅಪೂರ್ವ ಧಾರ್ಮಿಕ ರಾಜಧಾನಿಯಾಗಿರುವ ಸುತ್ತೂರು ಎರಡು ಸಾವಿರ ವರ್ಷಗಳಿಗಿಂತ ಪ್ರಾಚೀನವಾದ ಪವಿತ್ರ ಸ್ಥಾನ. ಅದು ನಂಜನಗೂಡಿಗೆ ಪೂರ್ವಕ್ಕೆ 9 ಮೈಲಿ ದೂರದಲ್ಲಿ ಕಪಿಲಾ ನದಿಯ ದಡದಲ್ಲಿದೆ. ಶ್ರೋತ್ರಿಯರೆ ವಿಶೇಷವಾಗಿದ್ದು, ವೇದೋಪನಿಷತ್ತು ಪುರಾಣಾಗಮಗಳ ಪಠನ ಶ್ರವಣಗಳು ಸದಾ ಜರುಗುತ್ತಿದ್ದುದರಿಂದ ಅದಕ್ಕೆ ಶ್ರೋತ್ರಿಯೂರೆಂಬ ಹೆಸರು ಅನ್ವರ್ಥವಾಗಿತ್ತು. ಅದು ಕಪಿಲ ಮಹರ್ಷಿಗಳು ತಪಸ್ಸು ಮಾಡಿದ ಸ್ಥಳ. ಅದು ಚೋಳರ ವಶವಾದ ನಂತರ ಶೈವ ಧರ್ಮದ ಪ್ರಭಾವ ಅಲ್ಲೆಲ್ಲ ಸಾಂದ್ರವಾಗಿ ಹರಡುತ್ತಿತ್ತು. ಸಿದ್ಧಗಿರಿಯಿಂದ ರೇಣುಕರ ಅನುಗ್ರಹಪಾತ್ರರಾದ ಶಿವರಾತ್ರೀಶ್ವರ ಶಿವಾಚಾರ್ಯರು ರಾಜರಾಜೇಂದ್ರ ಚೋಳನ ಆಹ್ವಾನದ ಮೇರೆಗೆ ಸುಮಾರು ಕ್ರಿ.ಶ. 1000 ನೆಯ ಇಸವಿಯಲ್ಲಿ ಸುತ್ತೂರಿಗೆ ಆಗಮಿಸಿ, ತಪೋಮಗ್ನರಾಗುತ್ತಾರೆ. ಶ್ರೋತ್ರಿಯರು ಅವರ ಮಹಾತ್ಮೆಗೆ ಬೆರಗಾಗಿ ಶರಣಾಗತರಾಗುತ್ತಾರೆ. ಶ್ರೋತ್ರಿಯೂರು ಶೈವಧರ್ಮದ ಕೇಂದ್ರವಾಗಿ, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಪ್ರಸಿದ್ಧವಾಗುತ್ತದೆ.

ಇಲ್ಲಿಯ ನಾರಾಯಣಸ್ವಾಮಿ ದೇವಸ್ಥಾನ ಅತ್ಯಂತ ಪ್ರಾಚೀನವಾದದ್ದು ; ಗಂಗರ ಕಾಲಕ್ಕೆ ಸೇರಿದ್ದು; ಇಟ್ಟಿಗೆಯ ಕಟ್ಟಡ, ದೇವಸ್ಥಾನದಲ್ಲಿ ವರದರಾಜಸ್ವಾಮಿಯ ಮೂರ್ತಿ ಇದೆ. ಕಿರೀಟಧಾರಿಯಾದ ವಿಗ್ರಹ, ಅಭಯಹಸ್ತದಂತಿರುವ ಕೈಗಳಲ್ಲಿ ಶಂಖಚಕ್ರಗಳಿವೆ. ಕಂಠಾಭರಣ, ಯಜ್ಞೋಪವೀತ, ನಡುಪಟ್ಟಿ ಮತ್ತು ಕಂಕಣಗಳು ವಿಗ್ರಹದ ಕಾಂತಿಯನ್ನು ಹೆಚ್ಚಿಸಿವೆ. ಹೊಯ್ಸಳ ಚಕ್ರವರ್ತಿ ನರಸಿಂಹಬಲ್ಲಾಳನಿಂದ ಈ ದೇವಸ್ಥಾನವು 1169 ರಲ್ಲಿ ನಿರ್ಮಾಣವಾಯಿತೆಂದು ಹೇಳಲಾಗಿದೆ.

ಊರಿಗೆ ಪೂರ್ವಭಾಗದಲ್ಲಿ ಒಂದು ಫರ್ಲಾಂಗು ದೂರದಲ್ಲಿ ಗಂಗರ ಕಾಲದಲ್ಲಿ ನಿರ್ಮಾಣವಾದ ಗ್ರಾಮದೇವತೆ ಸುತ್ತೂರಮ್ಮನ ದೇವಾಲಯವಿದೆ. ಬತ್ತದ ಗದ್ದೆಗಳ ಮತ್ತು ಕಾಲುವೆಯ ಮಧ್ಯದಲ್ಲಿರುವ ಸಣ್ಣ ದೇವಾಲಯವಿದು. ಇದರೊಳಗೆ ಒಂಬತ್ತು ಸಪ್ತಮಾತೃಕೆಯರು ಎಂದು ಕರೆಯಲಾಗುವ ಒಂಬತ್ತು ವಿಗ್ರಹಗಳಿವೆ. ಒಂದೊಂದು

---

ಡಾ. ದೇಜಗೌ ಅವರ 'ಸುತ್ತೂರು ಬೆಳದಿಂಗಳು' ಕೃತಿಯ ಆಯ್ದ ಭಾಗಗಳು. ಪ್ರ: ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 2015.

ವಿಗ್ರಹವೂ 2.5 ಅಡಿ ಎತ್ತರವಿದೆ. ಅಷ್ಟಕೋನದ ಸ್ತಂಭಗಳ ನವರಂಗದಲ್ಲಿ ಒಂದು ಗಣೇಶ ವಿಗ್ರಹವಿದೆ. ದೇವಸ್ಥಾನದ ಸುತ್ತಮುತ್ತ ಅನೇಕ ವೀರಗಲ್ಲುಗಳಿರುವುದನ್ನು ನೋಡಿದರೆ ಇದು ವೀರಭೂಮಿಯಾಗಿದ್ದಿರಬೇಕೆಂದು ತೋರುತ್ತದೆ. ಈ ದೇವಸ್ಥಾನದ ಸಮೀಪದಲ್ಲಿಯೇ ಭೈರವನ ವಿಗ್ರಹವಿದೆ. ಇದರ ಬಲ ಪಕ್ಕದಲ್ಲೊಂದು ನಾಯಿ ಚಿತ್ರವಿರುವ ಶಿಲ್ಪವಿದ್ದು, ಭೈರವನ ವಾಹನ ನಾಯಿ ಎಂಬ ಪುರಾಣದ ವಿವರವನ್ನು ಇದು ಸೂಚಿಸುತ್ತದೆ.

ಖ್ಯಾತ ಶಾಸನತಜ್ಞರಾದ ಶ್ರೀ ಆರ್. ನರಸಿಂಹಾಚಾರ್ಯರು 1918 ರಲ್ಲಿ ಪ್ರಕಟಿಸಿದ ಸಂಶೋಧನಾ ಲೇಖನದಲ್ಲಿ ಹೊಯ್ಸಳರ ಕಾಲದ ಸೋಮೇಶ್ವರ ದೇವಾಲಯದ ವರ್ಣನೆ ಇದೆ. ಇದು ಪೂರ್ವಾಭಿಮುಖವುಳ್ಳ ತ್ರಿಕೂಟಾಚಲದಂತಿದೆ. ಬಳಪದಕಲ್ಲಿನಲ್ಲಿ ಚಿತ್ರಗಳೂ, ವಿಗ್ರಹಗಳೂ ಕೆತ್ತನೆಗೊಂಡಿವೆ. ಮೂಲ ಕಟ್ಟಡ ಗ್ರಾನೈಟ್ ಶಿಲೆಯದು. ಮಧ್ಯದ ಗುಡಿಯಲ್ಲಿರುವುದು ಚೋಳರ ಕಾಲದ ಲಿಂಗ. ಈ ದೇವಾಲಯದಲ್ಲಿ ಮೂರು ಗುಡಿಗಳಿದ್ದು, ಮಧ್ಯದಲ್ಲಿ ಒಂದು ಅಂಗಳವೂ ಮುಂದುಗಡೆ ಒಂದು ಅಂಗಳವೂ ಇದೆ. ಉತ್ತರದ ಗುಡಿ ಖಾಲಿ. ಪೀಠದ ಕಲ್ಲಿನಲ್ಲಿ ನಂದಿ ಮತ್ತು ಗರುಡನ ಶಿಲ್ಪಗಳಿವೆ. ದಕ್ಷಿಣದ ಕೋಣೆಯಲ್ಲಿ ಶಂಕರನಾರಾಯಣ ವಿಗ್ರಹವಿದೆ. ಇದು ಐದು ಅಡಿ ಎತ್ತರವಾಗಿದೆ. ಇದರ ಬಲಭಾಗ ಶಿವನ ಆಕೃತಿಯಾಗಿ ಜಟಾಮುಕುಟವನ್ನೂ ತ್ರಿಶೂಲವನ್ನೂ ಅಕ್ಷಮಾಲೆಯನ್ನೂ ಮತ್ತು ಎಡಭಾಗದಲ್ಲಿ ವಿಷ್ಣುವಿನ ಆಕೃತಿಯಾಗಿ ಕಿರೀಟವನ್ನೂ, ಶಂಖಚಕ್ರಗಳನ್ನೂ ಹೊಂದಿದೆ. ಉತ್ತರಭಾಗದ ಕೋಣೆಯಲ್ಲಿ ಸಪ್ತಮಾತೃಕೆಗಳಿವೆ.

ಸುತ್ತೂರಿನಲ್ಲಿ 26 ಶಿಲಾಶಾಸನಗಳಿವೆ. ಇವುಗಳಲ್ಲಿ ಕೆಲವು ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಿದುವು. ಶಿವರಾತ್ರೀಶ್ವರ ಮಠದ ಮುಂದಿರುವ ಶಾಸನಗಳಲ್ಲಿ ಒಂದು ಕನ್ನಡ ಲಿಪಿಯಲ್ಲಿದೆ. ಇದು ರಾಜೇಂದ್ರಚೋಳನ ಕಾಲದ್ದು. ಆ ಕಾಲಕ್ಕೆ ಅದೊಂದು ಅಗ್ರಹಾರವಾಗಿದ್ದಿರಬಹುದು.

ರಾಜೇಂದ್ರಚೋಳನ ದಂಡನಾಯಕ ಶ್ರೀ ಲಕ್ಷ್ಮಯ್ಯ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾನೆ. ಸೋಮೇಶ್ವರ ದೇವಸ್ಥಾನಕ್ಕೆ ಬಲಭಾಗದಲ್ಲಿ, ತುಸು ದೂರದಲ್ಲಿ ಹೊಯ್ಸಳರ ಕಾಲದ ವೀರಭದ್ರಸ್ವಾಮಿ ಗುಡಿ ಇದೆ. ಹೊರಭಾಗದಲ್ಲಿರುವ ಸಣ್ಣ ಗುಡಿಯಲ್ಲಿ ಪಾರ್ವತಿ ವಿಗ್ರಹವಿದೆ.

ಈ ಊರಿನಲ್ಲಿ ಶ್ರೀ ವೀರಸಿಂಹಾಸನ ಮಠ ತುಂಬ ಪ್ರಖ್ಯಾತವಾದದ್ದು. ಈ ಮಠಕ್ಕೆ 40ಕ್ಕಿಂತ ಹೆಚ್ಚು ಅಧೀನ ಮಠಗಳಿವೆ.

ಅತ್ಯಂತ ಪ್ರಾಚೀನವಾದ ಮೂಲಸ್ಥಾನೇಶ್ವರ ದೇವಾಲಯ ರಾಜೇಂದ್ರಚೋಳನ ಕಾಲದ್ದೆಂದು ಹೇಳಲಾಗಿದೆ. ಕ್ರಿ.ಶ. 1032 ರಲ್ಲಿ, ರಾಜೇಂದ್ರಚೋಳನ ರಾಜ್ಯಾಭಿಷೇಕದ

ಸಮಯದಲ್ಲಿ ಈಶಾನೇಶ್ವರರಿಗೆ ಮತ್ತು ಮೂಲಸ್ಥಾನದೇವರಿಗೆ ಅನೇಕ ಭಕ್ತರು ದಾನ ನೀಡಿದ ಬಗ್ಗೆ ಅನೇಕ ಶಾಸನಗಳಲ್ಲಿ ಉಲ್ಲೇಖವಿದೆ.

ಗ್ರಾಮೀಣ ಪರಂಪರೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಸ್ತುಸಂಗ್ರಹಾಲಯ ವೊಂದು ಸುತ್ತೂರಿನ ಆಕರ್ಷಕ ಕೇಂದ್ರವಾಗಿದೆ. 2000ನೆಯ ಇಸವಿಯಲ್ಲಿ ಸ್ಥಾಪನೆಗೊಂಡ ಈ ಆಲಯದಲ್ಲಿ ಪ್ರಾಗೈತಿಹಾಸಿಕ ವಸ್ತುಗಳು, ಶಿಲ್ಪಗಳು, ಶಿಲಾನಾಣ್ಯಗಳು, ವರ್ಣಚಿತ್ರಗಳು, ಗೃಹಬಳಕೆ ವಸ್ತುಗಳು, ಗ್ರಾಮೀಣ ಉದ್ಯಮಗಳಿಗೆ ಸಂಬಂಧಿಸಿದ ವಸ್ತುಗಳು, ಜನಪದ ಕಲೆಗಳು, ಜನಪದ ಸಂಗೀತ ವಾದ್ಯಗಳು, ಗ್ರಂಥಭಂಡಾರಗಳಿಂದ ಕೂಡಿದ್ದು, ಅದೊಂದು ಶ್ರೀಮಂತ ಸಾಂಸ್ಕೃತಿಕ ಭಂಡಾರವಾಗಿದೆ. ತಾಳೆಗರಿಯ ಹಸ್ತಪ್ರತಿಗಳು ಈ ಸಂಗ್ರಹಾಲಯಕ್ಕೆ ಭೂಷಣದಂತಿವೆ.

ಈ ಕ್ಷೇತ್ರದ ಜೆಎಸ್ಎಸ್ ಶಿಕ್ಷಣ ಶಾಲೆ 60 ಎಕರೆ ವಿಸ್ತಾರದ ಭೂಮಿಯಲ್ಲಿ ಸ್ಥಾಪನೆಗೊಂಡಿದ್ದು, ದೇಶದ ನಾನಾ ಭಾಗಗಳಿಂದ ಬಂದ ಸಾವಿರಾರು ಮಕ್ಕಳಿಗೆ ಆಶ್ರಯ ನೀಡಿದೆ. ಎಲ್ಲ ಧರ್ಮ, ಮತ, ಪಂಥ, ಪಂಗಡಗಳಿಗೆ ಸೇರಿದ ಈ ಮಕ್ಕಳನ್ನು ನೋಡುವುದೇ ಚೆಂದ.

ಶಾಲೆಯಲ್ಲಿ ಉತ್ತಮ ಗ್ರಂಥಭಂಡಾರ, ಕಂಪ್ಯೂಟರ್ ಪ್ರಯೋಗಾಲಯ ಮುಂತಾದ ಎಲ್ಲ ಬಗೆಯ ಸೌಕರ್ಯಗಳಿವೆ. ಇದೇ ಆವರಣದಲ್ಲಿ ಬಿಎಡ್, ಡಿಎಡ್ ಮತ್ತು ಡಿಪಿಎಡ್ ಕಾಲೇಜುಗಳೂ ಇವೆ. ರೇಖಾಚಿತ್ರ, ವರ್ಣಚಿತ್ರ, ಮಡಕೆ ಕುಡಿಕೆಗಳ ನಿರ್ಮಾಣ, ತೊಗಲು ಬೊಂಬೆಯಾಟ, ಜನಪದ ಸಂಗೀತ, ಬೀದಿ ನಾಟಕ, ಹೊಲಿಗೆ, ಗೃಹನಿರ್ವಹಣೆ, ತೋಟಗಾರಿಕೆ, ಅಡುಗೆ, ಕೃಷಿ ಮೊದಲಾದ ಅನೇಕ ಕೌಶಲಗಳಲ್ಲಿ ಮಕ್ಕಳಿಗೆ ತರಬೇತಿ ನೀಡಲಾಗುತ್ತದೆ. ಧ್ಯಾನ, ಭಜನೆ, ಪ್ರಾಣಾಯಾಮಾದಿ ಧಾರ್ಮಿಕ ಶಿಕ್ಷಣಕ್ಕೂ ಇಲ್ಲಿ ಅವಕಾಶವಿದೆ. ಬಾಲಕ–ಬಾಲಕಿಯರಿಗೆ ಪ್ರತ್ಯೇಕವಾದ ವಿದ್ಯಾರ್ಥಿನಿಲಯಗಳ ಸೌಲಭ್ಯವಿದೆ.

ಶ್ರೀ ಸಿದ್ಧನಂಜೇಶ ದೇಶಿಕೇಂದ್ರರ ಹೆಸರಿನಲ್ಲಿರುವ ಸಮುದಾಯ ಭವನ ನಿರ್ಮಾಣಗೊಂಡಿದೆ. ಶ್ರೀಕ್ಷೇತ್ರದ ಆಸುಪಾಸಿನ ಊರುಗಳ ಜನತೆಗೆ ತುಂಬ ಉಪಯುಕ್ತವಾಗಿದೆ. ಅಲ್ಲಿಯ ಸಭಾಂಗಣದಲ್ಲಿ ಅನೇಕ ಸಮಾರಂಭಗಳು ವರ್ಷದುದ್ದಕ್ಕೂ ನಡೆಯುತ್ತವೆ.

ಯಾತ್ರಿಗಳ ಸೌಕರ್ಯಕ್ಕಾಗಿ, ಅವರಿಗೆ ವಸತಿ ಒದಗಿಸುವ ಸಲುವಾಗಿ ಮಠವು 'ಶ್ರೀ ರಾಜೇಂದ್ರ ಕೃಪಾ' ಎಂಬ ಅತಿಥಿಗೃಹವನ್ನು ನಿರ್ಮಿಸಿದೆ. ನೂರಕ್ಕೂ ಹೆಚ್ಚು ಮಂದಿ ಅತಿಥಿಗಳಿಗೆ ಅಲ್ಲಿ ಅವಕಾಶವಿದೆ. ಕರ್ನಾಟಕ ಸರ್ಕಾರವೂ ಸಹ ಗಣ್ಯ ವ್ಯಕ್ತಿಗಳಿಗಾಗಿ ಪ್ರತ್ಯೇಕ ಅತಿಥಿಗೃಹವೊಂದನ್ನು ನಿರ್ಮಿಸಿದೆ. ಸುತ್ತೂರು ಪುಣ್ಯ ಯಾತ್ರಾಸ್ಥಳವಾದ್ದರಿಂದ ದೇಶದ ನಾನಾ ಭಾಗಗಳಿಂದ ಪ್ರತಿನಿತ್ಯ ಭಕ್ತರು ಆಗಮಿಸುತ್ತಾರೆ. ಅವರ ಅನುಕೂಲಕ್ಕಾಗಿ ಸುಸಜ್ಜಿತ ದಾಸೋಹ ಭವನವನ್ನು ನಿರ್ಮಿಸಲಾಗಿದೆ.

ಈ ಎಲ್ಲ ಸೌಧಗಳಿಗೆ ಕಿರೀಟಪ್ರಾಯವಾಗಿ, ದಿವ್ಯಾನಂದದ ಚಿಲುಮೆಯಾಗಿ, ಭಕ್ತವೃಂದದ ಆಶೀರ್ವಾದ ಶಕ್ತಿಯಾಗಿ, ಕರ್ನಾಟಕದ ಮಾತ್ರವಲ್ಲ ಭಾರತದ ಆಶ್ರಯ ನಿಧಿಯಾಗಿ, ಆದಿ ಜಗದ್ಗುರು ಶಿವರಾತ್ರೀಶ್ವರ ಶಿವಯೋಗಿ ಮಹಾಸ್ವಾಮಿಗಳ ಮೂಲಗದ್ದುಗೆ ಮಂಗಳದ ನಿಕೇತನವಾಗಿ ರಾರಾಜಿಸುತ್ತಿರುವುದು ಕನ್ನಡಿಗರ ಹೆಮ್ಮೆಯ ಸಂಗತಿಯಾಗಿದೆ.

ಶ್ರೀಮಠ ಹಾಕಿಕೊಂಡಿರುವ ಅನೇಕ ಜನೋಪಯೋಗಿ ಕಾರ್ಯಕ್ರಮಗಳಲ್ಲಿ ಆರೋಗ್ಯ ರಕ್ಷಣೆಯೂ ಒಂದು. ಬೆಂಗಳೂರಿನ ನಾರಾಯಣ ಹೃದಯಾಲಯದ ಸಹಯೋಗದಿಂದ ಸುತ್ತಮುತ್ತಣ ಗ್ರಾಮಗಳ ಕುಟುಂಬಗಳಿಗೆ ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ರೋಗಿಗಳಿಗೆ ಉಚಿತವಾಗಿ ಔಷಧೋಪ ಚಾರವನ್ನು ನೀಡಲಾಗುತ್ತದೆ. ಗ್ರಾಮಸ್ಥರಿಗೆ ಉಚಿತ ದಂತ ಚಿಕಿತ್ಸೆ ನೀಡಲು ಕೋಲ್ಗೇಟ್ ಕಂಪನಿಯ ನೆರವಿನೊಂದಿಗೆ ದಂತ ಚಿಕಿತ್ಸಾಲಯವನ್ನು ಸ್ಥಾಪಿಸಲಾಗಿದೆ.

ಮೌಲಿಕ ಶಿಕ್ಷಣದಲ್ಲಿ ನಿರತವಾಗಿರುವ, ದೇಶದ ಎಲ್ಲ ಭಾಗದ ಮಕ್ಕಳಿಗೆ ಆಶ್ರಯ ವಾಗಿರುವ ಈ ಶಿಕ್ಷಣಕೇಂದ್ರ ಇಡೀ ದೇಶಕ್ಕೆ ಆದರ್ಶವಾಗಿದೆಯೆಂದರೆ ಅತಿಶಯೋಕ್ತಿಯಲ್ಲ.

* * *

## ಜಗಕ್ಕೊಬ್ಬರೆ ಶ್ರೀ ರಾಜೇಂದ್ರ ಮಹಾಸ್ವಾಮಿಗಳು

ಲಿಂಗೈಕ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ನೆನೆದಾಗ ರಾಷ್ಟ್ರಕವಿ ಕುವೆಂಪು ಅವರು ಆಡಿದ ಹೊನ್ನುಡಿಗಳು ಶ್ರೀ ರಾಜೇಂದ್ರ ಮಹಾಸ್ವಾಮಿಗಳ ಅಮೃತ ಮಹೋತ್ಸವ ಸಮಾರಂಭದಲ್ಲಿ ನೆನಪಾಗುತ್ತವೆ. ಆ ನುಡಿಗಳನ್ನು ಕನ್ನಡಿಗರು ಸದಾ ನೆನೆಸಿಕೊಳ್ಳಬೇಕು. ಶ್ರೀ ರಾಜೇಂದ್ರ ಸ್ವಾಮಿಗಳ ತ್ರಿವಿಧ ದಾಸೋಹ ವ್ರತಗಳನ್ನು ಮುಂದುವರಿಸಿದಾಗ ಮಾತ್ರ ಶ್ರೀ ರಾಜೇಂದ್ರ ಸ್ವಾಮಿಗಳ ಆತ್ಮಕ್ಕೆ ಶಾಂತಿ ದೊರಕುತ್ತದೆ.

ಸಹಸ್ರಾರು ವಿದ್ಯಾರ್ಥಿಗಳು ವಾರಾನ್ನ ಭಿಕ್ಷಾನ್ನಗಳಿಂದ ಹೊಟ್ಟೆ ಹೊರೆದುಕೊಂಡು ವಿದ್ಯಾಭ್ಯಾಸವನ್ನು ನಡೆಸಲು ಹೋರಾಡುತ್ತಿರುವಾಗ ತಾವು ಮಾತ್ರ ಬೆಳ್ಳಿ ಪಲ್ಲಕ್ಕಿಯ ಮೇಲೆ ಕುಳಿತು ಚಿನ್ನದ ಕಿರೀಟವನ್ನು ಧರಿಸಿ ಅಡ್ಡಪಲ್ಲಕ್ಕಿ ಉತ್ಸವ ಮಾಡಿಸಿಕೊಳ್ಳುವುದು, ಪಾದಪೂಜೆ ಮಾಡಿಸಿಕೊಳ್ಳುವುದು, ಸಮಾರಾಧನೆಗಳನ್ನು ಏರ್ಪಡಿಸುವಂತೆ ಭಕ್ತಾದಿಗಳನ್ನು ಪ್ರೋತ್ಸಾಹಿಸಿ ಭೂರಿಭೋಜನಗಳನ್ನು ನಡೆಸುವುದು, ಹಲವಾರು ಜಗದ್ಗುರುಗಳ ನಿತ್ಯನಿಯಮವಾಗಿದ್ದ ಕಾಲದಲ್ಲಿ ಅವನ್ನೆಲ್ಲ ಬಹುಮಟ್ಟಿಗೆ ಬದಿಗಿಟ್ಟು ಸಾವಿರ ಸಾವಿರ ಸಂಖ್ಯೆಯ ಬಡ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು ತೆರೆದು, ಉಚಿತವಾಗಿ ಊಟವಸತಿಗಳನ್ನು ಕಲ್ಪಿಸಿ, ಅನಕ್ಷರಸ್ಥರೋ, ಅಲ್ಪವಿದ್ಯಾವಂತರೋ ಆಗಿಯೇ ಉಳಿಯುತ್ತಿದ್ದ ಅನೇಕಾನೇಕ ಮಂದಿಗೆ ಪೂರ್ಣವಿದ್ಯಾವಂತರಾಗುವ ಅವಕಾಶವನ್ನು

ಕಲ್ಪಿಸಿದ ಮಠಾಧೀಶರ ಅಗ್ರಪಂಕ್ತಿಯಲ್ಲಿ ಶ್ರೀ ಸುತ್ತೂರು ಸ್ವಾಮೀಜಿಯವರು ವಿರಾಜಮಾನರಾಗಿದ್ದಾರೆ. ಅಷ್ಟಕ್ಕೆ ನಿಲ್ಲದೆ ನೂರಾರು ಸಂಖ್ಯೆಯಲ್ಲಿ ಶಾಲೆ ಕಾಲೇಜುಗಳನ್ನೂ, ತಾಂತ್ರಿಕ ಶಿಕ್ಷಣಾಲಯಗಳನ್ನೂ ತೆರೆದು, ವಿದ್ಯಾಭ್ಯಾಸದ ದಿಗಂತಗಳನ್ನು ಅವರು ವಿಸ್ತರಿಸಿದ್ದಾರೆ. ಜನಸಾಮಾನ್ಯರ ಮನೆಬಾಗಿಲಿಗೆ ಅನರ್ಘ್ಯವಾದ ಜ್ಞಾನವನ್ನು ಒಯ್ಯದೆ ಅವರನ್ನು ನಿರಂತರವಾಗಿ ಅಜ್ಞಾನದಲ್ಲಿ ಉಳಿಸುವುದು ಅಕ್ಷಮ್ಯವಾದ ಅಪರಾಧ. ಇಂತಹ ಅಪರಾಧವನ್ನು ತೊಡೆದುಹಾಕಲೋ ಎಂಬಂತೆ ಅನ್ನದಾಸೋಹ ಜ್ಞಾನದಾಸೋಹಗಳ ಉಜ್ವಲ ಕಾಯಕದಲ್ಲಿ ತೊಡಗಿರುವ ಶ್ರೀಗಳು ಆದರಣೀಯರೂ, ಅಭಿನಂದನೀಯರೂ ಆಗಿದ್ದಾರೆ! ಲೋಕದಲ್ಲಿ ಸನ್ಯಾಸಧರ್ಮಕ್ಕೆ ಹೊಸ ಭಾಷ್ಯವನ್ನು ಬರೆದ, ಬರೆದು ಆಚರಿಸಿದ ಮಹಾನುಭಾವಿಗಳು ಎಂದು ಕುವೆಂಪು ಅವರು ಪ್ರಶಂಸಿಸಿದ್ದಾರೆ.

'ಪರಮಪೂಜ್ಯ ರಾಜಗುರುತಿಲಕ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ನೆನೆಯುವುದು ಎಂದರೆ ಅದೊಂದು ಚಿರನೂತನ ಅದ್ಭುತ ಅನುಭವ, ಹುಣ್ಣಿಮೆಯ ಚಂದ್ರನಂತೆ ಸದಾ ಹಸನ್ಮುಖಿಗಳು. ಅವರ ಮನ ಮಲ್ಲಿಗೆಯಂತೆ, ಸದಾ ಇತರರ ನೋವು-ನಲಿವುಗಳ ಬಗ್ಗೆಯೇ ಗಮನ. ಸಾಮಾನ್ಯರಿಂದ ಮಹಾಪ್ರಭುಗಳವರೆಗೆ ಎಲ್ಲರನ್ನೂ ಸಮಾನವಾಗಿ ಎದೆಗಪ್ಪಿ ಹಿಡಿಯುವ ಮಾತೃವಾತ್ಸಲ್ಯದ ಖನಿ. ನಿಂದಿಸಿದವರನ್ನೂ, ವಿನಾಕಾರಣ ವಿರೋಧಿಸಿದವರನ್ನೂ ಮಮತೆಯ ಮಹಾಪೂರದಲ್ಲಿ ಮೀಯಿಸುವ ಭಾವಜೀವಿ. ಒಂದು ಗಂಟೆಯಾಗಲಿ ವರ್ಷವಾಗಲಿ ಅನಂತಕಾಲವಾಗಲಿ ಅವರ ಸಂಪರ್ಕಕ್ಕೆ ಬಂದವರು ಅವರನ್ನು ಮರೆಯಲು ಸಾಧ್ಯವೇ ಇಲ್ಲ. ಅಹಂಕಾರ ಮಮಕಾರಗಳು ಅವರತ್ತ ಎಂದೂ ಸುಳಿಯಲಿಲ್ಲ. ದೈವಶಕ್ತಿ, ತಪೋನಿಷ್ಠೆ, ಅಧ್ಯಾತ್ಮಜೀವನದಲ್ಲಿ ಬಾನೆತ್ತರ ತಲುಪಿದರೂ ಅಲ್ಲಿ ನೆಲೆ ನಿಲ್ಲದೆ, ದೀನ-ಅನಾಥರ ಮುರುಕು ಮನೆ-ಮನಗಳನ್ನು ಮೇಲೆತ್ತಲು ಭುವಿಗಿಳಿದ ಕಾರುಣ್ಯಮೂರ್ತಿ. ಸುತ್ತೂರು ಗುರುಪರಂಪರೆಯ ಮಹಾವೃಕ್ಷದಲ್ಲಿ ಮೂಡಿದ ಅಮೃತಫಲ. ಒಂದು ಮಾತಿನಲ್ಲಿ ಹೇಳುವುದಾದರೆ, ಅವರಂತಹವರು ಹಿಂದೆ ಇದ್ದದ್ದು ಗೊತ್ತಿಲ್ಲ. ಅವರ ಸಮಕಾಲೀನರಾಗಿ ಅವರೊಬ್ಬರೇ ಅವರಿಗೆ ಸಮ. ವಿಶ್ವದ ಎಲ್ಲ ಮಾನವೀಯತೆಯ ಸದ್ಗುಣಗಳನ್ನು ಒಂದೆಡೆ ರಾಶಿಯಾಗಿ ಸುರಿದರೂ ಅದು ಪೂಜ್ಯರಿಗೆ ಸಾಟಿಯಲ್ಲ. ಈ ಮಾತು ಹೊಗಳಿಕೆಯಲ್ಲ, ಸಹಜ ಸತ್ಯ. ಹೀಗೆ ವರ್ಣಿಸಿದವರು ಶ್ರೀ ಬೇಲಿಮಠದ ಶಿವರುದ್ರ ಮಹಾಸ್ವಾಮಿಗಳು.

ಸ್ವಾಮೀಜಿಗಳು ಲಕ್ಷ ಲಕ್ಷ ವಿದ್ಯಾರ್ಥಿಗಳಿಗೆ ಊಟ ವಸತಿ ಏರ್ಪಾಟು ಮಾಡುವಾಗ ಸ್ವತಃ ಎಂಥ ದೈಹಿಕ, ಮಾನಸಿಕ, ಆರ್ಥಿಕ ಸಂಕಷ್ಟಗಳನ್ನು ಅನುಭವಿಸಿದರೆಂಬುದನ್ನು ಗಮನಿಸಿದರೆ, ಭಕ್ತವತ್ಸಲನಾದ ಭಗವಂತ ಬುವಿಗೆ ಇಳಿದು ಬಂದು ಆ ಭಕ್ತರ

ಸಂಕಷ್ಟಗಳನ್ನು ತಾನೇ ಅನುಭವಿಸಬೇಕೆಂಬ ಶ್ರೀ ಅರವಿಂದರ ಮಾತಿಗೆ ಶ್ರೀ ರಾಜೇಂದ್ರ ಮಹಾಸ್ವಾಮಿಗಳು ಪ್ರತ್ಯಕ್ಷ ನಿದರ್ಶನವಾಗಿದ್ದಾರೆ ಎಂದು ನುಡಿದವರು ಶ್ರೀ ಕೋಚೆಯವರು. ಅವರು ಮಾನವೀಯ ಪ್ರೀತಿ, ಕರ್ತೃತ್ವಶಕ್ತಿ ಮತ್ತು ದೂರದರ್ಶಿತ್ವಗಳ ತ್ರಿವೇಣೀಸಂಗಮವೆಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನಗಳ ಮೇಲಣ ಪ್ರೇಮ ಅತಿಶಯವಾದದ್ದು. ಜನರಲ್ಲಿ ಅಡಗಿರುವ ದೈವತ್ವದ ವಿಕಾಸಕ್ಕೆ ನೆರವಾಗುವುದೆ ಸದ್ಧರ್ಮ ಎಂಬುದು ಗುರುಗಳ ಭಾವನೆ.

"ಪೂಜ್ಯ ಶ್ರೀಗಳ ದರ್ಶನ ಅದೊಂದು ಪರಮಾನಂದವನ್ನುಂಟುಮಾಡುವ ಚಿರಸ್ಮರಣೀಯ ಅನುಭವ. ಅವರ ವ್ಯಕ್ತಿತ್ವದ ಆಕರ್ಷಣೆಯೇ ಅಂಥದು. ಸಾವಿರ ಜನರ ಸಮುದಾಯದಲ್ಲಿಯೂ ಎದ್ದುಕಾಣುವ ಶ್ರೀಮಂತ ಆಕೃತಿ. ಸುಂದರವೂ ಭವ್ಯವೂ ಗಂಭೀರವೂ ಆದ ಮುಖಮಂಡಲ. ಕಾಂತಿಯುತವಾದ ಕಣ್ಣುಗಳು. ಪ್ರಶಾಂತವಾದ ದೃಷ್ಟಿ. ಮುಖದ ಗಾಂಭೀರ್ಯವನ್ನು ಹೆಚ್ಚಿಸುವ ಹಣೆಯ ಮೇಲಿನ ವಿಭೂತಿ. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಮನದಿಂದ ಹೊರಹೊಮ್ಮುವ ಕರುಣೆಯ ದೃಷ್ಟಿ. ಇವುಗಳಿಂದ ದರ್ಶನ ಪಡೆದವರಿಗೆ ಪುನೀತರಾದೆವೆಂಬ ಭಾವನೆ ತಾನಾಗಿಯೇ ಮೂಡುತ್ತದೆ. ಇಂಥ ಉಜ್ವಲ ಮೂರ್ತಿಯಾದ ಮಹಾಸ್ವಾಮಿಗಳು ಬಹು ದಿವಸ ಬಾಳಿ ಸಮಾಜವನ್ನು ಉದ್ಧರಿಸಲೆಂದು ದಯಾಮಯನಾದ ದೇವನಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತೇನೆ" ಎಂದವರು ಶ್ರೀ ಸದಾಶಿವ ಒಡೆಯರು.

"ಅವರು ಎಂದೂ ತಮ್ಮನ್ನು ಪರಮಾತ್ಮನ ಅವತಾರವೆಂದಾಗಲಿ, ತಮ್ಮ ತಪಶ್ಶಕ್ತಿಯಿಂದ ಆಶೀರ್ವಾದದಿಂದ ಜನತೆಯನ್ನು ಉದ್ಧಾರ ಮಾಡುತ್ತೇನೆ ಎಂದಾಗಲಿ ಭಾವಿಸಿದವರಲ್ಲ; ವಸ್ತುಗಳನ್ನು ಮಂತ್ರಿಸಿಕೊಟ್ಟವರಲ್ಲ; ಅಂಗೈಯಲ್ಲಿ ಲಿಂಗ ಸೃಷ್ಟಿಸಿಕೊಟ್ಟವರಲ್ಲ – ಯಾವೊಂದು ಪವಾಡವನ್ನು ಮಾಡಿದವರಲ್ಲಾ. ಆದಿ ಭಗವತ್ಪಾದರನ್ನು ಸ್ಮರಿಸಿ, ನಿಮಗೆ ಒಳಿತಾಗಲಿ ಎನ್ನುತ್ತಿದ್ದರು. ಹಣ್ಣನ್ನು ಕೊಡುತ್ತಿದ್ದರು; ಅವರ ಪ್ರಾಂಜಲ ಮುಖಮಂಡಲವೇ ನಮಗೆ ದಾರಿದೀಪ" ಎಂಬುದು ಎ.ಎಸ್. ಜಯರಾಂ ಅವರ ಅಭಿಮತ.

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಒಂದು ವಿಶಿಷ್ಟಾರ್ಥದಲ್ಲಿ ಹುಟ್ಟು ಪ್ರತಿಭಾವಂತರು. ಇದರ ಜತೆಗೆ ಪೂರಕವಾಗಿ, ಪ್ರಾಯಶಃ ಅವರಿಗೆ ದೈವದತ್ತವಾಗಿ ಲಭಿಸಿದ ಅನನ್ಯ ಮಾನವೀಯ ಗುಣಗಳು ಒಂದು ಕಡೆ, ಇವಿಷ್ಟರಿಂದಲೇ ಒಬ್ಬರು ಮಹಾವ್ಯಕ್ತಿಯಾಗಲಾರರು. ಪ್ರತಿಭೆ ಮತ್ತು ಮಾನವೀಯ ಗುಣಗಳು ಲೋಕಸೇವೆ ಮಾಡುವ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಬೇಕಾದರೆ ಆ ವ್ಯಕ್ತಿಯಲ್ಲಿ ಕ್ರಾಂತದರ್ಶಿಯ ಅದಮ್ಯ ಚೈತನ್ಯ, ಹಂಬಲ, ನಿಸ್ವಾರ್ಥತೆ, ಅರ್ಪಣಾಮನೋಭಾವ, ಅಹರ್ನಿಶಿ ದುಡಿಯುವ ಮನಸ್ಸು, ವೈಯಕ್ತಿಕ ಸುಖದುಃಖಗಳನ್ನು ಕಡೆಗಣಿಸುವಿಕೆ, ನಿರ್ಲಿಪ್ತತೆ, ಔದಾರ್ಯ,

ದೂರದರ್ಶಿತ್ವ, ಪರಹಿತವನ್ನೇ ಬಯಸುವ ಕಳಕಳಿ ಮುಂತಾದ ಗುಣಗಳು ಹೆಚ್ಚೇ ಎನ್ನುವಷ್ಟೇ ಇರಬೇಕು. ವಾಸ್ತವವಾಗಿ ಇವುಗಳೇ ನಿಜವಾದ ಕ್ರಾಂತಿಕಾರಿಯಲ್ಲಿ ಕಾಣಬರುವ ಮತ್ತು ಕಾಣಬೇಕಾದ ಗುಣಗಳು. ಅವರ ಅಂತರಂಗ ಪ್ರೇರಣೆಯೇ ಅವರ ಎಲ್ಲ ಸಾಹಸ ಪ್ರಯತ್ನಗಳಿಗೆ ಕಾರಣವೆನ್ನಬಹುದು. ಅವರ ಅಂತರಂಗದಲ್ಲಿ ನಿತ್ಯನಿವಾಸಿಯಾದ ಶಿವನೇ ಇಷ್ಟಕ್ಕೆಲ್ಲ ಕಾರಣವಿರಬೇಕು ಎಂದು ನುಡಿದವರು ಪ್ರೊ. ಚಂದ್ರಶೇಖರಯ್ಯನವರು.

ಶ್ರೀಗಳವರು ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕೈಗೊಂಡ ಹಲವಾರು ದಿಟ್ಟ ಯೋಜನೆಗಳ ಫಲವಾಗಿ ಇಂದು ಸಹಸ್ರಾರು ಮನೆಗಳಲ್ಲಿ ದೀಪ ಬೆಳಗಿದೆ. ಅಸಂಖ್ಯಾತ ಯುವಪೀಳಿಗೆಯ ಕಣ್ಣುಗಳಲ್ಲಿ ಕಾಂತಿ ಮೂಡಿದೆ. ಬುದ್ಧ, ಕ್ರಿಸ್ತ, ಬಸವಣ್ಣ, ವಿವೇಕಾನಂದ, ಗಾಂಧೀಜಿ ಮೊದಲಾದ ವಿಭೂತಿಪುರುಷರಂತೆ ಪೂಜ್ಯರ ಜೀವಿತಾವಧಿಯ ಸಾಧನೆಯ ಜೊತೆಗೆ ಅವರು ತಮ್ಮ ಸಂಪರ್ಕಕ್ಕೆ ಬಂದ ಸಾಮಾಜಿಕರ, ಪ್ರಭಾವಿತರ, ಅಂತರಾಳವನ್ನು ವ್ಯಾಪಿಸಿ, ಸ್ಫೂರ್ತಿಯ ಚಿಲುಮೆಯಾಗಿ, ಶ್ರೀಗಂಧದ ಪರಿಮಳವಾಗಿ ಬೆಳಕಾಗಿ ಕಂಡುಬರುತ್ತಿರುವುದು ನಮ್ಮಲ್ಲಿ ಅನೇಕರಿಗೆ ಅನುಭವಗಮ್ಯ ವಿಷಯವಾಗಿದೆ.

ಜಗತ್ತಿನ ವಿಭೂತಿಪುರುಷರಲ್ಲಿ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಹೆಸರು ಕರ್ನಾಟಕದಲ್ಲಿ ಸೂರ್ಯಚಂದ್ರರಿರುವತನಕ ಚಿರಸ್ಥಾಯಿಯಾಗಿ ಉಳಿಯುತ್ತದೆ. ಇಂಡಿಯದ ದುಃಸ್ಥಿತಿಯ ಬಗ್ಗೆ ಅಪಾರ ಕಾಳಜಿಯಿತ್ತು. ಅಜ್ಞಾನ, ದಾರಿದ್ರ್ಯ, ಜಾತೀಯತೆಗಳೇ ಇಂಡಿಯಾದ ರೋಗಗಳೆಂದು, ಅದರ ಅವನತಿಗೆ ಇವೇ ಕಾರಣವೆಂದು ಗರುಡದೃಷ್ಟಿಯ ಆ ಮಹಾತಪಸ್ವಿಗೆ ಮನವರಿಕೆಯಾಗಿತ್ತು. ಆ ರೋಗಗಳು ನಿರ್ಮೂಲನ ವಾದಲ್ಲದೆ, ದೇಶದ ದುರ್ಗತಿಗೆ ಪರಿಹಾರವಿಲ್ಲವೆಂಬ ಸಂಗತಿ ಆ ದೇಶಭಕ್ತರಿಗೆ ಅರಿವಾಗಿತ್ತು. ಆ ರೋಗಗಳ ಮೂಲೋತ್ಪಾಟನೆಗಾಗಿ ಅವರು ಕೈಗೊಂಡ ಯೋಜನೆಗಳು, ಪಟ್ಟ ಶ್ರಮಗಳು ಅಭೂತಪೂರ್ವವೂ, ಅಸಾಧಾರಣವೂ ಆದಂತಹವು. ತಮ್ಮ ಮಠದ ಪರಂಪರೆಗೆ ಇದ್ದ ಶ್ರೀಮಂತಿಕೆ ಧಾರ್ಮಿಕ ಮುಂದಾಳತ್ವವನ್ನು ಉಪಯೋಗಿಸಿಕೊಂಡು ಸುಖದ ಸುಪ್ಪತ್ತಿಗೆಯಲ್ಲಿ ಒರಗಬಹುದಾಗಿದ್ದ ಶ್ರೀ ರಾಜೇಂದ್ರ ಸ್ವಾಮಿಗಳು ಗಾಳಿ, ನೀರುಗಳನ್ನುಂಡು, ದೇಹವನ್ನು ಸವೆಸಿ, ಮಳೆಬಿಸಿಲೆನ್ನದೆ ಊರೂರು ತಿರುಗಿ, ಭಿಕ್ಷೆಯೆತ್ತಿ, ಸಾವಿರಾರು ಹಸಿದ ಮಕ್ಕಳಿಗೆ ಅನ್ನ ನೀಡಿ, ವಿದ್ಯಾಭ್ಯಾಸವನ್ನು ನೀಡಿ, ಅವರನ್ನು ಮಾತ್ರವಲ್ಲ, ಅವರ ವಂಶವನ್ನೇ ಉದ್ಧಾರ ಮಾಡಿದ ದೈವಸ್ವರೂಪರು. ಅಂಥ ಆ ಮಹಾನುಭಾವರನ್ನು ಅವರಿಂದ ಉಪಕೃತರಾದ ಶಿಷ್ಯವೃಂದ ಕೃತಜ್ಞತೆಯಿಂದ ಹೊಗಳುವುದು ಸಹಜವೆ. ಅವರು 'ಜಗವೆಲ್ಲ ನಗುತಿರಲಿ, ಜಗದಳುವು ಎನಗಿರಲಿ' ಎಂದು ಶಪಥಗೈದು, ತಮ್ಮ ಸುತ್ತಮುತ್ತಣ ಸಮಾಜವನ್ನು ಶಿವಮಯವನ್ನಾಗಿ ಪರಿವರ್ತಿಸಿದ ಜಾದೂಗಾರರು. ಅವರ ಸಾಧನೆ, ಸಿದ್ಧಿಗಳ ಮಹತ್ತು ಬೃಹತ್ತುಗಳನ್ನು ನೋಡಿದಾಗ ಶಿವನೇ ಅವರೊಳಗಿದ್ದುಕೊಂಡು ನಾನಾ ಅದ್ಭುತಗಳನ್ನು ಮೆರೆದಿರಬೇಕೆಂದು ತೋರುತ್ತದೆ.

ಇಂಥ ಮಹಾಪುರುಷರು ಇದ್ದದ್ದರಿಂದಲೇ ಜಗತ್ತಿನಲ್ಲಿ ಧರ್ಮಕ್ಕೆ ಚ್ಯುತಿಯಿಲ್ಲ. ಇಂಥವರನ್ನು ಜನ ಏಕಕಂಠದಿಂದ ಹೊಗಳಿದರೆ, ಆ ಹೊಗಳಿಕೆ ಗುರುಗಳಿಗೆ ನಿವೇದಿಸಿದ ನೈವೇದ್ಯವಾಗುತ್ತದೆ; ತಮ್ಮ ಋಣವನ್ನು ಪರಿಹರಿಸಿಕೊಳ್ಳುವ ಹವಣಾಗುತ್ತದೆ.

ಶ್ರೀ ರಾಜೇಂದ್ರ ಸ್ವಾಮಿಗಳವರು ಆ ಜಾತಿ ಈ ಜಾತಿಯೆಂದು ಜಾತಿಭೇದ ಮಾಡಿದವರಲ್ಲ. ಬಡತನ ಎಲ್ಲ ಜಾತಿಗಳಿಗೂ ಶತ್ರು ಎಂಬುದವರಿಗೆ ಗೊತ್ತಿತ್ತು. 'ನಮ್ಮ ಮಠಕ್ಕೆ ಎಲ್ಲ ಜಾತಿಯ ಜನರೂ ನಡೆದುಕೊಳ್ಳುತ್ತಾರೆ. ಎಲ್ಲರೂ ಉದಾರವಾಗಿ ಕಾಣಿಕೆ ಕೊಡುತ್ತಾರೆ. ಲಿಂಗಾಯತರಲ್ಲದವರೇ ಬಹು ಸಂಖ್ಯೆಯಲ್ಲಿರುವ ಈ ಪ್ರದೇಶದಲ್ಲಿ ಅವರೇ ಬಹುಸಂಖ್ಯಾತ ಶಿಷ್ಯರಿರುವುದು ಸಹಜ' ಎಂದು ಗುರುಗಳೊಮ್ಮೆ ಅಪ್ಪಣೆ ಕೊಡಿಸಿದ್ದುಂಟು. ಶ್ರೀಗಳೊಮ್ಮೆ ಹೇಳಿದ್ದುಂಟು: 'ನಮಗೆ ಸನ್ಯಾಸಿಗಳಿಗೆ ಯಾವ ಜಾತಿಯ ಬಂಧನವೂ ಇಲ್ಲ. ಯಾರ ಹೊಟ್ಟೆಯಲ್ಲಿ ಹುಟ್ಟಿದ್ದೇವೆಯೋ ಅವರೇ ನಮಗೆ ಸಂಬಂಧವಿಲ್ಲದವರಾಗಿ ಹೋಗುತ್ತಾರೆ; ಅವರ ಮನೆತನಕ್ಕೆ ಹೊರಗಾಗಿಬಿಡುತ್ತೇವೆ. ಆದ್ದರಿಂದ ನಮಗೆ ಎಲ್ಲರೂ ಬೇಕು; ನಾವು ಎಲ್ಲರಿಗೂ ಬೇಕು' ಎಂಬ ಅವರ ಮಾತಿನಲ್ಲಿ ಸನ್ಯಾಸಿಯ ಗುಣಧರ್ಮಗಳು ಸೂತ್ರಪ್ರಾಯವಾಗಿ ಹೊರಹೊಮ್ಮುತ್ತವೆ.

ಶ್ರೀ ರಾಜೇಂದ್ರ ಸ್ವಾಮಿಗಳು ಯಾವತ್ತೂ ಉಡುಗೆತೊಡುಗೆ ಬಿರುದುಬಾವಲಿಗಳ ಮೂಲಕ, ಸ್ವಪ್ರಶಂಸೆಯ ಮೂಲಕ ತಮ್ಮ ದೊಡ್ಡಸ್ತಿಕೆಯನ್ನು ಡಂಗುರ ಸಾರಿಸಿಕೊಂಡವರಲ್ಲ. ಸಾಮಾನ್ಯರಲ್ಲಿ ಸಾಮಾನ್ಯರಾಗಿ ಜನರೊಡನೆ ವ್ಯವಹರಿಸು ತ್ತಿದ್ದುದರಿಂದಲೇ ಅವರು ಎಲ್ಲರಿಗೂ ಪೂಜ್ಯರಾದರು.

ಆನೆಯನೇರಿಕೊಂಡು ಹೋದಿರೇ ನೀವು
ಕುದುರೆಯನೇರಿಕೊಂಡು ಹೋದಿರೇ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೇ ಅಣ್ಣಾ
ಸತ್ಯದ ನಿಲುವನರಿಯಲಾರದೆ ಹೋದಿರಲ್ಲಾ!
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ
ಅಹಂಕಾರವೆಂಬ ಸದಮದಗಜವನೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ!
ನಮ್ಮ ಕೂಡಲಸಂಗಮದೇವರನರಿಯದೆ
ನರಕಕ್ಕೆ ಭಾಜನರಾದಿರಲ್ಲಾ!

ಬಸವೇಶ್ವರರ ಈ ವಚನದ ಅರ್ಥವನ್ನು ಸಂಪೂರ್ಣವಾಗಿ ಗ್ರಹಿಸಿ, ಸಾಮಾನ್ಯರಂತೆ ನಡೆದವರು. ಕುಂಕುಮ ಕಸ್ತೂರಿಯನ್ನು ಅವರು ಕಂಡರಿಯರು. ಅಹಂಕಾರವೇನೆಂಬುದೇ ಅವರಿಗೆ ಗೊತ್ತಿಲ್ಲ. ಸದ್ಗುಣ ಹೊರತಾಗಿ ದುರ್ಗುಣವೇನೆಂಬುದೇ ಅವರಿಗೆ ಗೊತ್ತಿಲ್ಲ. ಇಂಥ ವ್ಯಕ್ತಿಯನ್ನು ಕಂಡಿದ್ದರೆ ಬಸವೇಶ್ವರರು ಅಪ್ಪಿಕೊಳ್ಳುತ್ತಿದ್ದರು. ಶ್ರೀ ರಾಜೇಂದ್ರ ಪ್ರಭುಗಳಂಥ ಶರಣರು ಯಾವ ಕಾಲದಲ್ಲಾದರೂ ದುರ್ಲಭವೇ. ಅವರು ಸದಾ

ಖಾದಿಯನ್ನೆ ಧರಿಸುತ್ತಿದ್ದರು; ಸರಳ ಸಜ್ಜನಿಕೆಗೆ ಮಹಾ ಆದರ್ಶಪ್ರಾಯವಾಗಿದ್ದರು.

ಜನಸಾಮಾನ್ಯರು ಸ್ವಾಮಿಗಳನ್ನು ಭೇಟಿಯಾದಾಗ ಅವರ ಪಾದಗಳಿಗೆ ನಮಸ್ಕರಿಸುವುದು ಸಾವಿರಾರು ವರ್ಷಗಳಿಂದ ನಮ್ಮಲ್ಲಿ ನಡೆದುಬಂದಿರುವ ರೂಢಿ. ಹೊರಗಿನವರು, ಅಭ್ಯಾಸವಿಲ್ಲದವರು, ವಿಚಾರವಂತರು ಸಾಮಾನ್ಯವಾಗಿ ಆ ಪದ್ಧತಿಯನ್ನು ಪರಿಪಾಲಿಸುವುದಿಲ್ಲ. ಕೆಲವರು ಅವರಿಗೆ ಕೈಮುಗಿದು 'ತಾವು ಕ್ಷಮಿಸಬೇಕು. ಕಾಲಿಗೆ ಬೀಳುವುದರಲ್ಲಿ ನಮಗೆ ವಿಶ್ವಾಸವಿಲ್ಲ' ಎಂದು ಹೇಳಿದಾಗ, ಸ್ವಾಮಿಗಳು ಹಸನ್ಮುಖರಾಗಿಯೇ 'ಬಹಳ ಒಳ್ಳೆಯದು. ನಮಗೂ ಅದರಲ್ಲಿ ವಿಶ್ವಾಸವಿಲ್ಲ, ಕಾಲಿಗೆರಗಿದಾಗೆಲ್ಲ ನಮಗೆ ಹಿಂಸೆಯಾಗುತ್ತದೆ' ಎಂದು ಮನಸ್ಸಿನಲ್ಲೇನೂ ಇಟ್ಟುಕೊಳ್ಳದೆ ನೇರವಾಗಿ ನುಡಿಯುತ್ತಿದ್ದರು. ಇಂಥವರು ಅಪರೂಪ. ಹಿಂದಿನ ಕಂದಾಚಾರಗಳ ಬಗ್ಗೆ ಅವರು ದಿವ್ಯ ನಿರ್ಲಕ್ಷ್ಯದಿಂದಿದ್ದರು.

ಪ್ರಖ್ಯಾತ ವಕೀಲರಾಗಿದ್ದ ನಾಗರಾಜು ಎಂಬುವರನ್ನು ಯಾವುದೋ ಆಸ್ತಿಯ ಬಗ್ಗೆ ಚರ್ಚೆ ನಡೆಸಲು ಸ್ವಾಮೀಜಿ ಒಮ್ಮೆ ಬರಮಾಡಿಕೊಳ್ಳುತ್ತಾರೆ. ಸ್ವಾಮಿಗಳಿಗೆ ನಮಸ್ಕಾರ ಮಾಡಿ ಅಭ್ಯಾಸವಿಲ್ಲದಿದ್ದರೂ, ಅವರನ್ನು ನೋಡಿದ ಕೂಡಲೇ ವಕೀಲರು ದೀರ್ಘದಂಡ ನಮಸ್ಕಾರ ಮಾಡುತ್ತಾರೆ. ಅದಕ್ಕೆ ಮಹಾಸ್ವಾಮಿಗಳು 'ನಾಗರಾಜು ಅವರೆ, ನಿಮ್ಮ ಪದ್ಧತಿಗೆ ವಿರುದ್ಧ ಹೋಗಬೇಡಿ. ಬಂದವರೆಲ್ಲ ನಮಸ್ಕಾರ ಮಾಡಬೇಕೆಂಬ ನಿಯಮವಿಲ್ಲ. ನಮಸ್ಕಾರ ಮಾಡಿದವರೂ ನಮ್ಮ ಭಕ್ತರೆ, ನಮಸ್ಕಾರ ಮಾಡದವರೂ ನಮ್ಮ ಭಕ್ತರೆ. ಹೊಗಳಿದವರೂ ನಮ್ಮ ಭಕ್ತರೆ, ತೆಗಳಿದವರೂ ನಮ್ಮ ಭಕ್ತರೆ' ಎಂದು ಸ್ವಾಮಿಗಳು ನುಡಿದು ಅವರನ್ನು ತಮ್ಮ ಬಳಿ ಕೂರಿಸಿಕೊಳ್ಳುತ್ತಾರೆ. ನಾಗರಾಜು ಅವರು ಹೊರಗಡೆ ಬಂದ ಮೇಲೆ ಸ್ವಾಮಿಗಳ ಹಿರಿಮೆಯನ್ನು ನೆನೆಯುತ್ತ 'ಸ್ವಾಮಿಗಳು ಎಷ್ಟು ದೊಡ್ಡವರು, ಅವರಿಗೆ ನಮಸ್ಕರಿಸಿ ನಾನು ಪುನೀತನಾದೆ' ಎಂದು ಹೇಳುತ್ತ, ಕಣ್ಣಲ್ಲಿ ನೀರು ಸುರಿಸುತ್ತಾರೆ.

ವಿದ್ಯಾರ್ಥಿಗಳ ಬಗೆಗಿದ್ದ ಅವರ ಅಪಾರ ಪ್ರೀತಿಯ ಬಗ್ಗೆ ಒಂದು ಉದಾಹರಣೆ ನೀಡಬಹುದು. ಶ್ರೀ ಎಂ. ಮಹದೇವಪ್ಪ ಎನ್ನುವರೊಬ್ಬರು ಎಂ.ಎ. ತರಗತಿಯಲ್ಲಿ ಓದುತ್ತಿದ್ದರು. ಆ ಸಂದರ್ಭದಲ್ಲಿ ಉನ್ನತ ಅಧಿಕಾರಿಯೊಬ್ಬರು ತಮ್ಮ ಪುತ್ರಿಯ ವಿವಾಹ ನಿಶ್ಚಯಿಸಿ, ವಿದ್ಯಾರ್ಥಿನಿಲಯದ ಪ್ರಧಾನ ಕಟ್ಟಡದಲ್ಲಿ ಲಗ್ನ ಮಾಡಲು ನಿರ್ಧರಿಸಿ, ಸ್ವಾಮಿಗಳ ಅನುಮತಿಯನ್ನು ಪಡೆಯುತ್ತಾರೆ. ಮಹದೇವಪ್ಪನವರಿದ್ದ ಕೊಠಡಿಯನ್ನು ಖಾಲಿ ಮಾಡಿಸಿಕೊಡಬೇಕೆಂದು ಅವರು ಸ್ವಾಮೀಜಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಾರೆ. ಸ್ವಾಮೀಜಿ ಮಹದೇವಪ್ಪನವರನ್ನು ಕರೆಯಿಸಿ 'ಮದುವೆಗೆ ತೊಂದರೆ ಮಾಡಬಾರದು. ನೀನಿರುವ ಕೋಣೆಯನ್ನವರಿಗೆ ಬಿಟ್ಟುಕೊಡು. ನಿನಗೆ ಒಂದೆರಡು ದಿನ ಅನಾನುಕೂಲ ವಾಗದ ಹಾಗೆ ವ್ಯವಸ್ಥೆ ಮಾಡಿಕೊಡುತ್ತೇನೆ' ಎಂದು ಎಷ್ಟು ಬಗೆಯಾಗಿ ಹೇಳಿದರೂ

ಆತ ಅದಕ್ಕೆ ಒಪ್ಪಲಿಲ್ಲ. ಆ ವಿದ್ಯಾರ್ಥಿ ಅಹಂಕಾರಿಯೆಂದು, ಅವಿಧೇಯನೆಂದು ಸುತ್ತಣವರು ಸ್ವಾಮೀಜಿಗೆ ಹೇಳಿ, ಅವನನ್ನು ವಿದ್ಯಾರ್ಥಿನಿಲಯದಿಂದ ಕಳಿಸಿಬಿಡುವಂತೆ ಸ್ವಾಮೀಜಿಯವರಿಗೆ ಒತ್ತಾಯಿಸುತ್ತಾರೆ. ಆದರೆ ಸ್ವಾಮೀಜಿ ಅವರ ಮಾತುಗಳಿಗೆ ಸೊಪ್ಪುಹಾಕುವುದಿಲ್ಲ. 'ಆ ಹುಡುಗ ಅವಿಧೇಯನಲ್ಲ. ತನ್ನ ಓದಿಗೆ ತೊಂದರೆಯಾಗುತ್ತದೆಂದು ಆತ ಹೇಳಿದ್ದರಲ್ಲಿ ಏನೂ ತಪ್ಪಿಲ್ಲ' ಎಂದು ಅವರು ವಿದ್ಯಾರ್ಥಿಯ ಪರ ವಹಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳ ಬಗ್ಗೆ ಅವರಿಗೆ ಎಷ್ಟೊಂದು ವಾತ್ಸಲ್ಯವಿತ್ತೆಂಬುದು ಈ ಘಟನೆಯಿಂದ ವ್ಯಕ್ತವಾಗುತ್ತದೆ. ಮುಖದಲ್ಲಿ ಮಂದಹಾಸ, ಅಂತರಂಗದಲ್ಲಿ ನಿರ್ಮಲಭಾವದಿಂದೊಡಗೂಡಿದ ಪ್ರೀತಿ, ಸದಾ ಲೋಕಕಲ್ಯಾಣಪರ ಚಿಂತನೆ, ಮೃದುಮಾತಿನ ಚೇತನ, ಇಂಥ ವ್ಯಕ್ತಿ ಎಲ್ಲರಿಗೂ ಆರಾಧ್ಯದೇವರಾದದ್ದು ಆಶ್ಚರ್ಯವಲ್ಲ. ಮಾನವೀಯತೆಯೇ ಸಾಕಾರಗೊಂಡಂತಿದ್ದ ಅವರ ಹೃದಯದಂಗಳ ದಿಕ್ಕುಗೆಟ್ಟವರಿಗೆ ಆಶ್ರಯಸ್ಥಾನವಾಗಿತ್ತು.

> ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ!
> ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ

ಎಂಬ ಬಸವ ವಚನ ಅವರ ಬದುಕಿನ ಉಸಿರಾಗಿತ್ತು. ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆ ಸ್ವಾಮೀಜಿಗೆ ಅತೀವ ಮಮತೆ. ಅವರ ಕೃಪಾಶೀರ್ವಾದ ಪರಿವೇಷದೊಳಗೆ ಪ್ರವೇಶಿಸಿದ ನಂತರ, ಅವರ ನ್ಯೂನತೆ ದೌರ್ಬಲಗಳನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಕಂಡರೂ ಕಾಣದಂತಿರುತ್ತಿದ್ದರು. ಸಾಹಿತ್ಯ, ಸಂಗೀತ, ನಾಟಕ ಮೊದಲಾದ ಲಲಿತಕಲೆಗಳಿಗೆ ಅವರು ಅಪಾರ ಪ್ರೋತ್ಸಾಹ ನೀಡುತ್ತಿದ್ದರು. ಜಗಜ್ಜ್ಯೋತಿ ಬಸವೇಶ್ವರ ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಿದಾಗ, ಇಡೀ ರಾತ್ರಿ ಅದನ್ನು ನೋಡಿ, ಕೊನೆಯಲ್ಲಿ ಪಾತ್ರಧಾರಿಗಳನ್ನು ಹೃತ್ಪೂರ್ವಕವಾಗಿ ಆಶೀರ್ವದಿಸುತ್ತಿದ್ದರು. ಚರ್ಚಾಸ್ಪರ್ಧೆಗಳಲ್ಲಿ ಗೆದ್ದು ಬಂದ ವಿದ್ಯಾರ್ಥಿಗಳನ್ನು ಪ್ರೀತ್ಯಾದರಗಳಿಂದ ಪ್ರೋತ್ಸಾಹಿಸುತ್ತಿದ್ದರು. ಅವರಿಗೆ ಗಮಕ ಕಲೆಯಲ್ಲಿಯೂ ಅತೀವ ಆಸಕ್ತಿಯಿತ್ತು. ಗುರುಕುಲದಲ್ಲಿದ್ದ ವಿದ್ಯಾರ್ಥಿಗಳಿಗೆ ಹಾಗೂ ಮಠದ ವಟುಗಳಿಗೆ ವಿ.ಎಸ್.ಎಸ್. ಕೌಶಿಕರಿಂದ ಗಮಕದ ಪಾಠ ಹೇಳಿಸುತ್ತಿದ್ದರು.

ಬಡ ವಿದ್ಯಾರ್ಥಿಗಳ ಬಗ್ಗೆ ಸ್ವಾಮೀಜಿಯವರಿಗೆ ಅಪಾರವಾದ ಅನುಕಂಪ. ಪ್ರಸಾದ ನಿಲಯಗಳಲ್ಲಿ ಜಾಗವಿಲ್ಲದಿದ್ದರೂ ಬಡ ಮಕ್ಕಳಿಗೆ ನಿರಾಶೆಯುಂಟುಮಾಡುತ್ತಿರಲಿಲ್ಲ. ಅವರು ವಿದ್ಯಾರ್ಥಿಗಳನ್ನು ಆಯ್ಕೆಮಾಡಿಕೊಳ್ಳುತ್ತಿದ್ದ ರೀತಿಯಂತೂ ತುಂಬ ವಿಚಿತ್ರವಾಗಿರುತ್ತಿತ್ತು. ಅವರ ನಿಲುವು ಒಮ್ಮೊಮ್ಮೆ ಕಠಿಣವಾಗಿರುವಂತೆ ಕಾಣಿಸುತ್ತಿತ್ತು. ನಿಲಯಕ್ಕೆ ಸೇರಲು ಬಂದ ವಿದ್ಯಾರ್ಥಿಗಳನ್ನು 'ಆಗ ಬಾ, ಈಗ ಬಾ, ನಾಳೆ ಬಾ' ಎಂದು ಸತಾಯಿಸುತ್ತಿದ್ದರು. ವಿದ್ಯಾರ್ಥಿಗಳ ಬಡತನವನ್ನು ಪರೀಕ್ಷಿಸುವುದಕ್ಕೋಸ್ಕರ ಅಂಥ ವಿಧಾನವನ್ನನುಸರಿಸುತ್ತಿದ್ದರು. ಶ್ರೀಮಂತ ವಿದ್ಯಾರ್ಥಿಗಳಾದರೆ ಮತ್ತೆ ಬರಲಾರರೆಂಬುದು

ಅವರ ಭಾವನೆಯಾಗಿತ್ತು. ಶ್ರೀಮಂತ ವಿದ್ಯಾರ್ಥಿಗಳನ್ನು ತಡೆಹಿಡಿಯುವುದು, ಬಡ ಮಕ್ಕಳಿಗೆ ಆದ್ಯತೆ ನೀಡುವುದು ಅವರ ಈ ಪರೀಕ್ಷೆಯ ಉದ್ದೇಶವಾಗಿತ್ತು.

ಭಾರತದ ಸ್ವಾತಂತ್ರ್ಯಸಂಗ್ರಾಮದ ಬಗ್ಗೆ ಪೂಜ್ಯರಿಗೆ ವಿಶೇಷ ಆಸಕ್ತಿಯಿತ್ತು. 1942 ರಲ್ಲಿ ನಡೆದ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಅವರು ಪರೋಕ್ಷವಾಗಿ ಪ್ರೋತ್ಸಾಹಿಸುತ್ತಿದ್ದರು. ಸರ್ವಶ್ರೀ ಬಿ.ಪಿ. ನಾಗರಾಜಮೂರ್ತಿ, ಡಿ.ಎಂ. ಸಿದ್ದಯ್ಯ, ಹೆಜ್ಜಿಗೆ ಲಿಂಗಣ್ಣ ಮೊದಲಾದ ವಿದ್ಯಾರ್ಥಿಗಳನ್ನು ಚಳವಳಿಯಲ್ಲಿ ಭಾಗವಹಿಸುವಂತೆ ಹುರಿದುಂಬಿಸುತ್ತಿದ್ದರು. 1962ರಲ್ಲಿ ಚೀನಾದೊಡನೆ ಯುದ್ಧ ನಡೆದಾಗ ರಾಷ್ಟ್ರ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಕೊಂಡಿರುವುದನ್ನು ಗಮನಿಸಿ ಯಾರೋ ಭಕ್ತರು ಅದೇ ತಾನೇ ಅರ್ಪಿಸಿದ್ದ ಚಿನ್ನದ ಉಂಗುರವನ್ನು ದಾನವಾಗಿ ನೀಡಿ, ದೇಶಾಭಿಮಾನವನ್ನು ಪೂಜ್ಯರು ಮೆರೆದದ್ದುಂಟು. ಅಷ್ಟೇ ಅಲ್ಲ, ಆ ಸಮಯದಲ್ಲಿ ಅವರು ಎಂಥ ತ್ಯಾಗಕ್ಕಾದರೂ ಸಿದ್ಧವಾಗಿದ್ದರು. ಅವರ ಎಲ್ಲ ಸಾಹಸ ಪ್ರಯತ್ನಗಳು ದೇಶ ಕಟ್ಟುವಲ್ಲಿ ನೆರವಾಯಿತೆನ್ನುವುದನ್ನು ಮರೆಯುವಂತಿಲ್ಲ.

ಡಾ. ನಂಜುಂಡಪ್ಪನವರಿಗೆ ಹೈದರಾಬಾದಿನ ಅಧಿಕಾರಿಯೊಬ್ಬರು ಹೇಳಿದ ಕಥೆ ಜಗದ್ಗುರುಗಳು ಎಂಥ ಮೃದುಹೃದಯಿ, ಕರುಣಾಮೂರ್ತಿಯೆಂಬುದನ್ನು ಪ್ರಕಾಶಪಡಿಸುತದೆ: "ನಾನು ಹುಟ್ಟಿನಲ್ಲಿ ಬ್ರಾಹ್ಮಣ. ಬಡತನದ ಬೇಗೆಯಲ್ಲಿದ್ದೆ. ಹೇಗೋ ಮೈಸೂರಿಗೆ ಬಂದು ವಾರಾನ್ನದ ಮೂಲಕ ವಿದ್ಯಾಭ್ಯಾಸವನ್ನು ನಡೆಸುತ್ತಿದ್ದೆ. ಒಂದೊಂದು ದಿನ ಉಪವಾಸವಿರುತ್ತಿದ್ದೆ. ಉಪವಾಸದ ಬವಣೆಯಿಂದ ಮುಕ್ತನಾಗಲು ಪ್ರಸಾದ ನೀಡುವವರ ಆವಶ್ಯಕತೆಯಿತ್ತು. ನಾನು ಬುದ್ಧಿಯವರನ್ನು ಕಂಡು ನನ್ನ ಕಷ್ಟಗಳನ್ನು ಹೇಳಿಕೊಂಡೆ. 'ನಮ್ಮ ತಾಯಿ ಸಂಪ್ರದಾಯಸ್ಥೆ. ಬೇರೆ ಧರ್ಮದವರು ನಡೆಸುವ ವಿದ್ಯಾರ್ಥಿನಿಲಯಗಳಲ್ಲಿರುವುದು ಅವರಿಗಿಷ್ಟವಿಲ್ಲ. ನನಗೆ ತಂದೆಯಿಲ್ಲ. ನನ್ನ ತಾಯಿಯನ್ನು ನೋಯಿಸಲಾರೆ. ನನಗೆ ಪಡಿಯನ್ನೊದಗಿಸಿದರೆ ಅಡುಗೆ ಮಾಡಿಕೊಂಡು ಜೀವನಯಾಪನೆ ಮಾಡುತ್ತೇನೆ'. ಇಷ್ಟು ಹೇಳಿದ್ದೇ ತಡ 'ಅಸ್ತು' ಎಂದರು. ಅವರ ಅನುಗ್ರಹದಿಂದ ನಾನೀಗ ಉನ್ನತ ಸ್ಥಾನದಲ್ಲಿದ್ದೇನೆ. ನಾನು ಮಾತ್ರವಲ್ಲ, ನನ್ನ ಮಕ್ಕಳೂ ಸದಾ ಪೂಜ್ಯರನ್ನು ನೆನೆಯುತ್ತಿರುತ್ತಾರೆ. ನನ್ನ ಹೆಸರು ಕೃಷ್ಣಮೂರ್ತಿ. ಪೂಜ್ಯರ ಶ್ರೀಪಾದಕ್ಕೆ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸಿ" ಎಂದು ಅವರು ವಿನಂತಿಸುತ್ತಾರೆ. ಮಾತೃವಾತ್ಸಲ್ಯದ ಇಂಥ ನಿದರ್ಶನಗಳು ಪೂಜ್ಯರ ಜೀವನದಲ್ಲಿ ಸಮೃದ್ಧವಾಗಿ ದೊರೆಯುತ್ತವೆ.

ಸ್ವಾಮೀಜಿಯವರ ವ್ಯಕ್ತಿತ್ವದ ಘನತೆ ಮತ್ತು ಮಹಿಮೆಗಳು ಕನ್ನಡ ನಾಡಿನಲ್ಲೆಲ್ಲ ಮನೆಮಾತಾಗಿದ್ದುವು. ಮಠದ ವಿದ್ಯಾರ್ಥಿಗಳಾಗಲಿ, ಭಕ್ತರಾಗಲಿ ಅಪಾಯಕ್ಕೆ ಸಿಕ್ಕಿಕೊಂಡಾಗ ಶ್ರೀಗಳವರ ಹೆಸರು ಹೇಳಿಕೊಂಡು ಬಚಾವಾಗಿ ಬರುತ್ತಿದ್ದುದುಂಟು. ಶಾಂತಾರಾಮ ನಾಯಕ ಹಿಚಕದ ಎಂಬ ವಿದ್ಯಾರ್ಥಿ ಒಮ್ಮೆ ಅರಮನೆ ದೀಪಗಳ ಸೌಂದರ್ಯವನ್ನು

ನೋಡುವ ಸಲುವಾಗಿ ಅರಮನೆಯ ಮಹಾದ್ವಾರವನ್ನು ದಾಟಿ ಅರಮನೆಯ ಕಡೆಗೆ ಹೋಗುತ್ತಿದ್ದನು. ಕಾವಲುಗಾರ ಓಡೋಡಿ ಬಂದು, ಆತ ಅರಮನೆಯ ಬಲ್ಬುಗಳನ್ನು ಕಳುವು ಮಾಡಲು ಬಂದವನೆಂದುಕೊಂಡು, ಅವನ ಕೈಹಿಡಿದೆಳೆದುಕೊಂಡು, ಪೊಲೀಸ್ ಅಧಿಕಾರಿಯ ಮುಂದೆ ನಿಲ್ಲಿಸುತ್ತಾನೆ. ಆಗ ನಾಯಕ ಭಯದಿಂದ ನಡುಗುತ್ತಾನೆ. 'ನಾನು ಸುತ್ತೂರು ವಿದ್ಯಾರ್ಥಿನಿಲಯದ ವಿದ್ಯಾರ್ಥಿ' ಎಂದು ತನ್ನ ಬಗಲ ಚೀಲದಲ್ಲಿದ್ದ ಊಟದ ತಟ್ಟೆಯನ್ನು ತೋರಿಸುತ್ತಾನೆ. ಸುತ್ತೂರು ಮಠದ ಹೆಸರು ಕಿವಿಯ ಮೇಲೆ ಬೀಳುತ್ತಿದ್ದಂತೆ ಅಧಿಕಾರಿಯ ಬಿಗುಮಾನ ಸಡಿಲವಾಗುತ್ತದೆ. 'ಶ್ರೀ ರಾಜೇಂದ್ರ ಬುದ್ಧಿಯವರು ಮನುಷ್ಯರಲ್ಲಪ್ಪ, ಸಾಕ್ಷಾತ್ ದೇವರು' ಎಂದು ಹೇಳುತ್ತ ಅಧಿಕಾರಿ ತಾನೇ ಅರಮನೆಯ ದೀಪಗಳ ಸೌಂದರ್ಯವನ್ನು ತೋರಿಸಿ, ವಾಪಸು ಕಳಿಸಿಕೊಡುತ್ತಾನೆ. ಸ್ವಾಮೀಜಿಯವರ ಹೆಸರಿನ ಮಹಿಮೆಗೆ ತಲೆದೂಗುತ್ತ, ನಾಯಕ ತನ್ನ ಕೋಣೆ ಸೇರುತ್ತಾನೆ. ಶ್ರೀಮಠದ ಕೀರ್ತಿ ಪ್ರತಿಷ್ಠೆ ಗೌರವಗಳಿಗೆ ಸ್ವಾಮೀಜಿಯೇ ಸರ್ವಕಾರಣವೆಂಬುದನ್ನು ಜಗತ್ತೇ ಬಲ್ಲುದು. ಮಾನವಕಲ್ಯಾಣಕ್ಕಾಗಿ ಅವರು ಮಾಡಿದ ತಪಸ್ಸು ಅಸಾಧಾರಣವಾದದ್ದು. ಇಷ್ಟಾದರೂ ಅವರಲ್ಲಿ ಲವಲೇಶವೂ ಗರ್ವವಿರಲಿಲ್ಲ. 'ಸಮಾಜದಿಂದ ತಂದು ಸಮಾಜಕ್ಕೆ ಕೊಟ್ಟಿರುತ್ತೇನೆ. ವಿದ್ಯಾರ್ಥಿಗಳು ನನಗೆ ಕೃತಜ್ಞರಾಗಿರಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಸಮಾಜಕ್ಕೆ ಕೃತಜ್ಞರಾಗಿದ್ದು, ತಾವು ಓದಿದುದು ಸಾರ್ಥಕವಾಗುವಂತೆ ಬಾಳಿ, ಸಮಾಜದ ಋಣವನ್ನು ತೀರಿಸಿದರೆ ಅದೇ ಅವರು ನಮಗೆ ತೋರಿಸುವ ಕೃತಜ್ಞತೆ' ಎಂದು ಸ್ವಾಮೀಜಿ ತಮ್ಮ ವಿನಯವನ್ನು ಮೆರೆಯುತ್ತಾರೆ.

ಅಂಕಪ್ಪ ಎಂಬುವವರು ಒಬ್ಬರು ಮಠದ ಶಿಷ್ಯರು. ಅವರ ಮಗಳು 'ರಾಜೇಂದ್ರ ಶಿಶು'. ತಂದೆ ನಾಟಕವನ್ನು ಕಲಿಸುತ್ತಿದ್ದಾಗ, ಆ ಮಗು ನಗುತ್ತ ಕುಳಿತಿತ್ತು. ಶ್ರೀಗುರುವಿನ ಕಾರುಣ್ಯದ ದೃಷ್ಟಿ ಆ ಮಗುವಿನ ಮೇಲೆ ಬಿದ್ದು ಅವರು ಆ ಮಗುವನ್ನು ಹತ್ತಿರಕ್ಕೆ ಕರೆಯುತ್ತಾರೆ. ಆ ಮಗು ತೆವಳಿಕೊಂಡು ಗುರುಗಳ ಬಳಿ ಬರುತ್ತದೆ. ಶ್ರೀಗಳು ಆ ಮಗುವಿನ ಹಣೆಗೆ ಭಸ್ಮ ಹಚ್ಚಿ ಕಲ್ಲುಸಕ್ಕರೆ ಕೊಡುತ್ತಾರೆ. ಕಾಲಿಗೂ ಭಸ್ಮವನ್ನು ಹಚ್ಚುತ್ತಾರೆ. ಅವರ ಹಸ್ತಸ್ಪರ್ಶದಿಂದ ಎರಡು ಮೂರು ತಿಂಗಳಲ್ಲಿ ಆ ಮಗು ಓಡಾಡುತ್ತದೆ. ಗುರುಗಳ ಹಸ್ತಸ್ಪರ್ಶದ ಆ ಗಾರುಡಿಯನ್ನು ಆ ತಾಯಿ ಇಂದಿಗೂ ಸ್ಮರಿಸಿಕೊಳ್ಳುತ್ತಾರೆ.

"ಪಟ್ಟದ ಶ್ರೀ ಶಿವರಾತ್ರೀಶ್ವರ ಗುರುಗಳ ಕೃಪಾಕಟಾಕ್ಷದಿಂದ ತೇಜೋವಂತರಾಗಿ ಸುತ್ತೂರು ಸಿಂಹಾಸನವನ್ನೇರಿದೊಡನೆಯೇ, ತಮ್ಮ ಬದುಕಿನ ಗುರಿಯನ್ನು ನಿಶ್ಚಯಿಸಿಕೊಂಡು, ಅಜ್ಞಾನದ ನಾಶಕ್ಕೆ ಪ್ರತಿಜ್ಞಾರೂಢರಾಗುತ್ತಾರೆ. ಕಾಯಕ ತತ್ತ್ವವನ್ನನುಸರಿಸಿ, ಅನ್ನದಾಸೋಹ, ಜ್ಞಾನದಾಸೋಹ, ಧರ್ಮದಾಸೋಹಗಳ ಮೂಲಕ ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮ ಬದುಕನ್ನು ಸವೆಸುತ್ತಾರೆ. ಸರ್ವೋದಯ ದೃಷ್ಟಿ, ದೂರದರ್ಶಿತ್ವ, ಕರ್ತೃತ್ವಶಕ್ತಿ, ಜೀವದಯೆ, ಆಧ್ಯಾತ್ಮಿಕ ಅನುಸಂಧಾನ, ಜಾತ್ಯತೀತ

ಮನೋಭಾವ, ಸರ್ವಸಮಾನತೆ, ಶೈಕ್ಷಣಿಕ ಮನೋಧರ್ಮ ಹಾಗೆಯೇ ಪ್ರಗತಿಪರ ಆಧುನಿಕ ವೈಜ್ಞಾನಿಕ ದೃಷ್ಟಿಕೋನಗಳಿಂದ ಕೂಡಿದ ಶ್ರೀಗಳವರ ಮಹತ್ವಪೂರ್ಣ ಸಾಧನೆಯಿಂದ ಉತ್ತಮೋತ್ತಮ ಜನಕಲ್ಯಾಣ ಕಾರ್ಯಕ್ರಮಗಳು ಪ್ರಾಯೋಜಿತ ಗೊಂಡಿವೆ. ಜಾತಿ ಮತ, ಮೇಲು ಕೀಳು, ಬಡವ ಬಲ್ಲಿದ ಎಂಬ ಯಾವುದೇ ತಾರತಮ್ಯವಿಲ್ಲದೆ ಶಿಕ್ಷಣ, ಸಾಹಿತ್ಯ, ಧರ್ಮ ಮತ್ತು ಸಂಸ್ಕೃತಿಯನ್ನು ನಮ್ಮ ನಾಡಿಗೆ ವಿಶೇಷ ಕೊಡುಗೆಯಾಗಿ ನೀಡಿದ ಶ್ರೀಗಳು ನಿಜಕ್ಕೂ ಸ್ತುತ್ಯರ್ಹರು" ಎಂದು ಈ. ಸಾದಪ್ಪನವರು ನೆನೆಯುತ್ತಾರೆ. ಅಷ್ಟೇ ಅಲ್ಲ, ಜಗತ್ತಿನಲ್ಲಿಯೇ ಅಂಥ ಸಂತರು ವಿರಳಾತಿವಿರಳ. ಕರ್ನಾಟಕವು ವಿಶ್ವಕ್ಕೆ ಕೊಡುಗೆ ಕೊಟ್ಟಿರುವ ಅತ್ಯುನ್ನತ ವ್ಯಕ್ತಿಗಳಲ್ಲಿ ಅವರೊಬ್ಬರು.

ಕೆಲವರ ಪಾಲಿಗೆ ಶ್ರೀಗಳು ಮರೆಯಲಾರದ ಮಹಾನುಭಾವರು; ಹಲವರ ಪಾಲಿಗೆ ಅವರ ನೆನಪೊಂದು ತೀರ್ಥಸ್ನಾನ. ದೀನದಲಿತರಿಗೆ ಬಡವರಿಗೆ ಪತಿತರಾದವರಿಗೆ ಯಾರು ಮರುಗುವರೊ, ತಂತಮ್ಮ ಕೈಲಾದ ನೆರವು ನೀಡುವರೋ ಅಂಥವರನ್ನು ಸ್ವಾಮಿ ವಿವೇಕಾನಂದರು ಮಹಾತ್ಮರೆಂದು ಕರೆಯುತ್ತಾರೆ. ಅಂಥವರಲ್ಲಿ ರಾಜೇಂದ್ರ ಸ್ವಾಮಿಗಳು ಅಗ್ರಗಣ್ಯರು.

ಮಾಡುವಂತಿರಬೇಕು ಮಾಡದಂತಿರಬೇಕು
ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು
ಕೂಡಲಸಂಗಮದೇವರ
ನೆನೆಯುತ್ತ ನೆನೆಯುತ್ತ ನೆನೆಯದಂತಿರಬೇಕು.

ಬಸವಣ್ಣನವರ ಕರ್ಮಯೋಗದ ಈ ಆದರ್ಶವನ್ನು ನಿತ್ಯ ಆಚರಣೆಯಲ್ಲಿ ತಂದ ಮಹಾಪುರುಷರು ಶ್ರೀ ರಾಜೇಂದ್ರ ಸ್ವಾಮಿಯವರು. ಸಂಕುಚಿತ ಭಾವನೆ ಎಂಬುದು ಅವರ ಹತ್ತಿರವೂ ಸುಳಿಯುತ್ತಿರಲಿಲ್ಲ. ಸಮಾಜದ ಹೀನಾವಸ್ಥೆಯನ್ನು ಆದ್ರ್ರ ಹೃದಯವಂತರಾಗಿ ತೊಡೆಯುತ್ತಾರೆ. 'ಪ್ರಸನ್ನ ವದನ, ಸಹನೆ ತಾಳ್ಮೆ, ಪ್ರಶಾಂತ ಭಾವನೆ, ಲಾಸ್ಯ, ಉಲ್ಲಾಸ, ಉತ್ಸಾಹ' ಅವರಲ್ಲಿ ಯಾವಾಗಲೂ ಕಾಣುವ ಗುಣಗಳು ಎಂದು ಹೇಳುತ್ತಾರೆ ಸಿ.ಎಸ್. ಚಂದ್ರಶೇಖರಯ್ಯನವರು. ಮಂತ್ರಮಹರ್ಷಿಗಳೆಂದು ಹೆಸರಾದ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳ ಉತ್ತರಾಧಿಕಾರಿಯಾದದ್ದೇ 'ಶ್ರೀ ರಾಜೇಂದ್ರ ಸ್ವಾಮಿಗಳ ಪುಣ್ಯ. ಅದರ ಜೊತೆಗೆ ಅರಮನೆ ಗವಿಮಠದ ಶ್ರೀ ಗೌರೀಶಂಕರ ಮಹಾಸ್ವಾಮಿಗಳು ಅವರ ಮೇಲೆ ಅಪಾರ ಪ್ರಭಾವವನ್ನು ಬೀರುತ್ತಾರೆ. ಶ್ರೀಗಳವರು ಮಾತಿನಮಲ್ಲರಲ್ಲ. ಮಿತಭಾಷಿಗಳು. ನುಡಿದಂತೆ ನಡೆದವರು ಅವರು. ಅವರೆಂದೂ ಮಾತಿಗೆ ತಪ್ಪಿದವರಲ್ಲ. ಸೃಜನಶೀಲತೆ ಮತ್ತು ಸರ್ವಸಮತಾದೃಷ್ಟಿ, ಲೋಕಕಾರುಣ್ಯ ಅವರಿಗೆ ಸಹಜವಾಗಿ ರಕ್ತಗತವಾಗಿ ಬಂದ ಗುಣಗಳು. ಅವರ ಎಲ್ಲ ಸಾಧನೆ–ಸಿದ್ಧಿಗಳ ಹಿಂದೆ ಗುಪ್ತವಾದ ಆಧ್ಯಾತ್ಮ ಸಾಧನೆಯ ಪ್ರಭಾವ ಇತ್ತೆಂದೇ ಹೇಳಬೇಕು. ದುರ್ಜನರನ್ನು

ಆಕರ್ಷಿಸಿ, ಅವರನ್ನು ಸಾತ್ವಿಕರನ್ನಾಗಿ ಪರಿವರ್ತಿಸುವ ದೈವೀಶಕ್ತಿ ಅವರಲ್ಲಿತ್ತು.

ಮಠಗಳ ಸಹಕಾರವಿಲ್ಲದೆ ಸರ್ಕಾರವೊಂದೇ ಏಕಾಕಿಯಾಗಿ ದೇಶದ ಅಜ್ಞಾನ, ದಾರಿದ್ರ್ಯಗಳನ್ನು ತೊಡೆದುಹಾಕುತ್ತದೆ ಎನ್ನುವುದು ಸುಲಭವಲ್ಲ. ಶತ್ರುಗಳು ಸತ್ವವನ್ನೆಲ್ಲ ಹೀರಿಕೊಂಡ ಇಂಡಿಯಾದಂಥ ಬಲಹೀನ ರಾಷ್ಟ್ರಕ್ಕೆ ಕಷ್ಟ, ಆಪತ್ತು ನಿತ್ಯಸಂಗಾತಿಗಳು. ಅದನ್ನು ಮನಗಂಡ ಮಹಾಮಹಿಮರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಮನುಷ್ಯ ಮನಸ್ಸು ಮಾಡಿದರೆ ಮರ್ತ್ಯವನ್ನು ಅಮರ್ತ್ಯವನ್ನಾಗಿ ಪರಿವರ್ತಿಸಬಹುದೆಂಬ ಶಿವಶಕ್ತಿ ಅವರದು.

ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೆ ಸ್ವರ್ಗ ಅನಾಚಾರವೇ ನರಕ
ಕೂಡಲಸಂಗಮದೇವಾ ನೀವೇ ಪ್ರಮಾಣು

ಸ್ವಾಮಿಗಳು ಬದುಕಿದ್ದುದೇ ನಾಡಿನುದ್ಧಾರಕ್ಕಾಗಿ. ಅವರಿಗದೇ ಗತಿ ಮತಿ ಮುಕ್ತಿ. ತಮ್ಮ ಸಾಧನೆಯ ಪರಿಮಳವನ್ನು ತಮ್ಮ ಸುತ್ತಮುತ್ತಣ ವಾತಾವರಣದಲ್ಲಿ ಹರಡಿ, ಅದನ್ನು ಶಿವಲೋಕವನ್ನಾಗಿ ಪರಿವರ್ತಿಸುವುದೇ ಅವರ ಜೀವನದ ಏಕೈಕ ಗುರಿಯಾಗಿತ್ತು. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಬಗ್ಗೆಯೂ ಅವರಿಗೆ ವಿಶೇಷಾಸಕ್ತಿಯಿತ್ತೆಂಬುದನ್ನು ಗಮನಿಸಬೇಕು. ದೇವಲೋಕ ಮರ್ತ್ಯಲೋಕಗಳು ಒಂದೇ ಆಗಿರಬೇಕಾದರೆ ಸ್ತ್ರೀಯರು ವಿದ್ಯಾವಂತೆಯರಾಗಬೇಕೆಂಬುದು ಅವರ ಅಭಿಮತ. ಅವರ ಉಸಿರೆಲ್ಲಾ ಶಿವಮಯ.

'ಜೀವನದ ಕೋಟಲೆಗೆ ಸಿಕ್ಕಿ ತೊಳಲುವ ಮನುಷ್ಯನ ಪಾಲಿಗೆ ಸದ್ಗುರುವಿನ ಸಂತವಿಡುವ ಮಾತುಗಳು, ಅವರು ತೋರುವ ನಿಷ್ಕಲ್ಮಷ ಪ್ರೀತಿ ಮನಸ್ಸಿಗೆ ನಿಶ್ಚಿಂತೆ ನಿರಾಳತೆಯನ್ನು ತರುತ್ತವೆ. ಪರಮ ಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳಿಂದ ಸಹಸ್ರ ಸಹಸ್ರ ಜನರು ಶಾಂತಿ ಸಮಾಧಾನ ಮತ್ತು ಜೀವನಕ್ಕೆ ಆಸರೆಯಾಗಬಲ್ಲ ವಿದ್ಯೆ ಪಡೆದಿದ್ದಾರೆ. ಯಾರಾದರೂ ಕಷ್ಟದಲ್ಲಿರುವವರನ್ನು ಕಂಡರೆ ಅಪಾರ ವ್ಯಥೆ ವ್ಯಕ್ತಪಡಿಸುತ್ತಿದ್ದ ಗುರುಗಳು, ಪರಿಹಾರಕ್ಕೆ ಮಾರ್ಗ ತೋರುತ್ತಿದ್ದರು. ಓದುವ ಮಕ್ಕಳ ರಕ್ಷಣೆಗಂತೂ ಹಡೆದ ತಾಯಿಯಂತೆ ಪೋಷಣೆ ನೀಡಿ ಉದ್ಧರಿಸಿದ್ದಾರೆ. ಮಠಾಧೀಶರು ಕೇವಲ ಮಠ, ಪೀಠಗಳಿಗೆ ಸೀಮಿತವಾಗಿ ಉಳಿಯಬಾರದು. ಭಕ್ತಜನರ, ದೀನರ, ದುಃಖಿಗಳ ಕಷ್ಟ ಸಂಕಷ್ಟಗಳನ್ನು ಗಮನಿಸಿ, ಪರಿಹರಿಸಬೇಕೆಂಬ ಮಹಾನ್ ಆದರ್ಶಕ್ಕೆ ಉದಾಹರಣೆಯಾಗಿದ್ದರು. ಅವರ ನಿರ್ಮಲ ಅಂತಃಕರಣ, ತಾಯಿ ಮಮತೆಯ ಹೆಂಗರುಳು ಸದಾ ಸಮಾಜದ ಒಳಿತಿನ ಚಿಂತನೆಯಲ್ಲಿ ತೊಡಗಿರುತ್ತಿತ್ತು. ಶರಣ ತತ್ವಕ್ಕೆ ಮನಸೋತು ಅರಿತು ಆಚರಿಸಿದರು; ಜನತೆಯಲ್ಲಿಯೂ ಅದನ್ನು ಬಿತ್ತರಿಸಲು ಅತ್ಯಂತ ಮಹತ್ವ ನೀಡಿದರು. ಮುಖದಲ್ಲಿ ಮಂದಹಾಸ, ಅಂತರಂಗದಲ್ಲಿ ನಿರ್ಮಲ ಭಾವದ

ಪ್ರೀತಿ, ಸದಾ ಲೋಕಕಲ್ಯಾಣಚಿಂತನೆ ಮಾಡುತ್ತಿದ್ದ ಮೃದು ಮಾತಿನ ಗುರುಗಳು ನಮ್ಮೆಲ್ಲರ ಮನದಂಗಳದ ಮಂಗಳ ಮೂರ್ತಿಯಾಗಿ ಚಿರಂತನವಾಗಿದ್ದಾರೆ.

ಅನ್ನವನಿಕ್ಕಿದೊಡೆ ಪುಣ್ಯವಹುದು
ವಸ್ತ್ರವ ಕೊಟ್ಟಡೆ ಧರ್ಮವಹುದು
ಹಿರಣ್ಯವ ಕೊಟ್ಟಡೆ ಶ್ರೇಯವಹುದು
ತ್ರಿಕರಣಶುದ್ಧವಾಗಿ ನಡೆದಡೆ ಮುಕ್ತಿಯಹುದು
ಕೂಡಲಸಂಗಮದೇವಾ

ಬಸವಣ್ಣನವರ ಮೇಲಿನ ಉಕ್ತಿಗೆ ಪೂಜ್ಯ ಶ್ರೀಗಳು ಜ್ವಲಂತ ನಿದರ್ಶನವಾಗಿದ್ದರು.

ಶ್ರೀಗಳಂಥವರನ್ನು ನೋಡಿಯೇ

ಉಪಮಿಸಬಾರದ ಉಪಮಾತೀತರು
ಕಾಲಕರ್ಮರಹಿತರು, ಭವರಹಿತರು

ಎಂಬ ಸೂಕ್ತಿ ಹುಟ್ಟಿರುವುದು. ಸಂತರ ನಡೆ ನುಡಿ ಎಲ್ಲವೂ ವಿಚಿತ್ರ, ಅಲೌಕಿಕ. ಅಂತೆಯೇ ಶ್ರೀಗಳವರ ನಡೆ ನುಡಿ ಭಾವನೆಗಳು ಅನೂಹ್ಯ, ಅನನ್ಯ. ನೆಲಕ್ಕೂ ನೋವಾಗದ ನಡೆ, ಮನಕ್ಕೆ ನೋವಾಗದ ನುಡಿ, ದಯಾರ್ದ್ರಹೃದಯ ಅವರಲ್ಲಿ ಹಾಸುಹೊಕ್ಕಾಗಿದ್ದುವು. ತಾರಸ್ವರದ ನುಡಿಯೇ ಅವರಿಗೆ ತಿಳಿದಿರಲಿಲ್ಲವೆಂಬುದು ಅವರನ್ನು ಬಲ್ಲವರಿಗೆಲ್ಲರಿಗೂ ತಿಳಿದಿತ್ತು. "ಅವರು ಸದಾ ಹಸನ್ಮುಖಿಗಳು, ಸ್ಮಿತಪೂರ್ವಭಾಷಿಗಳು, ನನ್ನನ್ನು ಕಂಡಾಗಲೆಲ್ಲಾ 'ಚೆನ್ನಾಗಿದ್ದೀಯಾ' ಎಂದು ಕೇಳುತ್ತಿದ್ದ ಅವರ ಪ್ರಫುಲ್ಲ ಹಾಗೂ ಶಾಂತ ಮುಖಕಮಲವನ್ನು ಜ್ಞಾಪಿಸಿಕೊಂಡಾಗಲೆಲ್ಲಾ ಅವರೇ ಪ್ರತ್ಯಕ್ಷವಾಗಿ ಕಂಡಂತೆ ಭಾಸವಾಗುತ್ತದೆ. ಪೂಜ್ಯರ ಸಾನ್ನಿಧ್ಯವನ್ನು ಅನುಭವಿಸಿದ ಯಾರೂ ಈ ಮಾತನ್ನು ಉತ್ಪ್ರೇಕ್ಷೆ ಎಂದು ಭಾವಿಸಲಾರರು" ಎಂದು ಸ್ಮರಿಸಿಕೊಂಡವರು ಶ್ರೀ ಕೆ.ಎಸ್. ಮಹಾಂತದೇವರು.

ಯುಗಪ್ರಜ್ಞೆಯ ಸಾಕಾರಮೂರ್ತಿಗಳು ಜಗದ್ಗುರು ಶ್ರೀ ರಾಜೇಂದ್ರ ಮಹಾಸ್ವಾಮಿಗಳು. ಅವರ ನಡೆ ಪರುಷ, ನುಡಿ ಪರುಷ, ನೋಟ ಪರುಷ, ಮಾಟ ಪರುಷ. ಅವರು ಹೇಳಿದ್ದೆಲ್ಲ ನಿಜವಾಗುತ್ತಿತ್ತು; ಮುಟ್ಟಿದ್ದೆಲ್ಲ ಹೊನ್ನಾಗುತ್ತಿತ್ತು. ಸ್ವಾಮಿಗಳ ದೃಷ್ಟಿಯಲ್ಲಿ ಮಠಗಳು ಕೇವಲ ಧಾರ್ಮಿಕ ಆಚರಣೆಗೆ ಮೀಸಲಾಗಿರದೆ, ಜನಜೀವನದ ಮಟ್ಟ ಮತ್ತು ಬದುಕಿನ ಶೈಲಿಯನ್ನು ಉತ್ತಮಪಡಿಸಬೇಕು. ನಮ್ಮ ಧರ್ಮ, ಸಂಸ್ಕೃತಿಯನ್ನು ಬಿಂಬಿಸುವಂತಹ ಕಾರ್ಯಕ್ರಮಗಳನ್ನು ಏರ್ಪಡಿಸಿ, ಜನಮಾನಸದಲ್ಲಿ ನಿಲ್ಲಬಲ್ಲ ಧಾರ್ಮಿಕ ಸಾಂಸ್ಕೃತಿಕ ಸಮಾರಂಭಗಳನ್ನು ಏರ್ಪಡಿಸಿ, ಅವುಗಳ ಮೂಲಕ ಸಮಾಜವನ್ನು ತಿದ್ದಬೇಕು ಎಂಬುದೇ ಅವರ ನಿಲುವು ಆಗಿತ್ತು. ಜೆಎಸ್ಎಸ್ ಮಹಾವಿದ್ಯಾಪೀಠ ಇಂದು ಬೃಹದಾಕಾರವಾಗಿ ಬೆಳೆದು ನಿಂತಿದ್ದರೆ ಅದಕ್ಕೆ ಕಾರಣ ಬುದ್ಧಿಯವರಲ್ಲಿದ್ದ ಧೀಶಕ್ತಿ, ಶಿವಪರ ಚಿಂತನೆ, ಸಮಾಜೋಧಾರ್ಮಿಕ ಭಾವನೆ, ಸಾಮಾಜಿಕ ಕಳಕಳಿ,

ಸಮುದಾಯದ ಏಳ್ಗೆ, ಬಡವರ ಬಗ್ಗೆ ಅನುಕಂಪ ಮುಂತಾದ ಗುಣಗಳು ಅವರಲ್ಲಿ ಮೇಳೈಸಿವೆ. ಮಗುಹೃದಯವಿದ್ದವರೇ ದೊಡ್ಡವರು ಎನ್ನುವುದಕ್ಕೆ ಶ್ರೀಗಳು ಉದಾಹರಣೆಯಾಗಿದ್ದಾರೆ.

"ಬಿದ್ದವರನೆತ್ತುತ್ತ ನಡೆವ ಆ ದಾರಿಯಲ್ಲಿ, ಕಂಬನಿಯನೊರಸುತ್ತ ನಿಲುವ ಆ ನೋಟದಲ್ಲಿ ಕರುಣಾಮಯಿಗಳವರು. ಅಂತೆಯೇ ದಿನನಿತ್ಯದ ಆಚರಣೆಯಲ್ಲಿ ನಿರ್ಮೋಹಿಗಳು ಅವರು. ನೀರಿಗಂಟದ ಕಮಲದೆಲೆಯಂತಹ ವೈರಾಗ್ಯಮೂರ್ತಿಗಳವರು. ಸದ್ದುಗದ್ದಲದ ಪರಿಸರದಲ್ಲಿ ಇದ್ದು ಇಲ್ಲದಂತಾದ ಪುಣ್ಯಾತ್ಮರವರು" ಎಂದು ನುಡಿದವರು ಶ್ರೀ ಕೆ.ಸಿ. ಶಿವಪ್ಪನವರು. ಮೌನಕ್ರಾಂತಿಯ ಮಹಂತರ ಧೀಶಕ್ತಿ, ಕರ್ತೃತ್ವಶಕ್ತಿ, 'ಪೂಜ್ಯ ಶ್ರೀಗಳವರ ಮೃದುಮಧುರ ವಿನಯ ಗುಣ, ಅನವರತ ದುಡಿಮೆ, ಮಾನವೀಯ ಕ್ಷೇಮ, ಮಾತೃಹೃದಯದ ಅಂತಃಕರಣ, ನಿಷ್ಕಳಂಕ ಸೇವಾ ಮನೋಭಾವ, ನಂಬಿದ ಮೌಲ್ಯಗಳ ಪ್ರತಿಪಾದನೆ, ಕಂದದ ಕುಂದದ ಸಮಚಿತ್ತತೆ, ಜೀವ ಭಾವ ಶಾಂತಿ, ಅನುಭಾವದೆತ್ತರ, ಒಂದಾದ ನಡೆನುಡಿಯ ಜೀವನಾದರ್ಶ. ಅಂಗಲಿಂಗ ಸಾಮರಸ್ಯದ ಶಿವಯೋಗಸಾಧನೆ ಪೂಜ್ಯರ ಗುಪ್ತ ಕಾಯಕವಾಗಿತ್ತು. ಮುಕ್ತಿಪಥದತ್ತ ತೋರುಬೆರಳಾಗಿತ್ತು. ಅವರದು ಆ ಬಗೆಯ ಭಕ್ತಿಯ ಉತ್ಕಟತೆ, ಭಾವತೀವ್ರತೆ, ಭೋಗ ತ್ಯಾಗದ ತನ್ಮಯತೆ, ಮಮಕಾರವನ್ನು ನೀಗಿದ ನಿಸ್ಸಂಗತ್ವ. ಹೀಗಾಗಿ ದೈವಿಕ ಪ್ರಸನ್ನತೆ ಸದಾ ಅವರದಾಗಿತ್ತು.

"ಧರೆಯ ಸುಖದ ಭೋಗ ಅಳಿದು ಹರನ ಚರಣ ಕಮಲದಲ್ಲಿ ಮಗ್ನವಾದ ಮನಸ್ಸು ಅವರದು. ಇಂದ್ರಿಯಚಾಪಲ್ಯದಿಂದ ದೂರ, ದೂರ ನಿಂತ ಸಚ್ಚಿದಾನಂದ ಪ್ರವೃತ್ತಿ ಅವರದು. ಶಿವಪೂಜಾ ಸಮಯದಲ್ಲಿ ತಮ್ಮನ್ನೇ ಮರೆಯುತ್ತಿದ್ದ ಶಿವರಾತ್ರೀಶ್ವರ– ಶಂಕರ ಭಾವ ಅವರದು."

ಪೂಜ್ಯರು ಆಧ್ಯಾತ್ಮಿಕ ಚಿಂತನೆಯಿಂದ, ಶಿವಚಿಂತನೆಯಿಂದ ಸುತ್ತೂರಿನ ಕೈವಲ್ಯಾಕಾಶದ ನಕ್ಷತ್ರವಾದರು. ಕತ್ತಲೆಗೊಂದು ಬೆಳಕಾದಂತೆ, ನಿರಾಶೆಗೊಂದು ಆಶಾಕಿರಣವಾದರು.

'ಜಗವೆಲ್ಲ ನಗುತಿರಲಿ, ಜಗದಳುವು ನಮಗಿರಲಿ' ಎಂದ ಅನುಕಂಪಶೀಲರು ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳು. ಇಂದು ನಾವೆಲ್ಲ ಕಾಣುತ್ತಿರುವ ಅವರ ಭಾವಚಿತ್ರ ಹೇಗಿದೆಯೋ, ಅಂಥದೇ ಜೀವನಶೈಲಿ ಅವರದಾಗಿತ್ತು. ಸರಳತೆಯ ದ್ಯೋತಕವಾದ ಕಾವಿತೊಡುಗೆ, ತಲೆಮೇಲೆ ಅದೇ ಮುಸುಕಿನೆಳೆತ, ನಿರ್ಮಲ ರುದ್ರಾಕ್ಷಿಮಾಲೆ, ಹಣೆಯಲ್ಲಿ ಮೂರೆಳೆಯ ವಿಭೂತಿ, ಕಾಲಿನಲ್ಲಿ ಮರದ ಹಾವುಗೆ, ಮಿನುಗುವ ಕಣ್ಣಿನ ಕಾಂತಿ, ಮಂದಹಾಸದ ಮುಗುಳುನಗೆ, ಜನರೆಲ್ಲ ನನ್ನವರೆನ್ನುವ ಆತ್ಮೀಯತೆ, ಕಾತರ ದುಗುಡ ತೋರದ ಹಸನ್ಮುಖತೆ, ನಡೆನುಡಿಯಲ್ಲಿ ಮೈವೆತ್ತಿದ ಗಾಂಭೀರ್ಯ– ಇವೆಲ್ಲ ಪೂಜ್ಯರ ಬದುಕಿನಲ್ಲಿ ಕೊನೆಯುಸಿರಿರುವತನಕ ಹಾಸುಹೊಕ್ಕಾಗಿದ್ದುವು' ಎಂಬುದಾಗಿ ಶಿವಪ್ಪನವರು ಗುರುಗಳನ್ನು ಸ್ತುತಿಸುತ್ತಾರೆ.

ಪರಮಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳವರಲ್ಲಿ ಬಸವಣ್ಣನವರ ಭಕ್ತಿಯೋಗ, ಸಿದ್ಧರಾಮರ ಕರ್ಮಯೋಗ, ಚನ್ನಬಸವಣ್ಣನ ಜ್ಞಾನಯೋಗ, ಅಲ್ಲಮಪ್ರಭುವಿನ ವೈರಾಗ್ಯಯೋಗ – ಇವುಗಳು ಸಾಕಾರಗೊಂಡು, ಶರಣಧರ್ಮ ತತ್ತ್ವದ ಸಾಕಾರಮೂರ್ತಿಗಳಾಗಿ ಅಧ್ಯಾತ್ಮದ ಉನ್ನತಿಗೆ, ಸಮಾಜದ ಉನ್ನತಿಗೆ ಹಾಗೂ ರಾಷ್ಟ್ರದ ಉನ್ನತಿಗೆ ಕಾರಣರಾಗಿ ವಿಶ್ವಮಾನವರಾಗಿ ಅನಿಕೇತನರೆನಿಸಿದ್ದಾರೆ. ಬಸವ ತತ್ವಗಳ ಅನುಷ್ಠಾನದ ಮೂಲಕ ಜನತೆಯ ಸರ್ವತೋಮುಖ ಪ್ರಗತಿಗಾಗಿ ಕಾಯಾ, ವಾಚಾ, ಮನಸಾ ಪೂಜ್ಯರು ಶ್ರಮಿಸಿದ ರೀತಿ ಭಾರತದ ಎಲ್ಲ ಮಠಾಧೀಶರಿಗೂ ಆದರ್ಶ ಮೇಲ್ಪಂಕ್ತಿಯಾಗಿದೆ. ಈ ಮಾರ್ಗದಲ್ಲಿ ಮಠಾಧೀಶರೆಲ್ಲರೂ ಸಮಾಜಮುಖಿಯಾಗಿ ಕಾರ್ಯೋನ್ಮುಖರಾದಲ್ಲಿ ರಾಷ್ಟ್ರದ ಬಹಳಷ್ಟು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ದೊರಕುವುದರಲ್ಲಿ ಅನುಮಾನವಿಲ್ಲ.

'ಅವರವರ ಭಾವಕ್ಕೆ, ಅವರವರ ಭಕುತಿಗೆ, ಅವರವರ ದರುಶನಕೆ ಅವರವರ ವೇಷದಲಿ ಅವರವರಿಗೆಲ್ಲ ಗುರು ನೀನೊಬ್ಬನೆ' ಎಂಬ ಈ ಮಾತಿನಂತೆ ಪರಮ ಪೂಜ್ಯರನ್ನು ಹತ್ತಿರದಿಂದ ಕಂಡು, ಅವರ ಕರುಣೆಯ ಪ್ರಭಾವಳಿಯಲ್ಲಿ ಬದುಕಿ ಅವರಿಂದ ಉಪಕೃತರಾಗಿ ತಮ್ಮ ಬದುಕನ್ನು ಸುಂದರವಾಗಿಸಿಕೊಂಡ ಭಕ್ತರು ಅವರನ್ನು ವರ್ಣಿಸಿರುವ ಪರಿ ಇಂತಿದೆ – ಪೂಜ್ಯರು ಮಹಾನ್ ಕಾಯಕಯೋಗಿ, ಮಾತೃಸ್ವರೂಪಿ, ಮಾತೃಹೃದಯದ ತಂದೆ, ಕರುಣಾಮೂರ್ತಿ, ದಯೆಯ ಸಾಗರ, ತಾಳ್ಮೆ ಸಂಯಮಗಳ ಪ್ರತಿರೂಪ, ಮುಗ್ಧ ಮನಸ್ಸಿನ ಮುಗ್ಧ ಮುಖದ ಸಂತ, ಬೇಡಿದವರಿಗೆ ಇಲ್ಲವೆನ್ನದ ಹೃದಯಶ್ರೀಮಂತರು, ಮಹಾನ್ ಮಾನವತಾವಾದಿ, ಅನಾಥರ ಅಶಕ್ತರ ಆಪದ್ಬಾಂಧವ, ಅರಿವು ಆಚಾರ ಅನುಭಾವಗಳ ತ್ರಿವೇಣಿ ಸಂಗಮ, ಲಿಂಗಪೂಜಾನಿಷ್ಠೆಯ ಜಂಗಮಮೂರ್ತಿ, ವೈರಾಗ್ಯನಿಧಿ, ಶಿಕ್ಷಣ ಶಿಲ್ಪಿ, ಅದ್ವಿತೀಯ ರಾಷ್ಟ್ರಪ್ರೇಮಿ, ಜಾತಿಮತದ ಹೊಟ್ಟನ್ನು ತೂರಿ ಸಾಮಾಜಿಕ ಪಿಡುಗುಗಳನ್ನು ಮೂಲೋತ್ಪಾಟನೆ ಮಾಡಲು ಪರಿಶ್ರಮಿಸಿದ ಸಮಾಜ ವೈದ್ಯ, ಮಾನವಸೇವೆಯೇ ಮಹಾದೇವನ ಸೇವೆಯೆಂದ ದೈವಮಾನವ, ಬಸವತತ್ವಗಳ ಅನುಷ್ಠಾನಮೂರ್ತಿ, ಸರ್ವಧರ್ಮಸಮನ್ವಯಮೂರ್ತಿ, ಶ್ರೇಷ್ಠ ಸಮಾಜವಾದಿ, ಅನ್ನದಾನ ವಿದ್ಯಾದಾನ ಆರೋಗ್ಯದಾನಗಳ ತ್ರಿವೇಣಿ ಸಂಗಮ, ಕಾರುಣ್ಯಹೃದಯ, ವಿದ್ಯಾರ್ಥಿದೇವೋ ಭವ ಎಂದ ಮಹಾನ್ ಶಿಕ್ಷಣಪ್ರೇಮಿ, ಲಕ್ಷೋಪಲಕ್ಷ ಹಸಿದ ಹೊಟ್ಟೆಗಳಿಗೆ ಅನ್ನವಿಕ್ಕಿದ ಗಾರುಡಿಗ, ಸುತ್ತೂರು ಸುರಧೇನು, ತ್ರಿವಿಧ ದಾಸೋಹಮೂರ್ತಿಗೆ ನಮೋನಮಃ ಎಂದು ಜಗದ್ಗುರುಗಳಿಗೆ ಡಾ. ಎಂ. ಮಹದೇವಪ್ಪನವರು ಪ್ರಣಾಮ ಸಲ್ಲಿಸುತ್ತಾರೆ.

ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯಾ ಭ್ರಾಂತಿಯ ಬೇರ.
ಒಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯಾ

ಬ್ರಹ್ಮಬೀಜವ ಅಖಂಡಮಂಡಲವೆಂಬ ಬಾವಿ
ಪವನವೇ ರಾಟಾಳ, ಸುಷುಮ್ನನಾಳದಿಂದ
ಉದಕವ ತಿದ್ದಿ, ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ ಆವಾಗಳೂ
ಈ ತೋಟದಲ್ಲಿ ಜಾಗರವಿದ್ದು ಸಸಿಯ ಸಲಹಿದೆನು
ಕಾಣಾ ಗುಹೇಶ್ವರಾ

ವ್ಯೋಮಮೂರ್ತಿ ಅಲ್ಲಮಪ್ರಭುವಿನ ಈ ವಚನದ ಸಾಕಾರರೂಪವಾಗಿದ್ದವರು ಪರಮ ಪೂಜ್ಯ ರಾಜೇಂದ್ರ ಶ್ರೀಗಳು. ಕರುನಾಡ ಸಂಸ್ಕೃತಿಯಲ್ಲಿ ಅರಳಿದ ಅಪೂರ್ವ ದಿವ್ಯಚೇತನವಾದ ಶ್ರೀಗಳು ಶರಣಧರ್ಮದ ತತ್ತ್ವಾದರ್ಶಗಳನ್ನು ಕೃತಿಗಿಳಿಸಿದ ಬಸವಪ್ರಜ್ಞೆಯ ಮಹಾನುಭಾವರು. ರಾಷ್ಟ್ರಕವಿ, ರಸಋಷಿ ಕುವೆಂಪು ಅವರು ಪ್ರತಿಪಾದಿಸಿದ ಮನುಜಮತ, ವಿಶ್ವಪಥ, ಸರ್ವೋದಯ ಸಮನ್ವಯ, ಪೂರ್ಣ ದೃಷ್ಟಿಗಳೆಂಬ ವಿಶ್ವಮಾನವ ತತ್ತ್ವಗಳನ್ನು ತಮ್ಮ ಸೇವಾಕ್ಷೇತ್ರ ಕಾರ್ಯಕ್ಷೇತ್ರದಲ್ಲಿ ಅನುಷ್ಠಾನಗೊಳಿಸಿ ವಿಶ್ವಮಾನವರೆನಿಸಿ ಅನಿಕೇತನ ಪ್ರಜ್ಞೆಯುಳ್ಳವರಾಗಿ ನಿಜವಾದ ಅರ್ಥದಲ್ಲಿ ಜಗದ್ಗುರುಗಳಾಗಿದ್ದವರು.

'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ' (ಬಸವಣ್ಣ) ಎಂಬ ಮಾತು ಶ್ರೀಗಳ ಕಾರ್ಯದಲ್ಲಿ ಜಾಗೃತಿಯ ಮಂತ್ರವಾಗಿತ್ತು. ಅವರ ಮಹತ್ಕಾರ್ಯಗಳನ್ನು ಮೆಚ್ಚಿಕೊಂಡು ಜನ ಹೊಗಳಿದಾಗಲೆಲ್ಲ ಅವರು ತಮ್ಮ ಗುರುಗಳನ್ನು ಸ್ಮರಿಸುತ್ತಾ 'ಎನ್ನ ಹೊಗಳಿಕೆಗಡ್ಡ ಬಾರಾ' ಎಂಬ ಮಂತ್ರವನ್ನು ಜಪಿಸುತ್ತಿದ್ದರು. ತಾವು ಮಾಡಿದುದೆಲ್ಲಾ ಗುರುವಿನಾಜ್ಞೆಯಂತೆ ಮಾಡಲೇಬೇಕಾದ ಕರ್ತವ್ಯವೆಂದು ಅವರು ಭಾವಿಸಿದ್ದರು. ಈ ನಿರಹಂಕಾರದ ನಿರ್ಲಿಪ್ತ ನಿಲುವೇ ಅವರಿಗೆ ಎಲ್ಲ ರೀತಿಯ ಏರಿಳಿತಗಳಲ್ಲಿಯೂ ಮನಶ್ಶಾಂತಿಯನ್ನು ತಂದುಕೊಡುತ್ತಿತ್ತು. ಸ್ವಾಮಿಗಳು ಕಾಲುನಡಿಗೆಯಲ್ಲಿ ಹಳ್ಳಿಗಳ ಮನೆ ಮನೆಗಳ ಮುಂದೆ ನಿಂತು ಜನರನ್ನು ಸಂತೈಸಿದ್ದಾರೆ.

'ಇವರು ಶ್ರೀಮಂತರ, ಅಧಿಕಾರಿಗಳ, ರಾಜಕಾರಣಿಗಳ ಸ್ವಾಮಿಗಳೆಂದು ಜನ ಆಡಿಕೊಳ್ಳುವಷ್ಟರಮಟ್ಟಿಗೆ ಶ್ರೀಮಂತರೂ ಅಧಿಕಾರಿಗಳೂ ರಾಜಕಾರಣಿಗಳೂ ಅವರನ್ನು ಆವರಿಸುತ್ತಿದ್ದರು. ಅವರ ಮಧ್ಯದಲ್ಲಿದ್ದೂ ಶ್ರೀಗಳವರು ಬಡವರ ಬಂಧುಗಳಾಗಿದ್ದರು. ಅವರ ನೆರವು ಜನಸಾಮಾನ್ಯರಿಗೆ ದೊರೆಯುವಂತೆ ಮಾಡುವ ಕಳಕಳಿ ಸ್ವಾಮೀಜಿಯವರದಾಗಿತ್ತು. ಇದು ಅವರ ಒಂದು ವಿಶಿಷ್ಟ ವ್ಯಕ್ತಿತ್ವ. ಸಮಷ್ಟಿ ಹಿತಕ್ಕಾಗಿ ಲೌಕಿಕವನ್ನು ಕಟ್ಟಿಕೊಂಡು ವ್ಯವಹಾರಚತುರರಂತೆ ಕಾಣುತ್ತಿದ್ದರೂ ಅಂತರಂಗದಲ್ಲಿ ಅವರೊಬ್ಬ ಅಸಾಮಾನ್ಯ ಆಧ್ಯಾತ್ಮಿಕ ಸಾಧಕರಾಗಿದ್ದರು.

'ವಿರೋಧಿಗಳ ಮನಸ್ಸನ್ನೂ ನೋಯಿಸಲಾಗದ ಲೋಕಕಾರುಣ್ಯ ಅವರದು. ಇನ್ನು ದೀನರನ್ನೂ ದುಃಖಿಗಳನ್ನೂ ಕಷ್ಟದಲ್ಲಿರುವವರನ್ನೂ ಕಂಡರಂತೂ ಕರಗಿ ಹೋಗುತ್ತಿದ್ದರು....ಯಾರಿಗೆ ನೋವಾದರೂ ಸಹಿಸಲಾಗದ ಸೂಕ್ಷ್ಮ ಕೋಮಲ ಮನಸ್ಸು

ಅವರದು. ಹಳ್ಳಿಗಳಿಗೆ ಹೋದಾಗ ಅಲ್ಲಿನ ಜನರ ದುಃಖ ದುಗುಡ ದುಮ್ಮಾನ ಸಮಸ್ಯೆಗಳನ್ನು ಕಂಡು ಮಿಡಿಯುತ್ತಿದ್ದರು. ಅಲ್ಲಿನ ಅಜ್ಞಾನ ಅಸೂಯೆ ದ್ವೇಷಗಳನ್ನು ಕಂಡು ಅನುಕಂಪಪಡುತ್ತಿದ್ದರು.....ಬಹಿರಂಗ ಅಂತರಂಗಗಳೆರಡರಲ್ಲಿಯೂ ಪರಿಪೂರ್ಣತೆಯನ್ನು ಪಡೆದ ಪೂಜ್ಯ ಜಗದ್ಗುರುಗಳ ಜೀವನಮಂತ್ರ ಮಂಗಳದ ಬೆಳಕಾಯಿತು...ಲೌಕಿಕ ಜಗತ್ತಿನ ಒಳಿತನ್ನು ಜೀವನದ ಸರ್ವಸ್ವವೆಂಬಂತೆ ಕಟ್ಟಿಕೊಂಡು ಅದಕ್ಕಾಗಿ ದುಡಿಯುತ್ತಲೇ ನಿರ್ಲಿಪ್ತ ನಿಲವಿನಿಂದ ಮೇಲೇರಿದ ಇಂತಹ ಕಾಯಕ ತಪಸ್ವಿಗಳನ್ನು ಕಾಣುವುದು ವಿರಳ."

'ಶ್ರೀ ರಾಜೇಂದ್ರ ಸ್ವಾಮಿಗಳು ಮನುಷ್ಯರಲ್ಲಿ ದೈವೀಪುರುಷರು. ಆತನೊಬ್ಬ ಮಹಾತ್ಮ! ಬಡವರ ಬಂಧು' ಎಂದು ನುಡಿದವರು ಪ್ರೊ. ತ.ಸು. ಶಾಮರಾಯರು.

ಒಂದು ದಿನ ಶ್ರೀಗಳವರು ತಾವು ತೊಟ್ಟುಕೊಳ್ಳಬೇಕಾಗಿದ್ದ ಅಂಗಿಯ ಭುಜದ ಭಾಗ ಹರಿದಿದ್ದನ್ನು ಸೂಜಿ ದಾರದಿಂದ ಹೊಲಿಯುತ್ತ ಕುಳಿತಿದ್ದಾಗ ಶ್ರೀ ಸಿ. ಅಂಕಪ್ಪನವರು ಯಾವುದೋ ಕೆಲಸದ ಮೇಲೆ ಅಲ್ಲಿಗೆ ಹೋಗಿದ್ದವರು ಆ ದೃಶ್ಯವನ್ನು ಕಂಡು "ಹರಿದ ಅಂಗಿ ತೊಡುವ ಬಡತನ ನಿಮಗೇನು ಬಂದಿದೆ, ಬುದ್ಧಿ? ದೊಡ್ಡ ಮಠದ ಜಗದ್ಗುರುಗಳು! ಅನೇಕ ಸಂಸ್ಥೆಗಳ ಸಂಸ್ಥಾಪಕರು! ನಿಮಗೆ ಬಡತನವೇ?" ಎನ್ನುತ್ತಾರೆ. "ಹೊಸದಾಗಿ ಬಟ್ಟೆ ಕೊಳ್ಳಲು, ಹೊಸ ಅಂಗಿ ಹೊಲಿಸಿಕೊಳ್ಳಲು ನಮ್ಮದೆನ್ನುವುದು ಇಲ್ಲಿ ಏನಿದೆ? ಎಲ್ಲ ಭಕ್ತರದ್ದು, ಸಾರ್ವಜನಿಕರದ್ದು, ಸಮಾಜದ್ದು! ಅಲ್ಲದೆ ಈ ಅಂಗಿ ನಮಗೆ ಬೇಕಾದ ಪ್ರಿಯ ಭಕ್ತರು ಕಾಣಿಕೆಯಾಗಿ ಕೊಟ್ಟದ್ದು, ಗೊತ್ತೆ? ಅವರು ನಮಗೆ ತುಂಬ ಬೇಕಾದವರು, ಪ್ರಿಯ ಭಕ್ತರು. ಅದಕ್ಕೇ ಇಷ್ಟು ಬೇಗ ಇದನ್ನು ನಿವೃತ್ತಿಗೊಳಿಸಲು ಬಯಸುವುದಿಲ್ಲ" ಎಂದು ಸ್ವಾಮೀಜಿ ತಮ್ಮ ಔದಾರ್ಯವನ್ನೂ, ಕೃತಜ್ಞತೆಯನ್ನೂ, ನಿರಹಂಭಾವವನ್ನೂ ಮೆರೆಯುತ್ತಾರೆ. ಇಂಥ ಅಪರೂಪದ ಸ್ವಾಮಿಗಳಿರುವುದರಿಂದಲೇ ನಮ್ಮಲ್ಲಿ ಧರ್ಮಕ್ಕೆ ಚ್ಯುತಿ ಬಂದಿಲ್ಲ, ಜನಜೀವನಕ್ಕೆ ಭಂಗ ಬಂದಿಲ್ಲ.

ಸ್ವಾಮೀಜಿಯವರು ಭಕ್ತರನ್ನೆಂದೂ ಸುಲಿಗೆ ಮಾಡಿದವರಲ್ಲ. ಅವರು ಚೆನ್ನಾಗಿ ಬದುಕಬೇಕೆನ್ನುವುದೇ ಅವರ ಬಯಕೆ. ಮೈಸೂರಿನ ಮಾಜಿ ಉಪಮಹಾಪೌರರಾಗಿದ್ದ ಶ್ರೀಮತಿ ಲೀಲಾ ಚೆನ್ನಯ್ಯನವರು ತಮ್ಮ ಪತಿ ತೀರಿಹೋದಾಗ, ತಮಗೆ ಮಕ್ಕಳಿಲ್ಲದ್ದರಿಂದ, ತಮ್ಮ ಎಲ್ಲ ಆಸ್ತಿಯನ್ನೂ ಮಠಕ್ಕೆ ದಾನ ಮಾಡಲು ಯೋಚಿಸಿ, ತಮ್ಮ ಅಪೇಕ್ಷೆಯನ್ನು ಪೂಜ್ಯರಲ್ಲಿ ಬಿನ್ನವಿಸಿಕೊಳ್ಳುತ್ತಾರೆ. "ನಿನ್ನ ಆಲೋಚನೆ ಸರಿಯಲ್ಲ. ನೀನು ಮುಂಚಿನಂತೆಯೇ ಬದುಕಬೇಕು. ಮತ್ತೊಬ್ಬರ ಹಂಗಿಗೊಳಗಾಗುವ ಪರಿಸ್ಥಿತಿ ಬರಬಾರದು. ನೀನು ಬದುಕಿರುವತನಕ ಆಸ್ತಿಯನ್ನು ಪರಭಾರೆ ಮಾಡುವುದು ಬೇಡ" ಎಂದು ಸ್ವಾಮೀಜಿ ಅವರಿಗೆ ತಿಳಿವಳಿಕೆ ಹೇಳುತ್ತಾರೆ. ಬೇರೆಯವರಾಗಿದ್ದರೆ ಅವರ ಆಸ್ತಿಯನ್ನೆಲ್ಲ ಲಪಟಾಯಿಸಿಕೊಂಡು ಬಹುಶಃ ಆ ತಾಯಿಯನ್ನು ಬೀದಿಪಾಲು

ಮಾಡುತ್ತಿದ್ದರೇನೊ! ಸ್ವಾಮೀಜಿಯ ದೂರದೃಷ್ಟಿ, ಮಾನವೀಯ ಅನುಕಂಪೆಯನ್ನು ನೋಡಿದಾಗ, ದೇವರೇ ಸ್ವಾಮೀಜಿಯ ರೂಪದಲ್ಲಿ ಜನ್ಮ ತಾಳಿದ್ದಾನೆ ಎನಿಸುತ್ತದೆ.

ಪೂಜ್ಯ ಮಹಾಸ್ವಾಮಿಗಳ ಅನುಕಂಪ ಮಾನವವರ್ಗಕ್ಕೆ ಮಾತ್ರ ಸೀಮಿತವಾಗಿರಲಿಲ್ಲ; ತೊಂದರೆಗೀಡಾಗಿರುವ ಮೂಕ ಪ್ರಾಣಿಗಳ ಬಗ್ಗೆಯೂ ಅವರಿಗೆ ಅಸಾಧಾರಣವಾದ ಕನಿಕರ. ವಿಶ್ರಾಂತಿಯಿಲ್ಲದೆ ಸದಾ ದುಡಿಮೆಯಲ್ಲಿಯೇ ಮಗ್ನರಾಗಿರುತ್ತಿದ್ದ ಅವರನ್ನು ಸನಿಹದಲ್ಲಿರುತ್ತಿದ್ದ ಯಾರಾದರೂ ಸ್ವಾಮಿಗಳು ಸಂಜೆ ಹೊತ್ತು ವಾಯುವಿಹಾರಕ್ಕೆ ಕರೆದೊಯ್ಯುತ್ತಿದ್ದರು. ಒಮ್ಮೆ ಅವರು ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ತಿರುಗಾಡುತ್ತಿದ್ದು, ಕಾರ್ಯಾಲಯದ ಬಳಿ ಬಂದಾಗ, ಒಳಗಿನಿಂದ ನಾಯಿಮರಿ ಕುಂಯ್‌ಗುಡುವ ಧ್ವನಿ ಕೇಳಿಸುತ್ತದೆ. ಆ ಧ್ವನಿಯಲ್ಲಿಯೇ ರಾಜೇಂದ್ರ ಸ್ವಾಮಿಗಳಿಗೆ ಅದರ ಸಂಕಟ ಗೊತ್ತಾಗಿ ಅದಕ್ಕಾಗಿ ತುಂಬ ಮರುಗುತ್ತಾರೆ. ಅದನ್ನು ಹೊರಗೆ ಬಿಡುವಂತೆ ಜವಾನನಿಗೆ ಹೇಳುತ್ತಾರೆ. ಅವನ ಬಳಿ ಕೀಲಿಕೈ ಇರಲಿಲ್ಲ. 'ಈಗೇನೂ ಮಾಡುವಂತಿಲ್ಲ. ಹೇಗೂ ಬೆಳಗ್ಗೆ ಜವಾನರು ಬಂದು ಬಾಗಿಲು ತೆರೆದು ಅದನ್ನು ಹೊರಗೆ ಬಿಡುತ್ತಾರೆ. ನಾವೀಗ ಹೊರಡೋಣ' ಎಂದು ಪಕ್ಕದಲ್ಲಿದ್ದವರು ಸೂಚಿಸುತ್ತಾರೆ. "ಬೆಳಗಿನತನಕ ಆ ಪ್ರಾಣಿ ಹೀಗೆಯೇ ಒರಲುವುದಾದರೆ ಅದರ ಗತಿ ಏನಾಗಬಹುದು? ಹೊರಗಿರುವ ಅದರ ತಾಯಿಗೂ ಗೋಳು ತಪ್ಪದು" ಎಂದು ರಾಜೇಂದ್ರ ಸ್ವಾಮಿಗಳು ನುಡಿದು, ಕಾವಲುಗಾರನನ್ನು ಕರೆದು, "ಕೀಲಿಕೈ ಯಾರ ಬಳಿ ಇದೆ, ಪತ್ತೆಮಾಡಿ ಈಗಲೇ ತೆಗೆದುಕೊಂಡು ಬಾ. ನೀನು ಬರುವ ತನಕ ನಾವಿಲ್ಲಿಯೇ ಇರುತ್ತೇವೆ" ಎಂದು ಹೇಳಿ ಕಾವಲುಗಾರನನ್ನು ಕಳಿಸುತ್ತಾರೆ. ಅವನು ಬರುವತನಕ ಕಾದಿದ್ದು, ನಾಯಿಮರಿಯನ್ನು ಹೊರಗೆ ಬಿಡಿಸಿ, ಅದರ ಬೆನ್ನು ತಟ್ಟಿ, ಮಠದ ಕಡೆಗೆ ಸ್ವಾಮೀಜಿಯೂ, ಅವರ ಗೆಳೆಯರೂ ಹೊರಡುತ್ತಾರೆ.

□

- ಶಿಕ್ಷಣವೇ ಸಮಸ್ತ ಪ್ರಗತಿಯ ಬೀಜ, ಅದೇ ತಾಯಿಬೇರು.
- ವಿದ್ಯಾರ್ಥಿಗಳು ದೇಶದ ಮುಂದಿನ ಭವಿಷ್ಯದ ನಿರ್ಮಾತೃಗಳು.
- ಗ್ರಾಮಾಂತರ ಪ್ರದೇಶದಲ್ಲಿರುವ ಪ್ರತಿಯೊಬ್ಬರೂ ವಿದ್ಯಾವಂತರಾಗುವುದು ದೇಶದ ಉನ್ನತಿಯ ತಳಹದಿ.
- ಸಮಾಜದಲ್ಲಿ ವಿದ್ಯೆಯಿಂದ ವಂಚಿತನಾದ ಒಬ್ಬ ವ್ಯಕ್ತಿಯೂ ಇರಬಾರದು. ಅದಕ್ಕಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು.

**– ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು**

# ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ನುಡಿನಮನ

ಡಾ. ಬಿ. ನಂಜುಂಡಸ್ವಾಮಿ

ಪ್ರಪಂಚದ ಧಾರ್ಮಿಕ ಇತಿಹಾಸದಲ್ಲಿ ಭಾರತ ದೇಶಕ್ಕೆ ವಿಶೇಷವಾದ ಸ್ಥಾನ. ಈ ಮಣ್ಣಿನಲ್ಲಿ ಶಕ್ತಿವಿಶಿಷ್ಟಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಗಾಣಪತ್ಯ, ಶಾಕ್ತ, ಬೌದ್ಧ, ಜೈನ, ಚಾರ್ವಾಕ ಧರ್ಮಗಳಲ್ಲದೆ ವಿದೇಶಿ ನೆಲದಲ್ಲಿ ಹುಟ್ಟಿ ಭಾರತದಲ್ಲಿ ಪ್ರಸಾರವಾಗಿರುವ ಕ್ರೈಸ್ತ, ಇಸ್ಲಾಂ, ಜರಾತುಷ್ಟ್ರ ಧರ್ಮಗಳ ಭಕ್ತಾದಿಗಳನ್ನು ನಾವು ನೋಡಬಹುದು. ಈ ದೇಶದಲ್ಲಿ ಹುಟ್ಟಿ ಬೆಳೆದ ಧರ್ಮಗಳಲ್ಲಿ ವಿವಿಧತೆಯಲ್ಲಿ ಏಕತೆ ಇದೆ. ಭಾರತ ದೇಶದಲ್ಲಿ ಅಳಿದು ಉಳಿದು ರಾಜಮನೆತನಗಳ ಪೈಕಿ ವಿಶೇಷವಾದ ಗೌರವ ನಮ್ಮ ಮೈಸೂರು ಒಡೆಯರ ಮನೆತನಕ್ಕೆ. ಮೈಸೂರು ರಾಜ್ಯದ ಕಟ್ಟಕಡೆಯ ದೊರೆ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ 'ರಾಜಗುರುತಿಲಕ' ಅನ್ನುವ ಗೌರವವಲ್ಲದೆ ಅರಮನೆಯಿಂದ ಜಗದ್ಗುರುಗಳ ಮೆರವಣಿಗೆಯಲ್ಲಿ ಸುತ್ತೂರು ಸಂಸ್ಥಾನ ಮಠಕ್ಕೆ ತೆಗೆದುಕೊಂಡು ಹೋಗಲು ವಿವಿಧ ಆಯುಧಗಳನ್ನು, ಶ್ವೇತಛತ್ರಿ, ಆನೆ, ಕುದುರೆ, ಸೂರ್ಯಪಾನ, ಚಂದ್ರಪಾನ ಮುಂತಾದ ಗೌರವ ಪತಾಕೆಗಳನ್ನು, ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಬಳಸಲು ನಿರೂಪವನ್ನು ಸಹ ಕೊಟ್ಟು ಗೌರವಿಸಿದ್ದಾರೆ. ಮೈಸೂರು ನಗರ ಮತ್ತು ಪರಿಸರದ ವೀರಶೈವ ಅಥವಾ ಲಿಂಗವಂತ ಅಥವಾ ಶಿವಾಚಾರ ಧರ್ಮದ ಬಗ್ಗೆ ಸೂಕ್ಷ್ಮವಾದ ಅಧ್ಯಯನವಾಗಬೇಕು. ಮೈಸೂರು ನಗರದ ವೀರಶೈವ ಮಠಗಳ ಬಗ್ಗೆ ಅವುಗಳು ನಡೆಸುತ್ತಾ ಇದ್ದ ದಾಸೋಹದ ಬಗ್ಗೆ, ಅವುಗಳ ಮಾಡುತ್ತಾ ಇದ್ದ ಸಾಹಿತ್ಯ ಸೇವೆ ಬಗ್ಗೆ ವಿವರವಾದ ಅಧ್ಯಯನ ನಡೆಯಬೇಕು. ಕನ್ನಡ ನಾಡಿನಲ್ಲಿ ಓಲೆಗರಿಯಿಂದ ಮುದ್ರಣಕ್ಕೆ ಗ್ರಂಥವನ್ನು ಮೊದಲು ಸಂಪಾದನೆ ಮಾಡಿ ಪ್ರಕಟಿಸಿದ ಸ್ಥಳೀಯ ವಿದ್ವಾಂಸರ ಪೈಕಿ ಪ್ರಮುಖರು ವ್ಯಾಕರಣದ ಮಲ್ಲಪ್ಪನವರು, "ರಾಜಶೇಖರ ವಿಳಾಸ"ವನ್ನು ಸಂಪಾದಿಸಿ ಸುಮಾರು 1862ರಲ್ಲಿ ಪ್ರಕಟಿಸಿದರು. ಕನ್ನಡನಾಡಿನ ಆದ್ಯ ಗ್ರಂಥ ಸಂಪಾದಕರ ಪಟ್ಟ ವ್ಯಾಕರಣದ ಮಲ್ಲಪ್ಪನವರದೆ. ಭಾರತ ದೇಶದಲ್ಲಿ ಕೆಳವರ್ಗದವರಿಗೆ ಸರ್ಕಾರಿ ನೌಕರಿ ಎಂಬ ಚರ್ಚೆ ಪ್ರಾರಂಭವಾಗಿದ್ದು, ಮೀಸಲಾತಿ ಬಗ್ಗೆ ಬಹಳಷ್ಟು ಕೆಲಸ ಮಾಡಿದ್ದು

ಮೈಸೂರು ನಗರದ ಯಜಮಾನ್ ವೀರಸಂಗಪ್ಪನವರ ಮೈಸೂರು ಸ್ಟಾರ್ ಪತ್ರಿಕೆ. ಮೈಸೂರು ನಗರದಲ್ಲಿ ಕನ್ನಡ ಸಾಹಿತ್ಯಕ್ಕೆ ದುಡಿದ ಒಂದು ದೊಡ್ಡ ತಂಡವೆ ಇತ್ತು. ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳು, ವ್ಯಾಕರಣದ ಮಲ್ಲಪ್ಪನವರು, ಆಸ್ಥಾನ ಮಹಾವಿದ್ವಾನ್ ಕರ್ನಾಟಕ ಭಾಷಾರತ್ನಂ ಪಿ.ಆರ್. ಕರಿಬಸವಶಾಸ್ತ್ರಿಗಳು, ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿಗಳು, ಮೈಸೂರು ಹೊಸಮಠದ ಆಸ್ಥಾನ ವಿದ್ವಾನ್ ಬಸವಲಿಂಗಸ್ವಾಮಿಗಳು, ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಹೀಗೆ ಇನ್ನು ಹಲವು ವಿದ್ವಾಂಸರು ನೂರಾರು ಕನ್ನಡ ಸಂಸ್ಕೃತ ಗ್ರಂಥಗಳನ್ನು ಸಂಪಾದಿಸಿ ಪ್ರಕಟಮಾಡಿದರು.

ಮೈಸೂರು ನಗರದ ದಸರಾ ಮಹೋತ್ಸವ ಪ್ರಾರಂಭವಾಗುವುದೆ 'ನಂದಿಧ್ವಜ ಪೂಜೆಯಿಂದ'. ಶಿವಸರ್ವೋತ್ತಮತ್ತ್ವವನ್ನು ಪ್ರತಿಪಾದಿಸುವಂತಹ ನಂದಿಧ್ವಜಕ್ಕೆ ಎಲ್ಲಾ ಗ್ರಾಮದಲ್ಲು ಬಹಳ ಗೌರವ. ಇಂತಹ ಸಾಂಸ್ಕೃತಿಕ ಶ್ರೀಮಂತ ಪ್ರದೇಶದಲ್ಲಿ ಮೈಸೂರು ನಗರಕ್ಕೆ ಇಪ್ಪತ್ತು ಕಿ.ಮೀ. ದೂರ ಇದ್ದ ಸುತ್ತೂರು ಮಠ 1923ರವರೆಗೆ ಸಾಮಾನ್ಯ ಎಲ್ಲಾ ಮಠಗಳಂತೆ ಶಿವಪೂಜೆ – ಪಾದಪೂಜೆ – ಪಾದೋದಕ ಪ್ರಸಾದಕ್ರಿಯೆ, ದಾಸೋಹ ಇವುಗಳನ್ನು ನಡೆಸುತ್ತಾ ತನ್ನ ಪಾಲಿನ ಸೇವೆಯನ್ನು ಸಲ್ಲಿಸುತ್ತಾ ಇತ್ತು. ಲಿಂ॥ ಡಾ. ಫ.ಗು. ಹಳಕಟ್ಟಿಯವರು ಘನಲಿಂಗದೇವರ ವಚನ ಸಂಪಾದಿಸಿ ಪ್ರಕಟಿಸಿದಾಗ ಅವರಿಗೆ ಸುತ್ತೂರು ಮಠ ಎಲ್ಲಿ ಇದೆ ಅನ್ನುವ ವಿವರವೆ ಗೊತ್ತಿರಲಿಲ್ಲ.

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮೈಸೂರು ನಗರದಲ್ಲಿ ವಿದ್ಯಾರ್ಥಿಗಳಿಗೋಸ್ಕರ ಪ್ರಸಾದನಿಲಯಗಳನ್ನು ಪ್ರಾರಂಭಮಾಡಿ ಹಲವು ಶಾಲಾ ಕಾಲೇಜುಗಳನ್ನು ಸ್ಥಾಪಿಸಿದ ಮೇಲೆ ಇಡೀ ಭರತಖಂಡಕ್ಕೆ ಸುತ್ತೂರು ಮಠದ ಪರಿಚಯವಾಯಿತು. ನನ್ನ ಭಾಗ್ಯ ನನ್ನ ತಂದೆ ಲಿಂ॥ ಎ. ಬಸವರಾಜು ಮೈಸೂರು ನಗರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ 1955–1965ರ ತನಕ ಕೆಲಸದಲ್ಲಿ ಇದ್ದರು. ಬಾಲ್ಯದಲ್ಲಿ ನನ್ನ ತಂದೆ ಮತ್ತು ನನ್ನ ತಾಯಿ ನನ್ನನ್ನು ಎತ್ತಿಕೊಂಡು ಹೋಗಿ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಆಶೀರ್ವಾದವನ್ನು ಮಾಡಿಸಿಕೊಂಡು ಬಂದಿದ್ದರಂತೆ. ನನ್ನ ತಂದೆ ನನ್ನ ಹತ್ತಿರ ಪರಮಪೂಜ್ಯರ ಬಗ್ಗೆ ಯಾವಾಗಲೂ ಅವರ ಸೇವೆ ಬಗ್ಗೆ ಬಹಳ ಒಳ್ಳೆಯ ಮಾತನ್ನು ಹೇಳುತ್ತಾ ಇದ್ದರು. ಅವರಿಗೆ ಅವರ ಬಗ್ಗೆ ಬಹಳ ಭಕ್ತಿ. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ವಿದ್ಯಾಸಂಸ್ಥೆಗಳ ಜೊತೆಗೆ ಶ್ರೀಮಠವನ್ನು ಗೌರೀಶಂಕರದ ಎತ್ತರಕ್ಕೆ ತೆಗೆದುಕೊಂಡು ಹೋದರು. ಅಂದಿನ ದಿನಮಾನದಲ್ಲಿ ಸುತ್ತೂರು ಹಾಸ್ಟಲ್ ವಿದ್ಯಾರ್ಥಿಗಳು ಓದಿ ವಿದ್ಯಾವಂತರಾಗಿ ತಮ್ಮ ಪದವಿಗಳನ್ನು ಪಡೆದುಕೊಂಡ ಮೇಲೆ ಬೀಳ್ಕೊಡುಗೆ ಸಮಾರಂಭವನ್ನು ಇಟ್ಟುಕೊಳ್ಳುತ್ತಾ ಇದ್ದರು. ಇಂತಹ ಒಂದು ಬೀಳ್ಕೊಡುಗೆ ಸಮಾರಂಭಕ್ಕೆ ಲಿಂ॥ ಪ್ರೊ॥ ಶಿ.ಶಿ. ಬಸವನಾಳರು ಬಂದಿದ್ದರು. ಪರಮಪೂಜ್ಯರ ಆಶ್ರಯವನ್ನು ಬೇಡಿ

ದೂರದ ಶಿವಯೋಗಮಂದಿರದಿಂದ **'ಸದ್ಧರ್ಮ ದೀಪಿಕೆ'** ಚೆನ್ನಮಲ್ಲಿಕಾರ್ಜುನರು ಬಂದು, ಮೊದಲು ಎರಡು ವರ್ಷ ಕ್ಯಾತನಹಳ್ಳಿ ಸಿದ್ಧಲಿಂಗಪ್ಪನವರ ಸಂಸ್ಕೃತ ಪಾಠಶಾಲೆಯಲ್ಲೆ ಇದ್ದರು.

ಮೈಸೂರು ಹೊಸಮಠದ ಬಸವಲಿಂಗಸ್ವಾಮಿಗಳು ಬಹಳ ದೊಡ್ಡ ವಿದ್ವಾಂಸರು. ಸಂಸ್ಕೃತ ಕನ್ನಡ ಎರಡೂ ಭಾಷೆಯಲ್ಲಿ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿದ್ದಾರೆ. ಅರಮನೆ ಪಂಚಗವಿ ಮಠದ ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಗೌರೀಶಂಕರ ಸ್ವಾಮಿಗಳಿಗೆ ನಿರಂಜನ ಪಟ್ಟಾಧಿಕಾರ ಮಾಡಿದವರು. ತುಂಬಾ ಮಡಿ, ತ್ರಿಕಾಲ ಶಿವಪೂಜೆ, ಪಂಚೆಯನ್ನು ಅಥವಾ ಕಪಿನಿಯನ್ನು ಸ್ವಲ್ಪ ಮೇಲೆ ನೆಲಮುಟ್ಟದಂತೆ ಧರಿಸುತ್ತಾ ಇದ್ದರಂತೆ. ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಡಾ. ಇಮ್ಮಡಿ ಶಿವಬಸವಸ್ವಾಮಿಗಳವರಿಗೂ ಪಟ್ಟಾಧಿಕಾರದಲ್ಲಿ ಅವರಿಂದಲೇ ಮಂತ್ರ ಉಪದೇಶ ಮತ್ತು ನಿರಂಜನ ಪಟ್ಟಾಧಿಕಾರ ನೆರವೇರಿದ್ದು. ಆ ಸಮಯದಲ್ಲಿ ಪರಮಪೂಜ್ಯ ಗೌರೀಶಂಕರ ಸ್ವಾಮಿಗಳು ಮತ್ತು ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಸಂಭಾಷಣೆ ಮಾಡುತ್ತ ಕುಂದೂರು ಮಠದಲ್ಲಿ ಕುಳಿತಿದ್ದರಂತೆ. ಹೊಸಮಠದ ಬಸವಲಿಂಗಸ್ವಾಮಿಗಳನ್ನು ಕಂಡ ತಕ್ಷಣ ಅರಮನೆ ಪಂಚಗವಿ ಮಠದ ಗೌರೀಶಂಕರ ಸ್ವಾಮಿಗಳು ಎದ್ದು ನಿಂತು ಸಾಷ್ಟಾಂಗ ಹಾಕಿದರಂತೆ. ಪಟ್ಟಾಧಿಕಾರಿಯಾದ ಬಾಲಕ ಸ್ವಾಮಿಯ ಮಾರ್ಗದರ್ಶನಕ್ಕೆ ಬಂದಿದ್ದು ಎಂದು ಪೂಜಾಮರಿಯಿಂದ ತಿಳಿದು ಎಲ್ಲರೂ ಕೆಲಹೊತ್ತು ಶಿವಾನುಭವ ಚರ್ಚೆ ಮಾಡಿದ್ದು ನನ್ನ ಸ್ಮೃತಿಪಟಲದಲ್ಲಿ ಹಾಗೇ ಇದೆ ಎಂದು ನನ್ನ ಹತ್ತಿರ ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಡಾ. ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಹೇಳಿದ್ದರು. ಉತ್ತರ ಕರ್ನಾಟಕದ ಸ್ವಾಮಿಗಳು ಮೈಸೂರು ಪರಿಸರದಲ್ಲಿ ಏನೇ ಕೆಲಸಕಾರ್ಯಗಳು ಇದ್ದರು ಅವರೆಲ್ಲ ಬರುತ್ತಾ ಇದ್ದದ್ದು ಸುತ್ತೂರು ಮಠಕ್ಕೆ. ಧಾರವಾಡ ಮುರುಘಾಮಠದ ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಶ್ರೀ ಮೃತ್ಯುಂಜಯಸ್ವಾಮಿಗಳು ಶಿವಾನುಭವಿಗಳು, ಶಿವಾನುಭವ ತತ್ತ್ವಪ್ರೇಮಿಗಳು. ಸದಾ ಗುರು–ಲಿಂಗ–ಜಂಗಮ ಸೇವಾದುರಂಧರರು. ಧಾರವಾಡ ನೆಲದಲ್ಲಿ ಸಾಹಿತ್ಯ–ಸಂಸ್ಕೃತಿ ಪೋಷಣೆಯಲ್ಲಿ ಕರ್ಣಧಾರತ್ವವನ್ನು ವಹಿಸಿದವರು. ಅವರಿಗೆ ಸೋಸಲೆ ತೋಪಿನ ಮಠದ ಷಡಕ್ಷರಸ್ವಾಮಿಗಳ ವೈರಾಗ್ಯದ ಬಗ್ಗೆ ಮಾಹಿತಿ ತಿಳಿದು, ಅವರ ದರ್ಶನ ಮಾಡಬೇಕು ಎಂದು ತಮ್ಮ ಜೊತೆ ಹಲವು ವಿರಕ್ತ ಮೂರ್ತಿಗಳನ್ನು ಮೈಸೂರು ನಗರದ ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳನ್ನು ಕರೆದುಕೊಂಡು ಸೋಸಲೆ ತೋಪಿನಮಠಕ್ಕೆ ಬಂದರು. ಆ ಮಹಾನ್ ವಿರಕ್ತ ಮೂರ್ತಿಗಳು ಇವರುಗಳನ್ನು ಎದುರುಗೊಳ್ಳಲು ದ್ವಾರದ ಹತ್ತಿರ ಮಡಿಯ ಬಟ್ಟೆಯ ತೆರೆ ಹಿಂದೆ ನಿಂತಿದ್ದರಂತೆ. ಎಲ್ಲರಿಗೂ ತಾವೇ ಮೊದಲು ಸಾಷ್ಟಾಂಗ ಹಾಕಿ ಅಪ್ಪಗಳೆ ಅಷ್ಟು ದೂರದಿಂದ ಇಲ್ಲಿಗೆ ಹೇಗೆ ಬಂದಿರಿ ಅಂದಾಗ, ಮೃತ್ಯುಂಜಯಪ್ಪಗಳು ಉಗಿಬಂಡಿಯಲ್ಲಿ ಅಂದರಂತೆ, ಉಗಿಬಂಡಿ ಹೇಗೆ ಇರುತ್ತೆ ಎಂದು ಕಣ್ಣು ಮುಚ್ಚಿ ಮೂಗಿನ ಮೇಲೆ ಬೆರಳು ಇಟ್ಟು

ಎರಡು ನಿಮಿಷ ಬಿಟ್ಟು ನೋಡಿದೆ ಅಬ್ಬ ಎಷ್ಟು ಉದ್ದ ಇದೆ ಅಂದರಂತೆ. ಎಲ್ಲರೂ ಕಾವೇರಿ ನದಿ ಸ್ನಾನ ಮಾಡಿ ಶಿವಪೂಜಾದಿಗಳನ್ನು ಮುಗಿಸಿ ತೋಪಿನಮಠದ ಶ್ರೀಗಳ ಆಚಾರ–ವೈರಾಗ್ಯ ನೋಡಿ ಸಂತೋಷಪಟ್ಟು ಹೊರಟು ಬಂದರು. ಅಂದಿನ ದಿನದಲ್ಲಿ ನೂರಾರು ಜನ ಸ್ವಾಮಿಗಳು ದಸರಾ ಮಹೋತ್ಸವ ನೋಡಲು ಮೈಸೂರು ನಗರಕ್ಕೆ ಬಂದು ಸುತ್ತೂರು ಮಠದಲ್ಲಿ ಇರುತ್ತಾ ಇದ್ದರು. ಬಂದಂತಹ ಎಲ್ಲಾ ಹರ–ಗುರು–ಚರಮೂರ್ತಿಗಳಿಗೆ ತ್ರಿಕಾಲ ಶಿವಪೂಜೆ ಮಹಾಪ್ರಸಾದದ ವ್ಯವಸ್ಥೆಯನ್ನು ಮಾಡುತ್ತಾ ಇದ್ದರು. ನನ್ನ ಪ್ರಕಾರ ಕರ್ನಾಟಕದಲ್ಲಿ 'ಅರಮನೆ ಶಿಸ್ತು' ಉಳಿದುಬಂದಿರುವುದೆ ಸುತ್ತೂರು ಮಠದಲ್ಲಿ.

ಕನ್ನಡ–ಸಂಸ್ಕೃತ ಎರಡು ಭಾಷೆಯಲ್ಲಿ ಸಾಹಿತ್ಯ ಸೇವೆ ಮಾಡಿದ ಆಸ್ಥಾನ ವಿದ್ವಾಂಸರು ಆದ ಲಿಂ॥ ಎಂ.ಜಿ. ನಂಜುಂಡಾರಾಧ್ಯರು ನನ್ನ ಹತ್ತಿರ ಸುತ್ತೂರು ಜಗದ್ಗುರುಗಳ ದಾಸೋಹ ನಡೆಸಲು, ವಿದ್ಯಾರ್ಥಿನಿಲಯಗಳನ್ನು ನಡೆಸಲು ಪಟ್ಟ ಕಷ್ಟವನ್ನು ಹೇಳುತ್ತಾ ಇದ್ದರು. ಶ್ರೀಮನ್ ಪಂಡಿತಾರಾಧ್ಯ ಪರಂಪರಾಗತ ಶ್ರೀ ನಿಡುಮಾಮಿಡಿ ಸೂರ್ಯಸಿಂಹಾಸನಾಧೀಶ್ವರ 1008 ಜಗದ್ಗುರು ಶ್ರೀ ಚನ್ನಬಸವರಾಜೇಂದ್ರ ಸ್ವಾಮಿಗಳು ಶ್ರೀ ಜಚನಿ ಎಂದು ಪ್ರಸಿದ್ಧರಾದ ಲೇಖಕ–ವಿದ್ವಾಂಸರು ಮೇಲಿಂದ ಮೇಲೆ ನಾನಾ ಕಾರ್ಯಕ್ರಮಗಳಿಗೆ ಮೈಸೂರು ನಗರಕ್ಕೆ ಸುತ್ತೂರು ಮಠದ ಕಾರ್ಯಕ್ರಮಗಳಿಗೆ ಹೋಗುತ್ತಾ ಇದ್ದರು. ಅಲ್ಲಿನ ವ್ಯವಸ್ಥೆ ಸುತ್ತೂರು ಜಗದ್ಗುರುಗಳ ದಾಸೋಹಭಾವ ಈ ಎಲ್ಲಾ ವಿಷಯವನ್ನು ಬಹಳ ಸಂತೋಷದಿಂದ ಹೇಳಿದ್ದನ್ನು ನಾನೆ ನನ್ನ ಕಿವಿಯಾರೆ ಕೇಳಿದ್ದೇನೆ. ಹಿರಿಯ ಜಗದ್ಗುರುಗಳು ಮಂತ್ರಮಹರ್ಷಿಗಳು ಮತ್ತು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಮತ್ತು ಈಗ ವೀರಸಿಂಹಾಸನದ ಮೇಲೆ ವಿರಾಜಮಾನರಾಗಿರುವ ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳವರು ಅಭಿಮಾನ ಪ್ರೀತಿ ಬಗ್ಗೆ ನನ್ನ ಹತ್ತಿರ ಸಂತೋಷದಿಂದ ಮಾತನಾಡಿದ್ದು ಚೆನ್ನಾಗಿ ನೆನಪಿದೆ.

ಪ್ರೊ॥ ತ.ಸು. ಶಾಮರಾಯರು ತಮ್ಮ ಇಳಿ ವಯಸ್ಸಿನಲ್ಲಿ ಹಲವು ವರ್ಷ ಗುಬ್ಬಿ ಚಿದಂಬರಾಶ್ರಮದಲ್ಲಿ ನೆಲೆಸಿದ್ದರು. ಆಗ ನಾನು ಬಳ್ಳಾರಿಯಲ್ಲಿ ಆಯುರ್ವೇದ ವೈದ್ಯಕೀಯ ಅಭ್ಯಾಸ ಮಾಡುತ್ತಾ ಇದ್ದೆ. ಗುಬ್ಬಿಗೆ ಬಂದಾಗಲೆಲ್ಲಾ ಮೇಲಿಂದ ಮೇಲೆ ಅವರನ್ನು ಭೇಟಿಯಾಗಲು ಹೋಗುತ್ತಿದ್ದೆ. ಸಂಜೆ ವಾಯುಸಂಚಾರಕ್ಕೆ ನನ್ನನ್ನು ಕರೆದುಕೊಂಡು ಹೋಗುತ್ತಾ ಇದ್ದರು. ತಮ್ಮ ಅನುಭವ, ಹಿರಿಯ ವಿದ್ವಾಂಸರ ವಿಷಯ, ತಮ್ಮ ತಂದೆ–ತಾಯಿ, ಅಣ್ಣನವರು ಅವರಿಗೆ ಪರಮಪೂಜ್ಯರು ಆದ ಪ್ರೊ॥ ತ.ಸು. ವೆಂಕಣ್ಣಯ್ಯನವರ ಬಗ್ಗೆ ವಿವರವಾಗಿ ಮಾತನಾಡುತ್ತಾ ಇದ್ದರು. ಒಂದು ದಿನ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಮಾಡಿದ ಉಪಕಾರವನ್ನು ತುಂಬಾ ಹೊತ್ತು ನನ್ನ ಹತ್ತಿರ ವಿವರವಾಗಿ ಹೇಳಿದ್ದು ಇಂದಿಗೂ ನನ್ನ ಸ್ಮೃತಿಪಟಲದಲ್ಲಿ ಉಳಿದು

ಬಂದಿದೆ. ತಮ್ಮ ಶಿಷ್ಯರಾದ ಪ್ರೊ. ಜಿ.ಎಸ್. ಶಿವರುದ್ರಪ್ಪ, ಡಾ. ಹಾ.ಮಾ. ನಾಯಕ, ಡಾ. ಹಂಪ ನಾಗರಾಜಯ್ಯ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಾ.ಶಿ. ಮರುಳಯ್ಯ, ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ, ಪ್ರೊ. ಲಕ್ಷ್ಮೀನಾರಾಯಣ ಭಟ್ಟ, ಪ್ರೊ. ಎನ್. ಬಸವಾರಾಧ್ಯ ಮುಂತಾದವರ ಬಗ್ಗೆ ವಿವರವಾಗಿ ಮಾತನಾಡುತ್ತಾ ಇದ್ದರು. ಇಪ್ಪತ್ತು ವರ್ಷದ ನನ್ನ ಬಾಲಬುದ್ಧಿಗೆ ಆಗ ಸರಿಯಾಗಿ ಅರ್ಥವಾಗಲಿಲ್ಲ. ಆದರೆ ಈಗ ಅವರ ಮಾತನ್ನು ನಾನು ಇಂದಿಗೂ ಮೆಲುಕುಹಾಕುತ್ತಾ ಇರುತ್ತೇನೆ.

ಪರಮಪೂಜ್ಯ ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳಿಗೂ ಪರಮಪೂಜ್ಯ ಸುತ್ತೂರು ಜಗದ್ಗುರು ಶ್ರೀ ರಾಜೇಂದ್ರ ಸ್ವಾಮಿಗಳಿಗೂ ಬಹಳ ವಿಶ್ವಾಸ, ಪರಸ್ಪರ ಗೌರವ. ಸಿದ್ಧಗಂಗಾಮಠದ ಹಲವು ಕಾರ್ಯಕ್ರಮಗಳಿಗೆ ಸುತ್ತೂರು ಜಗದ್ಗುರುಗಳ ದರ್ಶನ ಮಾಡುವ ಸೌಭಾಗ್ಯ ನನದಾಯಿತು. 1979–1980ರಲ್ಲಿ ತುಮಕೂರು ನಗರದಲ್ಲಿ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮ ಏರ್ಪಾಡು ಮಾಡಲಾಗಿತ್ತು. ಆ ಕಾರ್ಯಕ್ರಮಕ್ಕೆ ಮೈಸೂರಿನಿಂದ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಬಂದಿದ್ದು ಅವರ ಮಾತನ್ನು ಕೇಳಿದ್ದು ನೆನಪು.

ಪರಮಪೂಜ್ಯ ಕುಮಾರ ನಿಜಗುಣಸ್ವಾಮಿಗಳು ಮೈಸೂರು ನಗರಕ್ಕೆ ಹೋದಾಗಲೆಲ್ಲಾ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ದರ್ಶನಮಾಡಿ, ಅವರೊಡನೆ ಶಿವಪೂಜೆ ಪ್ರಸಾದವನ್ನು ಸ್ವೀಕರಿಸುತ್ತಾ ಇದ್ದರು. ಜಗದ್ಗುರುಗಳು ಎಷ್ಟೇ ಕಾರ್ಯ ಒತ್ತಡವಿದ್ದರೂ ಭಕ್ತರ ಪೂಜಾಪ್ರಸಾದಗಳ ವ್ಯವಸ್ಥೆ ಬಗ್ಗೆ ಮಠದ ಸಿಬ್ಬಂದಿಯನ್ನು ಎಚ್ಚರಿಸುತ್ತಾ ಇದ್ದರಂತೆ.

1985ರಲ್ಲಿ ಮೈಸೂರು ನಗರದಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಕಡೆಯ ದಿನ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಧರ್ಮ ಮತ್ತು ಸಾಮಾಜಿಕ ಸಂದರ್ಭದ ಬಗ್ಗೆ ವಿಶೇಷ ವಿಚಾರಗೋಷ್ಠಿ ಏರ್ಪಡಿಸಲಾಗಿತ್ತು. ಡಾ. ಹಂ.ಪ ನಾಗರಾಜಯ್ಯನವರಿಂದ ಸ್ವಾಗತ ವಿಶ್ವಧರ್ಮ ಗೋಷ್ಠಿಗೆ. ಈ ಗೋಷ್ಠಿಯ ಸಾನ್ನಿಧ್ಯ ಪರಮಪೂಜ್ಯ ಶ್ರೀ ಸುತ್ತೂರು ಶಿವರಾತ್ರಿ ರಾಜೇಂದ್ರ ಸ್ವಾಮಿಗಳದು. ಉಪನ್ಯಾಸಗಳು ಶ್ರವಣಬೆಳಗೊಳದ ಜಗದ್ಗುರು ಚಾರುಕೀರ್ತಿ ಭಟ್ಟಾರಕರದು. ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಸುರೇಶಾನಂದರು. ಶ್ರೀ ಆದಿಚುಂಚನಗಿರಿ ಸಂಸ್ಥಾನ ಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರದು. ಅಧ್ಯಕ್ಷತೆ ಮಾಡಿದ ಪೂಜ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರದು. ಗೋಷ್ಠಿಯನ್ನು ಉದ್ಘಾಟನೆ ಮಾಡಿ ಉದ್ಘಾಟನಾ ಭಾಷಣ ಮಾಡಿದ ಪೂಜ್ಯ ಜಗದ್ಗುರುಗಳು ಅವರ ಮಾತು ಇಂದಿಗೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದೆ. ನಾನು ಹತ್ತಾರು ಬಾರಿ ಮೈಸೂರು ಸುತ್ತೂರು ಮಠಕ್ಕೆ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಇದ್ದಾಗ

ಭೇಟಿಕೊಟ್ಟಿದ್ದೆ. ಅಂದಿನ ದಿನಮಾನಕ್ಕೆ ಡಾ. ಎಲ್. ಬಸವರಾಜು ಸಂಪಾದಿಸಿದ **"ಶಿವದಾಸ ಗೀತಾಂಜಲಿ"** ಪುಸ್ತಕದ ಮುದ್ರಣ ಪ್ರತಿಗಳು ಮುಗಿದುಹೋಗಿತ್ತು. ನಾನು ಪುಸ್ತಕ ಬೇಕು ಎಂದು ಅರಿಕೆ ಮಾಡಿಕೊಂಡಾಗ ಒಳಗೆಲ್ಲಾ ಹುಡುಕಿಸಿದರು. ನಕ್ಕು ಇನ್ನೊಂದು ಸಾರಿ ಬಾ ಹುಡುಕಿಸಿ ಇಟ್ಟಿರುತ್ತೇನೆ ಎಂದು ಹೇಳಿ ಬಾಳೆಹಣ್ಣು ಕೊಟ್ಟು ಆಶೀರ್ವಾದ ಮಾಡಿದರು.

ಸುತ್ತೂರು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಲಿಂಗೈಕ್ಯರಾದಾಗ ಅವರಿಗೆ 70 ವರ್ಷ ವಯಸ್ಸು. ಪರಮೇಶ್ವರ ತನಗೆ ಬೇಕು ಎಂದು ಬೇಗ ಕರೆದುಕೊಂಡುಬಿಟ್ಟ. ಅಂದಿನ ದಿನಮಾನದಲ್ಲಿ ಲಿಂ॥ ಆಸ್ಥಾನ ವಿದ್ವಾನ್ ಕೀರ್ತನಕೇಸರಿ ಪದ್ಮಶ್ರೀ ಡಾ. ಬಿ. ಶಿವಮೂರ್ತಿ ಶಾಸ್ತ್ರಿಗಳ ಸಾಹಿತ್ಯ ಸೇವೆಗೆ ದೊಡ್ಡ ಶಕ್ತಿ ಅಂದರೆ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು. ಪ್ರತಿ ತಿಂಗಳು ಪ್ರಕಟವಾಗುತ್ತಾ ಇದ್ದ ಶರಣ ಸಾಹಿತ್ಯ ಪತ್ರಿಕೆ ಮತ್ತು ಶರಣ ಸಾಹಿತ್ಯ ಗ್ರಂಥಮಾಲೆಯಿಂದ ತಿಳಿದುಬರುತ್ತದೆ. ಜಗದ್ಗುರು ಲಿಂಗೈಕ್ಯರಾದಾಗ ತುಮಕೂರಿನಿಂದ ನನ್ನ ಸೋದರಮಾವ ಲಿಂ॥ ಎನ್.ಪಿ. ಜಗದೀಶ್, ಲಿಂ॥ ಟಿ.ಹೆಚ್. ಕೆಂಪಹೊನ್ನಯ್ಯ, ಕೆ.ಜಿ.ವೈ. ಮೂರ್ತಿ ಮುಂತಾದವರೆಲ್ಲಾ ಅಂತಿಮದರ್ಶನ ಮತ್ತು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದರು. ನಾನು ತುಮಕೂರಿನ ಸೊಗಡು ಪತ್ರಿಕೆಯಲ್ಲಿ ಜಗದ್ಗುರುಗಳ ಸೇವಾಮಣಿಹದ ಬಗ್ಗೆ ಲೇಖನ ಬರೆದು ನನ್ನ ಗೌರವವನ್ನು ಸಲ್ಲಿಸಿದೆ.

**"ಶರಣಜ್ಯೋತಿ"** ಶ್ರೀ ಬಸವ ಜಯಂತಿ ಸ್ಮರಣ ಸಂಚಿಕೆ 1972, ಸಂಚಿಕೆ 3, ಶ್ರೀ ಬಸವ ಸೇವಾ ಸಮಿತಿ B.E.L ಕಾಲೋನಿ, ಬೆಂಗಳೂರು–13. ಸಂಚಿಕೆಯಲ್ಲಿ ಶ್ರೀಮತ್ಸುತ್ತೂರು ವೀರಸಿಂಹಾಸನಾಧೀಶ್ವರರಾದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಶುಭಾಶೀರ್ವಚನದಲ್ಲಿ ಬಸವಣ್ಣನ ಬಗ್ಗೆ ಕಿರು ಲೇಖನ ಬರೆದಿದ್ದಾರೆ. ಅದನ್ನು ಯಥಾವತ್ತಾಗಿ ಕೊಡಲಾಗಿದೆ.

**ಓಂ**

**ಶ್ರೀಮತ್ಸುತ್ತೂರು ವೀರಸಿಂಹಾಸನಾಧೀಶ್ವರರಾದ**
**ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ**
**ಶುಭಾಶೀರ್ವಚನಗಳು**

ನೀವುಗಳು ಅರ್ಪಿಸಿದ ಶ್ರೀ ಬಸವ ಜಯಂತಿ ಉತ್ಸವದ ಬಿನ್ನಹದ ಓಲೆಯು ತಲುಪಿ ಮಹದಾನಂದವಾಗಿದೆ.

ಮಾನವಕೋಟಿಯನ್ನು ಮೇಲೆತ್ತುವಲ್ಲಿ ಮರ್ತ್ಯಲೋಕಕ್ಕೂ ಶಿವಲೋಕಕ್ಕೂ ನಿಚ್ಚಣಿಕೆಯಾಗಿ ನಿಂತು, ಶಿವಬೆಳಕನ್ನು ನೀಡಿ, ಮಾನವತೆಯನ್ನು ದಿವ್ಯತೆಗೇರಿಸಿ, ಉದ್ಧರಿಸಿದ, ಮಹಾತ್ಮ ಬಸವೇಶ್ವರರು ಕರ್ನಾಟಕದ ಯುಗಪುರುಷರಲ್ಲಿ

ಅಗ್ರಗಣ್ಯರೆನಿಸಿದ್ದಾರೆ. 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ' ಅವರ ರಚನಾತ್ಮಕ ಕ್ರಿಯಾಶಕ್ತಿಯು ಕರ್ನಾಟಕದಲ್ಲಿ ಕ್ರಾಂತಿಯ ಕಣಕಟ್ಟಿ ಕನ್ನಡಿಗರ ಬದುಕಿಗೆ ಹೊಸ ಮೌಲ್ಯಗಳನ್ನು ಕಲ್ಪಿಸಿಕೊಟ್ಟಿತು. 'ಇವನಾರವ? ಇವನಾರವ? ಇವನಾರವ? ಎಂದೆನಿಸದಿರಯ್ಯಾ; ಇವ ನಮ್ಮವ! ಇವ ನಮ್ಮವ! ಇವ ನಮ್ಮವ! ಎಂದೆನಿಸಯ್ಯಾ!' ಎನ್ನುವ ವಿಶ್ವಭ್ರಾತೃತ್ವದಿಂದ ದ್ವಿಜ ಮೊದಲು ಅಂತ್ಯಜ ಕಡೆಯಾಗಿ ಭಕ್ತರಾದವರನೆಲ್ಲಾ ಒಂದಾಗಿ ತನ್ನೊಳಗೆ ಅಪ್ಪಿಕೊಂಡು ಅನುಭವ ಮಂಟಪದ ಅಮರವೇದಿಕೆಯಿಂದ 'ಕಾಯಕವೇ ಕೈಲಾಸ' 'ದೇವನೊಬ್ಬ ನಾಮ ಹಲವು' 'ದಯವಿಲ್ಲದ ಧರ್ಮವದಾವುದಯ್ಯ' 'ಅರಿದರೆ ಶರಣ ಮರೆದರೆ ಮಾನವ' – ಎಂಬಿತ್ಯಾದಿ ಮಹೋನ್ನತ ಅಮೃತ ಸಂದೇಶವನ್ನಿತ್ತು ಲೋಕದ ಡೊಂಕನ್ನು ತಿದ್ದಿ, ನುಡಿಯೊಳಗೆ ನಡೆಯ ಪೂರೈಸಿ, ನದಿಯೊಳಗೆ ನದಿಯ ಬೆರೆಸಿದಂತೆ ಕೂಡಲ ಸಂಗಮನೊಳಗೆ ಕೂಡಿ ಒಂದಾಗಿ ಹೋದ ಭಕ್ತಿಭಂಡಾರಿಯ ದಿವ್ಯ ಸಾಧನೆ, ಬೋಧನೆಗಳು ಎಂದೆಂದಿಗೂ ಭವ್ಯವಾಗಿ ನಿಲ್ಲುವ, ಅವರಿವರೆನ್ನದೆ ಎಲ್ಲರಿಗೂ ದಾರಿತೋರಿಸಿ ಗುರಿಮುಟ್ಟಿಸುವ ಆ ಮಹಾಬೆಳಗಿನ ಹಿರಿಯ ಕುಡಿಗಳಾಗಿ ಬೆಳಗುತ್ತಿವೆ. 'ಕಳಬೇಡ; ಕೊಲಬೇಡ ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ' ಎಂಬೀ ಸಪ್ತಶೀಲಗಳನ್ನು ಬೋಧಿಸಿ; 'ಎಡದ ಕೈಯಲಿ ಹಾಲುಬಟ್ಟಲು ಬಲದ ಕೈಯಲಿ ಓಜುಗಟ್ಟಿಗೆ' ಹಿಡಿದು ಮರ್ತ್ಯಕ್ಕವತರಿಸಿ ಬಂದು ಎಲ್ಲ ಮಾನವರಿಗೂ ಬಡಿದು ಹಾಲು ಕುಡಿಸಿದ ಆ ಬಸವಣ್ಣನವರ ದಿವ್ಯಬೋಧನೆಯ ಅಮೃತಸೇಚನೆಯು ವಿಜ್ಞಾನದ ಅಪಾರ ಕೊಡುಗೆಯಿಂದಾಗಿ ವಿನಾಶದ ಅಂಚಿನಲ್ಲಿ ನಿಂತು ತಳಮಳಿಸುತ್ತಿರುವ ಆಧುನಿಕ ವಿಶ್ವಕ್ಕೆ ಎಂದಿಗಿಂತಲೂ ಇಂದು ಅಗತ್ಯ ಆಗಬೇಕಾಗಿದೆ. ಎಂಟುನೂರು ವರ್ಷಗಳ ಹಿಂದೆಯೇ ಯಾವ ಸುಧಾರಣೆಗಳನ್ನು ಬಸವಣ್ಣನವರು ಈ ನಾಡಿನಲ್ಲಿ ತಂದರೋ, ಅವುಗಳನ್ನೇ ಇಂದು ಸ್ವತಂತ್ರ ಭಾರತವು ತಾನು ಕೈಗೆತ್ತಿಕೊಂಡು ಸಾಧಿಸುತ್ತಲಿದೆಯೆಂದರೆ ಆ ಬಸವಣ್ಣನವರ ಅದ್ಭುತ ಸಾಧನೆಗೆ ದೀನ–ದಲಿತೋದ್ಧಾರಕ್ಕೆ ಬೇರೆ ಸಾಕ್ಷಿ ಬೇಕಿಲ್ಲವೆನ್ನಬಹುದು. ಅಂತಹ ಉದಾತ್ತ ತತ್ವಗಳನ್ನು ಮಾನವನು ಅರಿತು ಆಚರಿಸಿದಾಗಲೇ ತಾನು ಕಾಣುತ್ತಿರುವ ವಿಶ್ವಶಾಂತಿ–ವಿಶ್ವಕಲ್ಯಾಣದ ಕನಸು ನನಸಾಗಬಹುದು!

ಇಂದು ನಾಡಿನ ಎಲ್ಲ ಕಡೆಗಳಲ್ಲಿಯೂ ಶ್ರೀ ಬಸವ ಜಯಂತ್ಯುತ್ಸವಗಳು ವೈಭವದಿಂದ ನಡೆಯುತ್ತಿರುವುದನ್ನು ನೋಡಿದಾಗ ಮಾನವಕಲ್ಯಾಣದ ಶುಭೋದಯವನ್ನು ಕಾಣಬಹುದಾಗಿದೆ. ಬಸವಣ್ಣನವರ ತತ್ವಗಳನ್ನು ಜನತೆಗೆ ತಿಳಿಸಿ ನಿತ್ಯಜೀವನದಲ್ಲಿ ಅವುಗಳನ್ನು ಅಳವಡಿಸಿಕೊಂಡು ಜನತೆಯು ತಂತಮ್ಮ ತನು–ಮನಗಳನ್ನು ಸಂತೈಸಿಕೊಳ್ಳುವುದಕ್ಕೆ ಸ್ಫೂರ್ತಿಯನ್ನೀಯುವುದರಲ್ಲಿ ಈ ಜಯಂತ್ಯುತ್ಸವಗಳು ಸಹಾಯಕಾರಿಗಳಾಗಿವೆ. ಇಂತಹ ಮಹತ್ಸೇವೆಯಲ್ಲಿ ತೊಡಗಿ ಶ್ರೀ ಬಸವ ಜಯಂತಿಯನ್ನು

ಆಚರಿಸುತ್ತ ಜನಜಾಗೃತಿಗೆ ಶ್ರದ್ಧೆಯಿಂದ ಶ್ರಮಿಸುತ್ತಿರುವ ಬೆಂಗಳೂರು ಜಾಲಹಳ್ಳಿ ಬೆಲ್ ಕಾಲೋನಿ ಶ್ರೀ ಬಸವ ಸೇವಾ ಸಮಿತಿಯು ಈ ವರ್ಷದ ಬಸವ ಜಯಂತ್ಯುತ್ಸವದ ಶುಭಾಸರದಲ್ಲಿ ಒಂದು 'ಸ್ಮರಣಸಂಚಿಕೆ'ಯನ್ನು ಹೊರತರುತ್ತಿರುವುದು ಶ್ಲಾಘನೀಯವೂ ಸಂದರ್ಭೋಚಿತವೂ ಆಗಿದೆ. ಈ ಉತ್ಸವದಲ್ಲಿ ಏರ್ಪಡಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಶ್ರೀ ಬಸವತತ್ವ ಪರಿಮಳವು ಎಲ್ಲೆಡೆಯೂ ಪಸರಿಸಿ ಜನತೆಯಲ್ಲಿ ಧಾರ್ಮಿಕ ಶ್ರದ್ಧೆ, ಭಕ್ತಿ, ತತ್ವಾಭಿಮಾನಗಳು ಮೂಡುವಂತಾಗಲೆಂದೂ ಶ್ರೀ ಬಸವ ಸೇವಾ ಸಮಿತಿಯಿಂದ ಇಂತಹ ಬೆಳಕಿನ ಕಾರ್ಯಕ್ರಮಗಳು ಇನ್ನೂ ಹೆಚ್ಚಾಗಿ ನಡೆಯುವಂತಾಗಲೆಂದೂ ಆಶಿಸಿ; ಉತ್ಸವದಲ್ಲಿ ಭಾಗಿಗಳಾದ ಸರ್ವರಿಗೂ ಶುಭಾಶೀರ್ವಾದಗಳನ್ನು ಕೋರಿ ಉತ್ಸವಕ್ಕೆ ಸಕಲ ಯಶಸ್ಸನ್ನೂ ಹಾರೈಸೋಣವಾಗಿದೆ.

॥ ಶಿವಂ ಭೂಯಾತ್ ॥

ಇತ್ಯಾಶಿಷಃ

ಮೈಸೂರು
22–4–72

□

- ಧರ್ಮ ಮತ್ತು ಜೀವನ ಒಂದೇ ನಾಣ್ಯದ ಎರಡು ಮುಖಗಳು.
- ಧರ್ಮವೇ ದೇಶದ ಆತ್ಮ.
- ಧರ್ಮಜಾಗೃತಿಯೊಂದೇ ಸರ್ವರನ್ನೂ ಸಂರಕ್ಷಿಸುವ ಮಾರ್ಗ.
- ನಮ್ಮ ರಾಷ್ಟ್ರದ ಜೀವವೇ ಧರ್ಮ, ಧರ್ಮ ಉಳಿದರೆ ದೇಶ ಉಳಿಯುತ್ತದೆ.
- ರಾಜಕೀಯಕ್ಕೆ ಆಧ್ಯಾತ್ಮಿಕ ಸಂಸ್ಕಾರವನ್ನು ಕೊಡಬೇಕು. ಧರ್ಮದಲ್ಲಿ ರಾಜಕೀಯ ಇರಬಾರದು, ಆದರೆ ರಾಜಕೀಯಕ್ಕೆ ಧರ್ಮ ಬೇಕು.
- ಭಕ್ತಿ ಎಂಬುದು ಒಂದು ಸದ್ಭಾವನೆ. ಭಕ್ತಿಯು ಸುಜ್ಞಾನಕ್ಕೆ, ಸತ್ಕ್ರಿಯೆಗೆ ಹಾದಿ. ಭಕ್ತಿಯು ನಮ್ಮಲ್ಲಿ ಸಮರ್ಪಣೆಯ ಭಾವವನ್ನುಂಟುಮಾಡುತ್ತದೆ.
- ಪರಮಾತ್ಮನಿಗೆ ಬೇಕಾಗಿರುವುದು ಭಾಷೆಯಲ್ಲ, ಹೆಸರಲ್ಲ. ಅವನಿಗೆ ಬೇಕಾಗಿರುವುದು ಹೃದಯದ ಭಾಷೆ. ಅದುವೇ ಭಕ್ತಿ.
- ಮನಸ್ಸು, ಕಣ್ಣು, ಕಿವಿ, ನಾಲಗೆಗಳನ್ನು ಪರಿಶುದ್ಧವಾಗಿಟ್ಟುಕೊಳ್ಳ ಬೇಕು. ಸದಾ ಭಗವಂತನ ನಾಮಸ್ಮರಣೆ, ಧ್ಯಾನ ಮಾಡುತ್ತಿರಬೇಕು.

**– ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು**

# ಸುತ್ತೂರು ಜಗದ್ಗುರುಗಳು

**ಜೋಳದರಾಶಿ ದೊಡ್ಡನಗೌಡ**

**ನಾ**ನು, ಪಂಡಿತ ವೈ. ನಾಗೇಶ ಶಾಸ್ತ್ರಿಗಳು ಮಿತ್ರರೊಂದಿಗೆ ಮೈಸೂರು ದಸರಾ ಕಾರ್ಯಕ್ರಮಕ್ಕೆ ಹೋದಾಗ, ಅಲ್ಲಿಯ ಸರಕಾರಿ ಅಧಿಕಾರಿಗಳ ಅವಿಧೇಯತೆಯ, ಬಿಡದಿಯ ಸೆರೆಯನ್ನು ತಪ್ಪಿಸಿಕೊಂಡು, ಚಿಕ್ಕ ಜಗದ್ಗುರುಗಳನ್ನು ಕೇಳಿಕೊಂಡು ಹೋಗಿ, ಅವರ ಶ್ರೀಮಠದಲ್ಲಿ ಉಳಿದೆವು. ಚಿಕ್ಕ ಜಗದ್ಗುರುಗಳು ಬಹು ವ್ಯಾಪಕವಾದ ಕಾರ್ಯರಂಗದಲ್ಲಿ ತೊಡಗಿದವರು. ಹೊತ್ತು, ಗೊತ್ತುಗಳನ್ನೇ ಮರೆತು, ಪೂಜೆ–ಪ್ರಸಾದಗಳು ನಿಯತವೇಳೆಗೆ ನಡೆಯದಷ್ಟು ಕಾರ್ಯತತ್ಪರರು. ನಮ್ಮನ್ನು ನೋಡಿದಾಗ ಅವರಿಗೆ ಬಲು ಸಂತೋಷವಾಯಿತು. ಪ್ರೀತಿಯಿಂದ ನಮ್ಮ ಯೋಗಕ್ಷೇಮಗಳನ್ನು ವಿಚಾರಿಸಿ, ನಮ್ಮ ಆದರೋಪಚಾರಗಳಿಗೆ ವ್ಯವಸ್ಥೆ ಮಾಡಿಕೊಟ್ಟರು.

ದಸರಾ ಕಾರ್ಯಕ್ರಮವೇನೋ ಮುಗಿದೇಹೋಗಿತ್ತು. ನಮಗೂ ಒಂದು ಕೋರಿಕೆಯಿತ್ತು. ಹಿರಿಯ ಜಗದ್ಗುರುಗಳಾದ ಶಿವರಾತ್ರೀಶ್ವರ ಮಹಾಸ್ವಾಮಿಗಳನ್ನು ದರ್ಶಿಸಲು ಸುತ್ತೂರಿಗೆ ಹೋಗಿ ಬರೋಣವೆಂದು ಯೋಚಿಸುತ್ತಿರುವಾಗ, ಚಿಕ್ಕ ಜಗದ್ಗುರುಗಳು ಅದನ್ನೇ ಸೂಚಿಸಿದರು. ಸಂತೋಷಗೊಂಡು ನಾವು ಅವರ ಕಾರಿನಲ್ಲಿ ಸುತ್ತೂರಿಗೆ ಹೊರಟೆವು. ಸಾರ್ಥಕವಾದ ಹೆಸರು ಆ ಊರಿಗೆ. ಆ ಊರಿಗೆ ಹೋಗುವವರಿಗೆ, ದೂರದಲ್ಲಿ ಊರು ಕಂಡು ಇನ್ನೇನು ಐದು ನಿಮಿಷದಲ್ಲಿ ಹೋಗುತ್ತೇವೆ ಎಂದುಕೊಂಡದ್ದು, ಹಾವಿನಂತೆ ಸುತ್ತಿ ಸುತ್ತಿ ಹೋಗುವ ಹಾದಿ ಸುಳ್ಳು ಮಾಡುತ್ತಿತ್ತು. ಅದಕ್ಕೆಂತಲೇ ಸುತ್ತಿ ಸುತ್ತಿ ಹೋಗುವ ಊರಾದ್ದರಿಂದ ಸುತ್ತೂರು', 'ಸುತ್ತುವ ಊರು' ಎಂದು ಆ ಊರಿಗೆ ಹೆಸರು ಬಂದದ್ದು ಸರಿಯಾಗಿಯೇ ಇದೆ. ಇನ್ನೊಂದು ನಾವು ಎಷ್ಟು ಸುತ್ತಿದರೂ ಆ ಊರು ಮರೆಯಾಗುವುದಿಲ್ಲ. ನೋಡುತ್ತಲೇ ಇರುತ್ತೇವೆ; ಸುತ್ತುತ್ತಲೇ ಇರುತ್ತೇವೆ. ಕೊನೆಯ ಸುತ್ತಿಗೆ ಬಂದಾಗ, ಸ್ಪ್ರಿಂಗಿನ ಸುತ್ತುಗಳಿಗೆ ಸಿಕ್ಕ ವಸ್ತುವು ಸುತ್ತಿ ಸುತ್ತಿ ಪಾರಾದಂತೆ. ಇಲ್ಲಿ ಸುತ್ತಿನಲ್ಲಿ ಪ್ರಯಾಣಿಕರು ಹಾದಿಯ ಕೊನೇ ಸುತ್ತಿಗೆ ಬಂದಾಗ, ಭವ್ಯವಾದ ಶ್ರೀಮಠವು ಎದ್ದು ನಿಂತಿರುವ ದೃಶ್ಯ ಮನೋಹರವಾಗಿ

---

ಶ್ರೀ ಜೋಳದರಾಶಿ ದೊಡ್ಡನಗೌಡರ 'ನಂದೇ ನಾನೋದಿದೆ' ಆತ್ಮ ಚರಿತ್ರೆಯಲ್ಲಿನ ಬರಹ, ಪು. 303–305, ಪ್ರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ.

ಕಾಣುತ್ತದೆ. ಇನ್ನೊಂದು ರೀತಿಯ ಭಾವುಕತೆಯಿಂದ ನೋಡಿದರೆ, ಜನ್ಮ-ಜನ್ಮಾಂತರಗಳ ಈ ಜೀವಿಯ ಸುತ್ತುಗಳನ್ನು ದಾಟಿ ಒಮ್ಮೆ ಕೈಲಾಸವನ್ನು ಕಂಡಂತಾಗುತ್ತದೆ.

ಒಳಗೆ ಹೋಗಿ ಶ್ರೀಗಳನ್ನು ಕಂಡು ವಂದಿಸಿದೆವು. ಅವರು ಆದರ, ಪ್ರೀತಿಗಳಿಂದ ನಮ್ಮ ಬರುವಿಗಾಗಿ ತೃಪ್ತಿಗೊಂಡು ಆಶೀರ್ವದಿಸಿದರು. ಬೃಹತ್ತಾದ ಮಠವನ್ನು ನೋಡಿಬಂದ ತರುವಾಯ, ಶ್ರೀಗಳು ತಮ್ಮ ಪಂಚಾಕ್ಷರಿಮಂತ್ರಗಳ, ಹಿರಿದಾದ ಹೊತ್ತಿಗೆಗಳನ್ನು ತೋರಿಸಿದರು. ಯಾತ್ರಿಕರಾಗಿ ಶ್ರೀಮಠಕ್ಕೆ ಬಂದ ಸತ್ಪುರುಷರ ಹಸ್ತಾಕ್ಷರಗಳಲ್ಲಿ, ಧಾರವಾಡದ ಮೃತ್ಯುಂಜಯ ಅಪ್ಪಗಳ ಹಸ್ತಾಕ್ಷರಗಳನ್ನು ನೋಡಿ ಬಹು ಸಂತೋಷವಾಯಿತು. ಎಲ್ಲಿಯೂ ಮೃತ್ಯುಂಜಯ ಅಪ್ಪಗಳು ಬರೆದ ಅಕ್ಷರಗಳನ್ನು ಕಂಡಿರಲಿಲ್ಲ. ನೋಡಿ ನಮಗೆ ಹಿಡಿಸಲಾರದಷ್ಟು ಸಂತೋಷವಾಯಿತು.

ಶ್ರೀಗಳು ವೃದ್ಧಾಪ್ಯದಲ್ಲಿದ್ದು 'ಶಿವಕೋಟಿ'ಯನ್ನು ಲಿಖಿಸುವ ಮಹತ್ಕಾರವನ್ನು ನೋಡಿ, "ಈ ವಯಸ್ಸಿನಲ್ಲಿ ಇಷ್ಟೊಂದು ಸಣ್ಣ ಅಕ್ಷರಗಳಲ್ಲಿ ಬರೆಯಲು ಹೇಗೆ ಸಾಧ್ಯವಾಗುತ್ತದೆ ಬುದ್ಧಿ?' ಎಂದು ಶಾಸ್ತ್ರಿಗಳು ಲವಲವಿಕೆಯಿಂದ ಕೇಳಿದಾಗ "ಶಾಸ್ತ್ರಿಗಳೇ ಈ ಮಂತ್ರಲಿಖಿತ ಸಂಕಲ್ಪಮಾಡಿ ಬರೆಯುವ ಪ್ರಾರಂಭದಲ್ಲಿ ನಮ್ಮ ದೃಷ್ಟಿ ಅಷ್ಟು ಚೆನ್ನಾಗಿರಲಿಲ್ಲ. ಹಾಗೆಂದು ಈ ಕಾರ್ಯವನ್ನು ಬಿಡಲಿಲ್ಲ. ಸ್ಥಿರಚಿತ್ತರಾಗಿ ನಾವು ಬರೆದಂತೆಲ್ಲ ದೃಷ್ಟಿಯು ನಿಚ್ಚಳವಾಯಿತು" ಎಂದು ಶ್ರೀಗಳು ಅಪ್ಪಣೆ ಕೊಡಿಸಿದಾಗ ನಮಗೆಲ್ಲ ಸೋಜಿಗವಾಯಿತು. ಸೋಜಿಗವೇ ಅಲ್ಲ ಪ್ರತ್ಯಕ್ಷ ಪಂಚಾಕ್ಷರಿ ಮಹಿಮೆಯನ್ನು ಕಂಡು ಸಮಾಧಾನವಾಯಿತು. ಅಪ್ಪಣೆ ಪಡೆದು ಮೈಸೂರಿಗೆ ಬಂದು ಚಿಕ್ಕ ಜಗದ್ಗುರುಗಳವರ ಆಶೀರ್ವಾದ ಪಡೆದು ಊರಿಗೆ ಬಂದೆವು.

ಕೆಲವು ದಿವಸಗಳ ತರುವಾಯ ಚಿಕ್ಕ ಜಗದ್ಗುರುಗಳೊಂದಿಗೆ ಹಿರಿಯ ಜಗದ್ಗುರುಗಳು ಕಾರಿನಲ್ಲಿ ಚೇಳ್ಳಗುರ್ಕಿಗೆ ಹೋಗುವಾಗ ನಮ್ಮೂರ ಬೋರ್ಡು ನೋಡಿ, ಕಾರು ನಿಲ್ಲಿಸಿ, ನನಗೆ ಹೇಳಿಕಳಿಸಿದರು. ನಾನು ಕಂಡು ವಂದಿಸಿ ಮನೆಗೆ ಬಂದು ಬಿನ್ನಹ ತೀರಿಸಿ ಹೋಗಬೇಕು ಬುದ್ಧಿ! ಎಂದಾಗ ಈಗ ತುಂಬಾ ಅವಸರದ ಮೇಲೆ ಬಂದಿದ್ದೇವಪ್ಪಾ ಚೇಳ್ಳಗುರಿಕಿ ಎರ್ರಿತಾತನ ಸಂದರ್ಶನ ಮಾಡಿಕೊಂಡು ಹೋಗಬೇಕು. ಹಾದಿಯಲ್ಲಿ ನಿನ್ನನ್ನು ನೋಡಿದ್ದಾಯಿತು ಎಂದು ಆಶೀರ್ವದಿಸಿ ಹೋದರು. ಒಮ್ಮೆ ನೋಡಿದವರನ್ನು ಅವರೆಂದೂ ಮರೆಯುತ್ತಿರಲಿಲ್ಲ. ಹಿರಿಯ ಜಗದ್ಗುರುಗಳ ಲಿಂಗೈಕ್ಯದ ನಂತರ ಚಿಕ್ಕ ಜಗದ್ಗುರುಗಳು ತಮ್ಮ ಮಠವನ್ನು, ಮಠದ ಸ್ವತ್ತನ್ನು, ಸಮಾಜಕ್ಕಾಗಿ, ಸಮಾಜದ ಹಿತಕ್ಕಾಗಿ, ಭಕ್ತಿಯ ವ್ಯಾಪ್ತಿಗಾಗಿ, ಹೈಸ್ಕೂಲ್ ಕಾಲೇಜುಗಳನ್ನು ಸ್ಥಾಪಿಸಿದ್ದಲ್ಲದೆ, ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದನಿಲಯಗಳನ್ನು ಸ್ಥಾಪಿಸಿ, ಸಮಾಜೋದ್ಧಾರದ ಕಾರ್ಯದಲ್ಲಿ ತೊಡಗಿದ್ದಾರೆ.

□

## ‘ಶ್ರೀಶೈಲ ಪೀಠ ದರ್ಶನ’ ಕೃತಿಗೆ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಬರೆದ ಮುನ್ನುಡಿ

**ಕ**ನ್ನಡನಾಡಿನಲ್ಲಿ ಇರುವ ನೂರಾರು ಮಠಗಳು ತಮ್ಮ ಮಠ ಪರಂಪರೆಗೆ ಸಂಬಂಧಿಸಿದ ಹಲವಾರು ಗ್ರಂಥಗಳು ಮತ್ತು ದಾಖಲೆಗಳನ್ನು ಪ್ರಕಟಪಡಿಸಿದ್ದಾರೆ. ಈ ಬಗ್ಗೆ ಯುವ ವಿದ್ವಾಂಸರು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದರೆ ಬಹಳ ರೋಚಕವಾದ ವಿಷಯಗಳು ಹೊರಬರುತ್ತವೆ. ಶ್ರೀ ಜ.ಚ.ನಿ ಎಂದು ಪ್ರಸಿದ್ಧರಾದ ಶ್ರೀಶೈಲ ಶ್ರೀ ನಿಡುಮಾಮಿಡಿ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ಚೆನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳ ಪಟ್ಟಾಧಿಕಾರದ ಬೆಳ್ಳಿಹಬ್ಬದ ಸ್ಮರಣ ಸಂಪುಟ **“ಶ್ರೀಶೈಲ ಪೀಠ ದರ್ಶನ”** 1967ರಲ್ಲಿ ಪ್ರಕಟವಾಗಿದೆ. ಈ ಸಂಪುಟಕ್ಕೆ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಮುನ್ನುಡಿ ದಯಪಾಲಿಸಿದ್ದಾರೆ.

ಹಾಗೆಯೇ ಈ ಸಂಪುಟದಲ್ಲಿ 25 ಲೇಖನಗಳು ಇದ್ದು ಲೇಖನಗಳ ಪರಿವಿಡಿಯನ್ನು ಯಥಾವತ್ತಾಗಿ ಕೊಡಲಾಗಿದೆ. ಯುವ ವಿದ್ವಾಂಸರು ಪ್ರಕಟಿತ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಬೇಕು.

### ಮುನ್ನುಡಿ

‘ಶ್ರೀಶೈಲ ಪೀಠ ದರ್ಶನ’ವೆಂಬ ಈ ಕೃತಿಗೆ ನಮ್ಮ ಹಾರೈಕೆಗಳನ್ನು ಸೂಚಿಸುವುದು ಆನಂದದ ಸಂಗತಿ. ಶ್ರೀಶೈಲ ಪೀಠವು ಪ್ರಾಚೀನ ಕಾಲದಿಂದಲೂ ಪ್ರಖ್ಯಾತವಾಗಿರುವ ಪವಿತ್ರ ಸಂಸ್ಥೆ. ಅನೇಕ ಪ್ರಾಚೀನ ಸಾಹಿತ್ಯದಲ್ಲೂ ರಾಜಮಹಾರಾಜರುಗಳ ಇತಿಹಾಸದಲ್ಲೂ ಪ್ರಶಂಸನೀಯ ಉಲ್ಲೇಖಗಳಿಂದ ಕೂಡಿದ ಬೃಹತ್ ಧಾರ್ಮಿಕ ಸಂಸ್ಥೆ, ಅದರ ಆಶ್ರಯದಲ್ಲಿ ಹಲವಾರು ಉಪ ಪೀಠಗಳೂ, ವಿದ್ಯಾಪೀಠಗಳೂ, ಸಾಹಿತ್ಯ ಸೌಧಗಳೂ ನಿರ್ಮಾಣವಾಗಿವೆ. ಅವುಗಳಲ್ಲಿ ಹಲವು ಅಳಿದಿವೆ. ಹಲವು ಉಳಿದಿವೆ. ಶ್ರೀಶೈಲ ಪೀಠದ ಪ್ರಾಚೀನತೆಯು ಭಾರತೀಯ ಸಾಂಸ್ಕೃತಿಕ ದರ್ಶನದ ಇತಿಹಾಸದೊಂದಿಗೇ

---

ಮಾಹಿತಿ: ಡಾ॥ ಬಿ ನಂಜುಂಡಸ್ವಾಮಿ, ಪಂಡಿತ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು 572102

ಬೆಳೆದುಕೊಂಡು ಬಂದ ಸಂಗತಿಯಾಗಿದೆ. ಅಖಿಲ ಭಾರತಕ್ಕೆ ಮಾತ್ರವಲ್ಲ ಅಖಿಲ ಏಷಿಯಾಖಂಡದಲ್ಲಿರುವ ಪ್ರತಿಯೊಂದು ಶಿವ ಕ್ಷೇತ್ರಕ್ಕೂ ಶಿವತತ್ವಾವಲಂಬಿಗಳಿಗೂ ಶ್ರೀಶೈಲಪೀಠದ ಸಂಬಂಧವಿದ್ದೇ ಇದೆ. ಆದರೆ ಅದರ ಇತಿಹಾಸದಲ್ಲಿ ಸಾಕಷ್ಟು ಬೆಳಕು ಚೆಲ್ಲುವ ಸಾಹಿತ್ಯ ಮಾತ್ರ ಪ್ರಕಟವಾಗಿರಲಿಲ್ಲವೆಂಬುದು ಶೋಚನೀಯ.

ಇಂದಿನ ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಜಗದ್ಗುರು ಚೆನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳವರ ಪಟ್ಟಾಭಿಷೇಕದ ರಜತ ಮಹೋತ್ಸವದ ಸ್ಮಾರಕವಾಗಿ ಶ್ರೀಶೈಲಪೀಠ ದರ್ಶನವೆಂಬ ಪಾಂಡಿತ್ಯಪೂರ್ಣ ಪರಿಶೋಧನಾತ್ಮಕ ಲೇಖನಗಳ ಕೃತಿಯು ಪ್ರಕಟವಾಗುತ್ತಿರುವುದು ಅಭಿನಂದನೀಯವಾದ ಸಂಗತಿಯಾಗಿದೆ. ಜಗದ್ಗುರುಗಳವರು ಶಿವಯೋಗ ಮಂದಿರದ ಯೋಗ ಶಿಕ್ಷಣದಲ್ಲಿ ಬೆಳೆದು ಧಾರ್ಮಿಕ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯವನ್ನು ಬೆಳೆಸಿಕೊಂಡವರು. ಸಾಹಿತ್ಯದಲ್ಲಿ ಧರ್ಮ ದ್ರಷ್ಟಾರರೆನಿಸಿದ್ದಾರೆ. ಶೈವ ದರ್ಶನದಲ್ಲಿ ಅವರಿಗಿರುವ ಅಭಿಮಾನ, ಅಭಿರುಚಿ, ಆಳವಾದ ಪಾಂಡಿತ್ಯಕ್ಕೆ ನಿದರ್ಶನವಾಗಿ ಈಗಾಗಲೇ ಅವರಿಂದ ಹಲವಾರು ಗ್ರಂಥಗಳು ಪ್ರಕಟವಾಗಿ ಕನ್ನಡ ಸಾಹಿತ್ಯ ಭಂಡಾರವನ್ನು ತುಂಬಿವೆ. ಕನ್ನಡಿಗರಿಂದ ಮನ್ನಣೆಯನ್ನು ಪಡೆದಿವೆ. ಇಂತಹ ಸಾಹಿತ್ಯ ಸಂಶೋಧಕರ ರಜತೋತ್ಸವದ ಸ್ಮಾರಕವಾಗಿ ಈ ಪ್ರತಿಭಾಪೂರ್ಣ ಗ್ರಂಥವೊಂದು ಪ್ರಕಟವಾಗುತ್ತಿರುವುದು ಕನ್ನಡಿಗರ ಪುಣ್ಯವಿಶೇಷ.

ಮಠಾಧಿಪತಿಗಳಾಗುವುದು ಅನ್ಯರು ಗಳಿಸಿದ ಸಂಪತ್ತಿನ ಶ್ರೀ ಭೋಗವನ್ನು ಪಡೆಯುವುದಕ್ಕಲ್ಲ. ಆರ್ತ ಜಗತ್ತನ್ನೇ ತನ್ನ ಬಳಗವೆಂದು ಅರಿತು ಅವರನ್ನು ಉದ್ಧರಿಸುವುದಕ್ಕಾಗಿ ಮಾತ್ರ. ಮಾನವಕುಲದಲ್ಲಿ ಅಂತರಂಗದ ಆರ್ತತೆ ಬಹಿರಂಗದ ಬಳಲಿಕೆ ಎಂಬ ಎರಡು ತಾಪಗಳಿಂದಲೂ ತಪ್ತರಾದ ಜನಸಮುದಾಯವಿದೆ, ಮಠಾಧಿಪತಿಗಳು ಸಮರ್ಥರಾದರೆ ಯೋಗನಿಷ್ಠರಾಗಿ ಅಣಿಮಾದ್ಯಷ್ಟಸಿದ್ಧಿಗಳನ್ನು ಪಡೆದುಕೊಂಡು ಆರ್ತಕುಲದ ಅಭೀಷ್ಟವನ್ನು ಈಡೇರಿಸಲು ಸಮರ್ಥರಾಗಬೇಕು. ಇಲ್ಲವೆ ಜ್ಞಾನಬೋಧೆ ಮಾಡಿ ಜನಸಮುದಾಯವನ್ನು ಸನ್ಮಾರ್ಗಗಾಮಿಯಾಗಿ ಮಾಡಲು ಶ್ರಮಿಸಬೇಕು. ಇಲ್ಲವೆ ಜನ ಸಹಾಯದಿಂದ ವಿದ್ಯಾಕ್ಷೇತ್ರಗಳನ್ನು ನಿರ್ಮಿಸಿ ಅವರ ಅಂತಶ್ಚಕ್ಷುಗಳನ್ನು ತೆರೆಯಲು ಯತ್ನಿಸಬೇಕು. ಇದಾವುದೂ ಇಲ್ಲದ ಯಾವುದೇ ಸಂಸ್ಥೆಯು ಮಠವೆನಿಸುವುದಿಲ್ಲ ಮತ್ತು ಅದರ ಅಧಿಪತಿ, ಮಠಾಧಿಪತಿ ಎನಿಸುವುದಿಲ್ಲ. ಮಠಾಧಿಪತಿ ಎಂದರೆ ಸರ್ವಸಂಗ ಪರಿತ್ಯಾಗ ಮಾಡಿ ವೈಯಕ್ತಿಕ ಮುಕ್ತಿಯನ್ನು ಬಯಸಿ ಕಾನನ ವಾಸಿಯಾದ ಸ್ವಾರ್ಥಿಯಾದ ಸಂನ್ಯಾಸಿಯಲ್ಲ. ಜನೋದ್ಧಾರರಹಿತವಾದ ಆಡಂಬರಕ್ಕೆ ಮಾರುಹೋದ ಡಾಂಭಿಕ ವ್ಯಕ್ತಿತ್ವವೂ ಅಲ್ಲ. ಜನ ಬದುಕಲೆಂದು ಬದುಕುವ ಬಯಕೆ ಮಠಾಧಿಪತಿಗಳಿಗಿರಬೇಕು, ಅದಕ್ಕಾಗಿ ದೇಹದಲ್ಲಿ ದೇವನಿರುವವರೆಗೂ ಶ್ರಮಿಸಬೇಕು. ಈ ಉದ್ದಿಶ್ಯವಿಲ್ಲದಿದ್ದರೆ ನಮ್ಮ ಪ್ರಾಚೀನ ಆಚಾರ್ಯರಾಗಲಿ ಶರಣರಾಗಲಿ ಮಠಗಳೆಂಬ ಧರ್ಮಸಂಸ್ಥಾಪನೆಗೆ ತೊಡಗುತ್ತಿರಲಿಲ್ಲ. ಆದುದರಿಂದ ಅವರ ಹೆಸರಿನ

ಕೀರ್ತಿಕಿರಣಗಳಾಗಿರುವ ಇಂದಿನ ಮಠಾಧಿಪತಿಗಳು ಮಹಾನುಭಾವರು ಮಾಡಿ ತೋರಿದ ಮಾರ್ಗದಲ್ಲಿ ಅಣುವಿನಷ್ಟಾದರೂ ಅಳಿಲಸೇವೆ ಎಸಗದಿದ್ದರೆ ಅಂಧಕಾರಧರ್ಮಕ್ಕೆ ಅವಹೇಳನ ಮಾಡಿದಂತಾಗುವುದು. ಈ ತತ್ವವನ್ನು ಅರಿತು ಜಗದ್ಗುರುಗಳವರು ಧರ್ಮದರ್ಶನ, ಸಾಹಿತ್ಯ ತಪಸ್ಸನ್ನೆಸಗುತ್ತಾ ಹಲವಾರು ಉತ್ತಮ ಫಲಗಳನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ಸಮರ್ಪಿಸಿದ್ದಾರೆ. ತಮ್ಮ ಅಧಿಕಾರ ಕ್ಷೇತ್ರ ಸೂತ್ರವನ್ನು ಧನ್ಯವಾಗಿಸಿದ್ದಾರೆ. ಜನತೆಯ ಜ್ಞಾನ ಚಕ್ಷುಗಳನ್ನು ತೆರೆಯುವ ಕಾರ್ಯದಲ್ಲಿ ಕುಶಲರೆನಿಸಿದ್ದಾರೆ. ಮಠಾಧಿಪತಿಗಳಿಂದಲೂ ಮಾನ್ಯತೆ ಪಡೆದಿದ್ದಾರೆ. ಹೆಚ್ಚು ಹೇಳುವುದು ಹೊಗಳಿಕೆ ಎಂಬ ಭಾವನೆಗೆ ಇಂಬುಗೊಡಬಹುದೆಂದು ನಿಲ್ಲಿಸಿರುತ್ತೇವೆ.

ಪ್ರಸ್ತುತ ಗ್ರಂಥದಲ್ಲಿ ಪಂಡಿತಮಾನ್ಯರಿಂದ ಸಂಶೋಧಿತವಾದ ವಿದ್ವತ್ಪೂರ್ಣವಾದ ಲೇಖನಗಳು ಬಂದಿವೆ. ಸಂಸ್ಕೃತ, ಇಂಗ್ಲಿಷ್, ಕನ್ನಡ ಮತ್ತು ತೆಲುಗು ಸಾಹಿತ್ಯದಲ್ಲಿ ದೊರೆತಿರುವ ಶ್ರೀಶೈಲ ಪೀಠದ ಮಾಹಿತಿಯನ್ನೆಲ್ಲಾ ಸಂಗ್ರಹಿಸಿ ಪ್ರಸ್ತಾಪಿಸಿರುವುದು ಗಣನೀಯವಾಗಿದೆ. ವಿದ್ವಾಂಸರು ಶ್ರೀಶೈಲ ಪೀಠದ ಐತಿಹಾಸಿಕ ದೃಷ್ಟಿಯನ್ನು ಸ್ಪಷ್ಟವಾಗಿ ವಿಮರ್ಶೆ ಮಾಡಿ ಶ್ರೀಪೀಠದಾದ್ಯಂತ ದರ್ಶನ ಮಾಡಿಸಲು ಯತ್ನಿಸಿದ್ದಾರೆ. ಒಂದು ಪೀಠದ ಬಗ್ಗೆ ಇಷ್ಟೊಂದು ಮಾಹಿತಿ ದೊರೆಯುವಂತಹ ಗ್ರಂಥಗಳು ರಚನೆಯಾಗಿಲ್ಲ. ಪೀಠ ಮತ್ತು ಶೈವಪೀಠಗಳ ಸಂಶೋಧಿತ ಇತಿಹಾಸವನ್ನು ಪ್ರಕಟಿಸುವ ಮಹತ್ಕಾರ್ಯ ಸಮಾಜ ಹಾಗೂ ಮಠಾಧಿಪತಿಗಳಿಗೆ ಸೇರಿದೆ. ಶ್ರೀಶೈಲ ಪೀಠದ ದರ್ಶನವು ಒಂದು ಮಾರ್ಗದರ್ಶಕ ಗ್ರಂಥ ಎಂದರೂ ಒಪ್ಪುತ್ತದೆ. ಪ್ರತಿಯೊಂದು ಲೇಖನದಲ್ಲೂ ಪಾಂಡಿತ್ಯವಿದೆ. ಪ್ರತಿಭೆಯಿದೆ; ವಿದ್ವತ್ ಶೈಲಿ ಇದೆ. ಪುಲಕಿತಗೊಳಿಸುವ ವಿಚಾರ ಸಂಗ್ರಹವಿದೆ. ಒಟ್ಟಿನಲ್ಲಿ ಈ ಕೃತಿಯು ಶ್ರೀಶೈಲಪೀಠದ ಹಿರಿತನ ಸಿರಿತನಗಳನ್ನು ಬಣ್ಣಿಸುವ ಸಮಗ್ರ ಕೃತಿಯಂತಿದೆ ಎಂದರೂ ಒಪ್ಪುತ್ತದೆ.

ಒಳ್ಳೆಯ ವಿಚಾರವಂತರ ವಿಚಾರಶಕ್ತಿಗೆ ಶ್ರೀಯವರು ಚೈತನ್ಯಶಕ್ತಿಯಾಗಿ ಇಂತಹ ಅಮೋಘ ಕೃತಿಯು ಪ್ರಕಟವಾಗಲು ಕಾರಣವಾಗಿದೆ ಎನ್ನಬಹುದು. ಪ್ರತಿಯೊಂದು ಪೀಠದ ವತಿಯಿಂದಲೂ ಇಂತಹ ಸಂಶೋಧನಾತ್ಮಕ ಗ್ರಂಥಗಳು ಪ್ರಕಟವಾದರೆ ಭಾರತದ ಧಾರ್ಮಿಕ ಇತಿಹಾಸಕ್ಕೆ ಅತ್ಯುತ್ತಮ ಕೊಡುಗೆಯಾಗುತ್ತದೆ. ಈ ಕೃತಿ ಪ್ರಕಟಣೆಯು ಶ್ರೀಮನ್ನಿಡುಮಾಮಿಡಿ ಶ್ರೀಶೈಲಪೀಠದ ಹಿರಿಮೆಗೆ ಧರಿಸಿ ಹೊಂಗಳಸವಾಗಿದೆ. ಈ ಪೀಠದಿಂದ ಸಾರೋದ್ಧಾರವಾಗಿ ಸಾಹಿತ್ಯ ದಾಸೋಹವೂ ಧರ್ಮೋದ್ಧರಣಕಾರ್ಯವೂ ನಡೆಯಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು**

ಸುತ್ತೂರು ಮಹಾಸಂಸ್ಥಾನ ಮಠ, ಮೈಸೂರು

□

# ಪ್ರೊ. ಶಿ.ಶಿ. ಬಸವನಾಳರು ಮೈಸೂರಿನ ಶ್ರೀ ಸುತ್ತೂರು ಮಠದ ಪ್ರಸಾದನಿಲಯದಲ್ಲಿ ಪದವೀಧರರಿಗೆ ನೀಡಿದ ಉಪನ್ಯಾಸ (1944)

ಇಂದು ಮೈಸೂರು ವಾಣೀವಿಲಾಸ ರಸ್ತೆಯಲ್ಲಿರುವ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯ ನಾಮಾಂಕಿತವಾದ ಸಂಸ್ಕೃತ ಮತ್ತು ವೇದ ಪಾಠಶಾಲೆ (1933) ಚಿಕ್ಕಬುದ್ಧಿಯವರ ಶಿಕ್ಷಣ ಕ್ಷೇತ್ರವಾಯಿತು. ಅಲ್ಲಿ ಇವರೀರ್ವರು ವಟುಗಳ ಜೊತೆಗೆ ನೂರಾರು ಮಂದಿ ಸಂಸ್ಕೃತ ಕಲಿಯುವ ಬಡ ವಿದ್ಯಾರ್ಥಿಗಳಿಗೆ ಉಚಿತ ಅಶನ ವಸತಿ ಗಳು ಏರ್ಪಟ್ಟವು. ಹಿರಿಯ ಗುರುಗಳು ಸುತ್ತೂರಿನಲ್ಲಿದ್ದರೂ ಅವರಿಗೆ ಮೈಸೂರಿನಲ್ಲಿದ್ದ ಚಿಕ್ಕವರ ಯೋಗಕ್ಷೇಮದ ಯೋಚನೆ. ವಾರಕ್ಕೊಮ್ಮೆ ಅವರು ಎತ್ತಿನಗಾಡಿ ಕಟ್ಟಿಸಿಕೊಂಡು ರಾತ್ರಿಯಲ್ಲಿ ಪ್ರಯಾಣಿಸಿ ಮೈಸೂರು ತಲುಪುತ್ತಿದ್ದರು. ಆಗಿನ್ನೂ ಆ ಮಾರ್ಗದಲ್ಲಿ ಬಸ್ಸುಗಳ ಓಡಾಟವಿರಲಿಲ್ಲ. ಕಾರಿನ ವ್ಯವಸ್ಥೆ ಇನ್ನೂ ಆರಂಭಿಸದಿದ್ದ ಕಾಲ ಅದು. ಕಿರಿಯ ಜಗದ್ಗುರುಗಳು ಹಿರಿಯ ಜಗದ್ಗುರುಗಳ ಬಗೆಗೆ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಅವರಷ್ಟು ಸಲಿಗೆ ತೋರಿದರೂ ಚಿಕ್ಕವರಿಗೆ ಅವರ ಮುಂದೆ ನಿಲ್ಲಲು ಭಯ. ಪಾಠಶಾಲೆಯಲ್ಲಿ ಚಿಕ್ಕವರ ಪಾಠಪ್ರವಚನಗಳು ನಡೆಯುತ್ತಿದ್ದರೂ ಅವರ ವಸತಿಗಾಗಿ ಪಾಠಶಾಲೆಗೆ ಹತ್ತಿರದಲ್ಲಿ ಬೇರೆ ಬಂಗಲೆಯೊಂದನ್ನು ಬಾಡಿಗೆಗೆ ಪಡೆದು ಅವರಲ್ಲಿ ಪೂಜಾದಿಗಳಿಗೆ ಬೇರೆ ವ್ಯವಸ್ಥೆ ಮಾಡಿದ್ದರು. ಅಲ್ಲಿ ಸೇವಾದಿಗಳಿಗೆ ಸೂಕ್ತ ಸಿಬ್ಬಂದಿಯ ವ್ಯವಸ್ಥೆ ಇತ್ತು. ಮಠದಿಂದ ಅವರಿಗಾಗಿ ಕಳುಹಿಸುತ್ತಿದ್ದ ಸಾಮಗ್ರಿಗಳು ಇತರ ಬಡ ವಿದ್ಯಾರ್ಥಿಗಳಿಗೂ ವಿನಿಯೋಗವಾಗುತ್ತಿತ್ತು. ಇತರರಿಗೆ ಉಣಿಸಿ ತಾವು ತಣಿವುದು ಕಿರಿಯ ಶ್ರೀಗಳ ಸಹಜ ಸ್ವಭಾವವಾಗಿದ್ದುದೇ ಇದಕ್ಕೆ ಮುಖ್ಯ ಕಾರಣ.

ಈ ಮೇಲಿನ ಮಾಹಿತಿಯಿಂದ ಮೈಸೂರಿನಲ್ಲಿ ಶ್ರೀ ಸುತ್ತೂರು ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ ಸುಮಾರು 1933ರಲ್ಲೇ ಪ್ರಾರಂಭವಾಗಿದೆ. ಅನಂತರ ಹಿರಿಯ ಜಗದ್ಗುರುಗಳ ಒಪ್ಪಿಗೆ ಪಡೆದು ವಿದ್ಯುಕ್ತವಾಗಿ ಪ್ರಾರಂಭವಾದ ಇತಿಹಾಸ ಬೇರೆ. ಮೈಸೂರಿನ ಲಕ್ಷ್ಮೀಪುರಂನ ವಿದ್ಯಾರ್ಥಿಗಳ ವಾಸಕ್ಕೆ ಅನುಕೂಲವಾಗಿದ್ದ ವಿಶಾಲವಾದ ಬಂಗಲೆಯೊಂದನ್ನು ಬುದ್ಧಿಯವರು ಮೊದಲೇ ಹೇಳಿ ತೆರವು ಮಾಡಿಸಿದ್ದರು. ಪ್ರಸಾದ

---

ಪ್ರಾಸ್ತಾವಿಕ ನುಡಿ ಮತ್ತು ಮಾಹಿತಿ: ಡಾ॥ ಬಿ ನಂಜುಂಡಸ್ವಾಮಿ, ಪಂಡಿತ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು 572102

ನಿಲಯದ ಪ್ರಾರಂಭೋತ್ಸವವು ದಿನಾಂಕ 19.9.1941ರ ಸಂಜೆ ಅರಮನೆ ಹುಜೂರ್ ಸೆಕ್ರೆಟರಿಯವರಾದ ಶ್ರೀ ಕೆ. ಗುರುದತ್ ಬಿ.ಎ., ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಅಂದಿನ ಹಿರಿಯ ಜಗದ್ಗುರುಗಳಾದ ಪರಮಪೂಜ್ಯ ಸುತ್ತೂರು ಜಗದ್ಗುರು ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳು "ಮಂತ್ರ ಮಹರ್ಷಿಗಳೆಂದು" ಪ್ರಸಿದ್ಧರಾದವರು ಇವರ ಪಟ್ಟಾಧಿಕಾರ 18.5.1902. ಇವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಕಾರ್ಯಕ್ರಮ ಮೈಸೂರು ನಗರದ ಪುರಭವನದಲ್ಲಿ ಅಂದಿನ ಪ್ರಧಾನ ಶಿರೋಮಣಿ ಎನ್. ಮಾಧವರಾವ್ ಬಿ.ಎ., ಬಿ.ಎಲ್., ಸಿ.ಪಿ.ಇ., ಇವರ ಅಧ್ಯಕ್ಷತೆಯಲ್ಲಿ 30.9.1944ರಂದು ನೆರವೇರಿತು. ಈ ಎಲ್ಲಾ ಮಾಹಿತಿ ಶ್ರೀ ಚೆನ್ನಮಲ್ಲಿಕಾರ್ಜುನರು ಸಂಪಾದಿಸಿ ಪ್ರಕಟಿಸುತ್ತಾ ಇದ್ದ ಸದ್ಧರ್ಮದೀಪಿಕೆ ಸಂಚಿಕೆ 52 ನವೆಂಬರ್ 1944ರ ಸಂಚಿಕೆಯಲ್ಲಿ ಶ್ರೀ ಹೆಚ್.ಸಿ. ಪಾಟೀಲರು ಬರೆದ ಇಂಗ್ಲಿಷ್ ಲೇಖನದಿಂದ ಸಾಕಷ್ಟು ಮಾಹಿತಿ ತಿಳಿದುಬರುತ್ತದೆ.

It is one of the happiest prides of the lingayat religion that it, with much forethought has produced a galaxy of maths, which though originally meant to be strong holds of religious propagand and moral administration have today turned out to be-thereby justifying their present existence has instruments of serving social cause.

It is these maths that have been playing from times immemorial of the lingayat society. Sri Suttur Math is one such...... with a glorious service record behind sree suttur math has come to much prominence and now weilds enormous influence in Mysore District and outside under the wise and vigilant administration of its present occupant, His Holiness Sri Shivarathreeshwara Swamigalu who has spared no pains to improve it. It owes its present position mainly to his ceaseless and selfless services. It is really a matter of Gratification that the innumerable admires and disciples of the Swamiji celebrated his Golden Jubilee in a very fitting manner on 30th September 1944 in the Rangacharlu Memorial Town Hall on which occasion of fine silver casket and an address on behalf of his Bhaktha Mandali were presented to him. The function was attened by a large number of his devotees not only from all parts of the district but also from outside, apart from the presence of high officers of the Government of his

Highness the Maharaja of Mysore, such as the Dewan and the ministers, a number of persons spoke on sacred life and selfless service of the swamiji, they all stressed at length, the liberal benefacions of the Swamiji. As they repeatedly told the Swamiji has made a very generous gift of maginifilent building to run a free hostelin Mysore city for the benefit of the college students of Mysore. This itself is a substantial donation... These and many such benefactory acts of the Swamiji, coupled with his usual refinement of mind, have won immeasurable love and admiration of the many making him extremly popular not only among his co-religionists but also among the other communities. It is little wonder them that he was so pompously and profusely feliciated and honoured by all on the occasion of his golden jubilee celebrations which of course was a great success.

As a part of this function a number of other functions also were arranged under the gracious patronge of the Swamiji himself.

The veerashaiva Sahithya Sammelana which met under the Distinguished presidentship of Sri S.T. Kambli., B.A., L.L.B., Ex Minister of Bombay was also a great success. Mention must also be made of another equally important function namely an "At home" arranged in honour of the new Veerashaiva Graduates of Mysore university. It was a great function indeed. Professor S.S. Basavanal, M.A., of Dharwar who was the chief guest on the occasion delivered a very useful and scholoarly address to the new Veerashaiva Graduates, that has assembled. These last two functions, needless to say, were the result of the kind and sympathetic encourgement which the organisers releived from his holiness.

ಈ ಮೇಲಿನ ಇಂಗ್ಲಿಷ್ ವರದಿ ಬರೆದವರು ಹೆಚ್.ಸಿ. ಪಾಟೀಲ್. ಇವರ ಬಗ್ಗೆಯೂ ಮಾಹಿತಿ ಸಂಗ್ರಹ ಮಾಡಬೇಕು. ಶ್ರೀ ಚೆನ್ನಮಲ್ಲಿಕಾರ್ಜುನರು ಸಂಪಾದಿಸಿ ಪ್ರಕಟಿಸಿದ 52ನೇ ಸಂಚಿಕೆ ಸದ್ಧರ್ಮದೀಪಿಕೆಯನ್ನು ಪರಿಶೀಲಿಸಿದರೆ ಇನ್ನೂ ಹೆಚ್ಚಿನ ಮಾಹಿತಿ ಲಭ್ಯವಾಗಬಹುದು. ಮಂತ್ರಮಹರ್ಷಿಗಳಿಗೆ ಪಟ್ಟಾಧಿಕಾರವಾದದ್ದು

18–5–1902. ಆಗ ಅವರಿಗೆ ಹದಿನಾರು ವಯಸ್ಸು. ಅಂದರೆ ಅವರ ಜನನ ಕ್ರಿ.ಶ. 1886–1944ರಲ್ಲಿ. ಮಂತ್ರಮಹರ್ಷಿಗಳಿಗೆ 58 ವರ್ಷ ಸುತ್ತೂರು ಮಠದ ಪಟ್ಟಾಧಿಕಾರ ಸ್ವೀಕರಿಸಿ 42 ವರ್ಷವಾಗಿತ್ತು. ಈ ಸಂದರ್ಭವನ್ನು ಕಿರಿಯ ಜಗದ್ಗುರುಗಳು ತಮ್ಮ ಗುರುಗಳ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಎಂದು ಕರೆಯಲು ಕಾರಣ ಸುತ್ತೂರು ಶ್ರೀ ವೀರಸಿಂಹಾಸನ ಪೀಠಕ್ಕೆ ಉತ್ತರಾಧಿಕಾರಿಯಾಗಿ ಸ್ವೀಕರಿಸಿದ ದಿನಾಂಕದಿಂದ ಗಣತಿ ಮಾಡಿದ್ದರಿಂದ 1944ರಲ್ಲಿ ಸುವರ್ಣ ಮಹೋತ್ಸವ ಎಂದು ಕರೆದಿರಬೇಕು. ಅಂದಿನ ಕಾರ್ಯಕ್ರಮಕ್ಕೆ ಬಂದ ಗಣ್ಯಾತಿಗಣ್ಯರು ಸುತ್ತೂರು ಜಗದ್ಗುರುಗಳ ಸೇವೆಯನ್ನು ಶ್ಲಾಘನೆ ಮಾಡಿದ್ದು ಲೇಖಕರು ದಾಖಲಿಸಿದ್ದಾರೆ.

ಈ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ವೀರಶೈವ ಸಾಹಿತ್ಯ ಸಮ್ಮೇಳನ ನಡೆದು ಅವರ ಅಧ್ಯಕ್ಷತೆಯನ್ನು ಶ್ರೀ ಎಸ್.ಟಿ. ಕಂಬಳಿ ಬಿ.ಎ., ಎಲ್.ಎಲ್.ಬಿ., ಮಾಜಿ ಮಂತ್ರಿಗಳು, ಮುಂಬೈ ಸರ್ಕಾರ, ಇವರು ವಹಿಸಿದ್ದರು ಎಂದು ತಿಳಿಸಿದ್ದಾರೆ. ಅದೇ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ನಡೆದ ಮರುದಿನ ಸುತ್ತೂರು ವಿದ್ಯಾರ್ಥಿನಿಲಯದಲ್ಲಿ ವಾಸವಿದ್ದು ಪದವಿ ಪಡೆದ ವಿದ್ಯಾರ್ಥಿಗಳಿಗೆ ಮತ್ತು ಕಿರಿಯ ವಿದ್ಯಾರ್ಥಿಗಳಿಗೆ ಸುತ್ತೂರು ಜಗದ್ಗುರುಗಳ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯುತ್ತಾ ಇತ್ತು. ಅಂತಹ ಒಂದು ಕಾರ್ಯಕ್ರಮದ ಮುಖ್ಯ ಉಪನ್ಯಾಸಕರಾಗಿ ಪ್ರೊ. ಶಿ.ಶಿ. ಬಸವನಾಳರು ಮೈಸೂರಿಗೆ ಬಂದು ವಿದ್ಯಾರ್ಥಿನಿಲಯದಲ್ಲಿ ಉದ್ದೇಶಿಸಿ ಮಾಡಿದ ಉಪನ್ಯಾಸ 1956ರಲ್ಲಿ ಧಾರವಾಡದಿಂದ ಪ್ರಕಟವಾದ **"ಬಸವನಾಳರ ಸ್ಮಾರಕ ಸಂಪುಟ"**, ಪು. 365–400ರಲ್ಲಿ ಮುದ್ರಣವಾಗಿದೆ. ಈ ಸಂಪುಟದ ಸಂಪಾದಕರು ಎಚ್.ಎಫ್. ಕಟ್ಟಿಮನಿ, ಬಿ.ಎ., ಎಮ್.ಎಲ್.ಸಿ., ಎಮ್.ಜಿ. ವಿರೂಪಾಕ್ಷನ್. ಆ ಉಪನ್ಯಾಸವನ್ನು ಈ ಲೇಖನದ ಕಡೆಯ ಭಾಗದಲ್ಲಿ ಯಥಾವತ್ತಾಗಿ ಕೊಡಲಾಗಿದೆ. ಇದೇ ಸಂಪುಟದಲ್ಲಿ ಜಿ.ಎನ್. ಹಾಲಪ್ಪ, ಎಂ.ಎ., (ಕೋಲಂಬಿಯಾ) ಇವರು ಬರೆದ ಲೇಖನ "ನಂದಾದೀವಿಗೆ"ಯಲ್ಲಿ ಇನ್ನಷ್ಟು ಮಾಹಿತಿ ಇದೆ. ಅದನ್ನು ಇಲ್ಲಿ ಯಥಾವತ್ತಾಗಿ ಕೊಡಲಾಗಿದೆ.

ಶ್ರೀ ಬಸವನಾಳರು ಕೇವಲ ಒಬ್ಬ ವ್ಯಕ್ತಿಯಾಗಿರದೆ ಒಂದು ಶಕ್ತಿ ಅಥವಾ ಸಂಸ್ಥೆಯಂತಿದ್ದರು. ಅವರ ಸರಳ ಜೀವನ ಪದ್ಧತಿ ಮತ್ತು ಆಳವಾದ ವಿಚಾರ ಮಾಡುವ ಪರಿಪಾಠಗಳಿಂದ ಅಸಂಖ್ಯ ಶಿಷ್ಯರ ಮನಸ್ಸನ್ನು ಸೂರೆಗೊಂಡಿದ್ದರು. ನನಗೆ ಅವರ ಪರಿಚಯವಾದದ್ದು 1940ರಿಂದೀಚೆಗೆ. ಅವರ ಸಹೋದ್ಯೋಗಿ ಮತ್ತು ಒಡನಾಡಿಗಳಾದ ಶ್ರೀ ವಿರೂಪಾಕ್ಷನ್ ಮೊದಲಾದವರ ಮೂಲಕ ನನಗೆ ಮೊದಲೇ ಶ್ರೀ ಬಸವನಾಳರ ವ್ಯಕ್ತಿತ್ವದ ಬಗ್ಗೆ ಸಾಕಷ್ಟು ಪರಿಚಯವಾಗಿತ್ತು ಮತ್ತು ನನಗೆ ಶ್ರೀ ಬಸವನಾಳರ ವಿಷಯದಲ್ಲಿ ಗೌರವಭಾವನೆ ಮೂಡಿತ್ತು. ಶ್ರೀ ಬಸವನಾಳರನ್ನು 1944ರಲ್ಲಿ ಮೈಸೂರಿಗೆ ಕರೆಸುವ ಸುಯೋಗ ದೊರಕಿತು. ಅವರ ಮುಂದಾಳುತನ ನನಗೆ ಲಭಿಸಿತ್ತು. ಅಂದು ನಾನು ಬಿ.ಎ. ಆನರ್ಸ್ (ರಾಜ್ಯಶಾಸ್ತ್ರ) ಪದವೀಧರನಾಗಿ ಎಂ.ಎ.ಗೆ ಓದುತ್ತಿದ್ದೆ. ಅದೇ ತಾನೇ

ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು ಮೈಸೂರಿನಲ್ಲಿ ದೊಡ್ಡ ಪ್ರಸಾದನಿಲಯವನ್ನು ತೆರೆದು ವಿದ್ಯಾರ್ಥಿಗಳಿಗೆ ಉತ್ತಮವಾದ ಪ್ರಸಾದ ಮತ್ತು ವಸತಿ ಸೌಕರ್ಯಗಳನ್ನೊದಗಿಸಿ ಸರ್ವರ ಕೃತಜ್ಞತೆಗೆ ಪಾತ್ರರಾಗಿದ್ದರು. ಸಮಾಜಸೇವೆಯಲ್ಲಿ ತುಂಬಾ ಉತ್ಸಾಹದಿಂದ ಕೂಡಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸುತ್ತೂರು ಮಠದ ಕಿರಿಯ ಸ್ವಾಮಿಗಳವರು. ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಕಾಲದಲ್ಲಿ ನೂತನ ವೀರಶೈವ ಪದವೀಧರರಿಗೆ ಒಂದು ಸತ್ಕಾರಕೂಟವೇರ್ಪಡಿಸುವುದಾಗಿಯೂ ಆ ಕಾಲಕ್ಕೆ ಒಬ್ಬ ನುರಿತ ಭಾಷಣಕಾರರು ಉಪದೇಶ ಮಾಡಲು ಬೇಕೆಂದೂ ಅಂತಹವರ ಹೆಸರನ್ನು ಸೂಚಿಸಬೇಕೆಂದು ಆಜ್ಞೆ ಮಾಡಿದರು. ನಾನು ಶ್ರೀ ಬಸವನಾಳರ ಹೆಸರನ್ನು ಸೂಚಿಸಿದೊಡನೆಯೇ ಬಹಳ ಉತ್ತಮ ಸಲಹೆಯೆಂದೂ ಅವರನ್ನು ಹೇಗಾದರೂ ಮಾಡಿ ಒಪ್ಪಿಸುವ ಭಾರ ನಿಮ್ಮದೆಂದೂ ತಿಳಿಸಿದರು. ನಾನು ಈ ಕರ್ತವ್ಯವನ್ನು ಯಶಸ್ವಿಯಾಗಿ ಮಾಡಿದೆ. ಏಕೆಂದರೆ ನನ್ನ ಪರವಾಗಿ ಶ್ರೀ ಎಂ.ಜಿ. ವಿರೂಪಾಕ್ಷನ್ ಅವರು ವಕೀಲಿ ವಹಿಸಿದ್ದರು. ನೂತನ ಪದವೀಧರರನ್ನು ಕುರಿತು ಅಂದು ಬಸವನಾಳರು ಮಾಡಿದ ಭಾಷಣವನ್ನು ನಾವೆಂದೂ ಮರೆಯಲಾರೆವು. ವೀರಶೈವ ಸಮಾಜದ ಪದವೀಧರರನ್ನುದ್ದೇಶಿಸಿ ಆಡಿದಾಗ್ಯೂ ಅವರ ಮಾತುಗಳು ಭಾರತೀಯ ಪದವೀಧರರೆಲ್ಲರಿಗೂ ಅನ್ವಯಿಸುವಂತಹವಿದ್ದವು.

"ದೈವವನ್ನು ಹಳಿದು ಮೂಲೆಗೊರುವ ಮೂಳನಿಗೆಲ್ಲ ಇಂದಿನ ಜಗತ್ತು; ಸಾಹಸದಿಂದ ಮುನ್ನುಗ್ಗಿ ಕಾರ್ಯ ಮಾಡುವ ಕರ್ಮಶೀಲರಿಗೆ ಮೀಸಲು ಅದು" ಬಸವನಾಳರ ಈ ಹಿತವಚನಗಳನ್ನು ಮೆಚ್ಚಿ ಪತ್ರಿಕೆಗಳು ಸಂಪಾದಕೀಯ ಬರೆದವು ಎಂದಿದ್ದಾರೆ.

ಪ್ರೊ॥ ಶಿ.ಶಿ. ಬಸವನಾಳರ ಸ್ಮಾರಕ ಸಂಪುಟದಲ್ಲಿ ಪು. 147–158ರವರೆಗೆ ವ್ಯಾಕರಣತೀರ್ಥ, ವಿದ್ಯಾಲಂಕಾರ, ವಿದ್ಯಾವಾಗೀಶ, ಚಂದ್ರಶೇಖರಶಾಸ್ತ್ರಿಗಳು ಬರೆದ "ಬಸವನಾಳರ ಬಹುಮುಖ ವ್ಯಕ್ತಿತ್ವ" ಲೇಖನ ಅಚ್ಚಾಗಿದೆ. ಆ ಲೇಖನದಲ್ಲಿ ಪುಟ 149ರಲ್ಲಿ "......ಹೋದ ವರ್ಷ–ಇಲ್ಲಿಯ (ಮೈಸೂರು) ಶ್ರೀ ಸುತ್ತೂರು ಮಹಾಸ್ವಾಮಿಗಳವರ ವಿದ್ಯಾರ್ಥಿನಿಲಯದಲ್ಲಿ ಶ್ರೀ ಬಸವನಾಳರ ಫೋಟೋ ಅನಾವರಣದ ಕಾಲಕ್ಕೆ ಸಂಪೂರ್ಣ ಅವರ ಪರಿಚಯ ನಾನೇ ಮಾಡುವ ಪ್ರಸಂಗ ಬಂದಿದ್ದಿತು ಎಂದಿದ್ದಾರೆ. ಈ ಮಾಹಿತಿಯಿಂದ ಪ್ರೊ॥ ಶಿ.ಶಿ. ಬಸವನಾಳರ ವಿದ್ವತ್ ಮೇಲಿನ ಗೌರವದಿಂದ ಸುತ್ತೂರು ಮಠಕ್ಕೆ ಇದ್ದ ಸಂಪರ್ಕದ ಜ್ಞಾಪಕಾರ್ಥವಾಗಿ ಪರಮಪೂಜ್ಯ ರಾಜಗುರುತಿಲಕ ಜಗದ್ಗುರು ಶ್ರೀ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಅವರ ಭಾವಚಿತ್ರವನ್ನು 1952, 1953ರಲ್ಲಿ ಅನಾವರಣ ಮಾಡಿಸಿರಬೇಕು.

ಕಳೆದ ಅರವತ್ತೆಂಟು ವರ್ಷದ ನಂತರ ಈ ಎಲ್ಲಾ ಮಾಹಿತಿಯನ್ನು ಗ್ರಹಿಸುವುದೇ ಕಷ್ಟಕರವಾದದ್ದು. ನಮ್ಮ ಯುವ ವಿದ್ವಾಂಸರು ಪ್ರಕಟಿತ ಸಾಹಿತ್ಯವನ್ನು ಸೂಕ್ಷ್ಮವಾಗಿ

ಅಧ್ಯಯನ ಮಾಡಿದರೆ ಇನ್ನಷ್ಟು ರೋಚಕವಾದ ಮಾಹಿತಿ ಖಂಡಿತ ಲಭ್ಯವಾಗುತ್ತದೆ. ಪ್ರೊ॥ ಶಿ.ಶಿ. ಬಸವನಾಳರು ಶ್ರೀ ಸುತ್ತೂರು ವಿದ್ಯಾರ್ಥಿನಿಲಯದಲ್ಲಿ ಮಾಡಿದ ಉಪನ್ಯಾಸವನ್ನು ಯಥಾವತ್ತಾಗಿ ನೀಡಲಾಗಿದೆ.

## ಪದವೀಧರರಿಗೆ ಉಪದೇಶಪರ ಭಾಷಣ

(ಮೈಸೂರಿನ ಶ್ರೀ ಸುತ್ತೂರು ಮಠದ ಪ್ರಸಾದನಿಲಯದಲ್ಲಿ ಗೈದ ಭಾಷಣ–1944)

ಪೂಜ್ಯರೇ, ಅಧ್ಯಕ್ಷ ಮಹನೀಯರೇ, ಹಿರಿಯರೇ ಹಾಗೂ ನೂತನ ಪದವೀಧರರೇ,

ಈ ಹೊತ್ತು ತಾವು ಇಷ್ಟೊಂದು ಉತ್ಸಾಹದಿಂದ ನಡೆಸಿರುವ ಈ ಸತ್ಕಾರ ಸಮಾರಂಭದಲ್ಲಿ ಭಾಗವಹಿಸುವ ಸುಸಂಧಿಯನ್ನು ನನಗೆ ಕಲ್ಪಿಸಿಕೊಟ್ಟುದುದಕ್ಕಾಗಿ ನಾನು ತಮ್ಮೆಲ್ಲರಿಗೆ ತುಂಬ ಉಪಕೃತನಾಗಿದ್ದೇನೆ. ಇಂತಹ ಮಹತ್ತ್ವದ ಉತ್ಸವದಲ್ಲಿ ಮುಖ್ಯ ಭಾಷಣ ಮಾಡಲು ನನಗಿಂತಲು–ವಿದ್ಯೆಯಿಂದಲೂ ಅನುಭವದಿಂದಲೂ ಗೌರವದಿಂದಲೂ–ಹಿರಿಯರಾದ ಮಹನೀಯರು ಹಲವರು ದೊರೆಯಬಹುದಾಗಿದ್ದರೂ ಈ ಕಾರ್ಯಕ್ಕೆ ನನ್ನನ್ನು ಆರಿಸಿದುದು ತಾವು ನನ್ನಲ್ಲಿಟ್ಟ ಪ್ರೀತಿ ವಿಶ್ವಾಸಗಳ ಕುರುಹೆಂದು ಬಗೆದು ನಾನು ತಮ್ಮೀ ಕರೆಯನ್ನು ಸ್ವೀಕರಿಸಿದ್ದೇನೆ. ನಾನು ಸಲ್ಲಿಸಬಹುದಾದ ಅಲ್ಪ ಸೇವೆಯನ್ನು ಅದೇ ಪ್ರೀತಿವಿಶ್ವಾಸಗಳಿಂದ ತಾವು ಘನವಾಗಿ ಭಾವಿಸುವಿರೆಂದೂ ನಂಬಿಕೊಂಡಿದ್ದೇನೆ.

ಮೈಸೂರು ವಿಶ್ವವಿದ್ಯಾನಿಲಯದ ನೂತನ ಪದವೀಧರರಾದ ವೀರಶೈವ ತರುಣರನ್ನೆಲ್ಲ ಒಂದೆಡೆ ಕೂಡಿಸಿ ಅವರ ಸನ್ಮಾನಾರ್ಥವಾಗಿ ತಾವು ಸಾರ್ವಜನಿಕವಾಗಿ ನೆರವೇರಿಸುತ್ತಿರುವ ಈ ಸತ್ಕಾರ ಸಮಾರಂಭದ ಉಪಕ್ರಮ ನೂತನವಾದುದು, ಪ್ರಶಂಸನೀಯವಾದುದು. ಇತರ ಭಾಗದವರಿಂದ ಅನುಕರಣೀಯವಾದುದು. ಇದೇ ಮುಂದೆ ವಾರ್ಷಿಕೋತ್ಸವವಾಗಿ ಏರ್ಪಟ್ಟರಂತೂ ತಾವೊಂದು ಆದರ್ಶ ಪರಂಪರೆಯನ್ನು ಸ್ಥಾಪಿಸಿದ ಶ್ರೇಯಸ್ಸಿಗೆ ಪಾತ್ರರಾಗುವಿರೆಂದೇ ನನ್ನ ಭಾವನೆ. ಸ್ವಲ್ಪ ಸೂಕ್ಷ್ಮವಾಗಿ ವಿವೇಚಿಸಿದರೆ ಇಂತಹ ಸತ್ಕಾರ ಸಮಾರಂಭಗಳು ಇದಕ್ಕೂ ಎಷ್ಟೋ ಕಾಲ ಮುಂಚೆಯೆ ಪ್ರಚಾರವಾಗಬೇಕಾಗಿತ್ತೆಂದು ತೋರುತ್ತದೆ.

ವೀರಶೈವ ಸಮಾಜವು ಕರ್ನಾಟಕದಲ್ಲಿ ಒಂದು ಗಣ್ಯವಾದ ಸಮಾಜ. ಜನಸಂಖ್ಯೆಯ ದೃಷ್ಟಿಯಿಂದ, ಸಂಪತ್ತಿನ ದೃಷ್ಟಿಯಿಂದ, ವ್ಯವಹಾರ ಉದ್ಯಮಗಳ ದೃಷ್ಟಿಯಿಂದ, ಕರ್ನಾಟಕದ ಸಾಹಿತ್ಯಕ್ಕೆ ಹೊಸ ದಿಶೆಯನ್ನು ತೋರಿಸಿಕೊಡುವಲ್ಲಿ, ಕರ್ನಾಟಕ ಸಂಸ್ಕೃತಿಗೆ ವೈಶಿಷ್ಟ್ಯವನ್ನು ಒದಗಿಸಿಕೊಡುವಲ್ಲಿ, ಕರ್ನಾಟಕದ ಇತಿಹಾಸವನ್ನು ರೂಪಿಸುವಲ್ಲಿ ವೀರಶೈವರಿಂದಾದ ಕಾರ್ಯ–ಸೇವೆ–ಸಾಹಸಗಳು ಅತುಳವಾದುವು, ಅಮೌಲ್ಯವಾದುವು, ಅಮಿತವಾದುವು. ಈ ಸಮಾಜದ ಧೋರಣೆ ಎಂದಿನಿಂದಲೂ ಪ್ರಗತಿಪರ; ಇದರ ದೃಷ್ಟಿ ಯಾವಾಗಲೂ ವಿಶಾಲವಾದುದು. ಬ್ರಿಟಿಷರ ಆಧಿಪತ್ಯ ನಮ್ಮ ನಾಡಲ್ಲಿ ನೆಲೆಗೊಳ್ಳುವ ಮುಂಚೆ ನಮ್ಮ ನಾಡಿನ ಶಿಕ್ಷಣ ವ್ಯವಸ್ಥೆ–ಅದರಲ್ಲಿಯೂ ಕನ್ನಡ ಶಿಕ್ಷಣದ ವ್ಯವಸ್ಥೆ–

ಬಹುಮಟ್ಟಿಗೆ ವೀರಶೈವ ಸಮಾಜದ ಆಶ್ರಯದಲ್ಲಿಯೆ ನಿರ್ವಾಹವಾಗುತ್ತಿದ್ದಿತು. ಪರಭಾಷೆಗಳ ಆಘಾತದಲ್ಲಿಯೂ ಕೂಡ ಕನ್ನಡ ತಲೆಯೆತ್ತಿ ನಿಂತುದೂ ಬದುಕಿ ಬಾಳಿದುದೂ ಪರಂಪರವಾಗಿ ಸಾಗಿಬಂದಿದ್ದ ಅಯ್ಯನವರ ಶಾಲೆಗಳಲ್ಲಿ. ಅವರ ನಿಸ್ವಾರ್ಥ ಶ್ರಮದ ಫಲವಾಗಿ, ಬ್ರಿಟಿಷ್ ಆಡಳಿತವು ಸ್ಥಾಪಿತವಾದನಂತರ ಆಂಗ್ಲ ಶಿಕ್ಷಣದ ಲಾಭವನ್ನು ಹೊಂದಲು ಇತರ ಸಮಾಜಗಳು ಮುಂದೆ ಬಂದಂತೆ ವೀರಶೈವ ಸಮಾಜವು ಆರಂಭದಲ್ಲಿಯೇ ಮುಂದೆ ಬಾರದೆ ಇದ್ದುದಕ್ಕೆ ಈ ಸಮಾಜವು ತನ್ನ ಹಾಗು ನಾಡಿನ ಕನ್ನಡತನವನ್ನು ಕಾಪಾಡುವುದರಲ್ಲಿ ನಿರತವಾದುದೇ ಕಾರಣವೆಂದು ಹೇಳಬಹುದು. ಆದರೆ ಬ್ರಿಟಿಷರ ರಾಜಸತ್ತೆಯು ಕೇವಲ ತಾತ್ಪೂರ್ತಿಕವಾದ ಒಂದು ಆಘಾತವಾಗಿರದೆ ಹೊಸ ಮನ್ವಂತರವನ್ನೆ ಸ್ಥಾಪಿಸಲು ಕಾರಣವಾಯಿತೆಂದೂ, ಅದರ ಪರಿಣಾಮವಾಗಿ ನಮ್ಮ ಸಮಾಜದಲ್ಲಿ ಆಂಗ್ಲ ಶಿಕ್ಷಣ ಪ್ರಸಾರವಾಗದೆ ಗತ್ಯಂತರವಿಲ್ಲವೆಂದೂ ತಿಳಿಯಬೇಕಾದರೆ ಕೆಲ ಕಾಲ ಹಿಡಿಯಿತು. ಹೀಗೆ ಆಂಗ್ಲ ವಿದ್ಯೆಯಲ್ಲಿ ಹಿಂದುಳಿದ ಸಮಾಜ ಕ್ಷಿಪ್ರದಲ್ಲಿಯೆ ಇತರ ಕ್ಷೇತ್ರಗಳಲ್ಲಿಯೂ ಹಿಂದುಳಿಯತೊಡಗಿತು. ವ್ಯವಸಾಯ ಉದ್ಯಮಗಳು ವೀರಶೈವರ ಕೈತಪ್ಪಿ ಪರಕೀಯರ ಕೈಸೇರಲಾರಂಭಿಸಿದುವು.

ಬ್ರಿಟಿಷರ ರಾಜ್ಯಕ್ರಮದ ಪರಿಣಾಮವಾಗಿ ಕರ್ನಾಟಕವು ಹಲವು ಪ್ರಾಂತಗಳಾಗಿ ಹಂಚಿಹೋದುದರಿಂದ ಕರ್ನಾಟಕದಲ್ಲಿಯೆ ಬಹುವಾಗಿ ಪಸರಿಸಿದ್ದ ವೀರಶೈವ ಸಮಾಜವು ಹರಿದು ಹಂಚಿದಂತಾಗಿ ಪರಸ್ಪರ ಬಳಿಕೆ ಕಡಿಮೆಯಾಯಿತಲ್ಲದೆ, ತನ್ನ ಅರಿವೆ ತನಗಿಲ್ಲದಂತಾಯಿತು. ಇಡೀ ನಾಡಿಗೆ ಬಹುದಿವಸ ಅಗ್ರಗಾಮಿಯಾಗಿದ್ದ ಸಮಾಜ ಕ್ರಿ.ಶ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಹಿಂದುಳಿದ ಸಮಾಜವೆಂಬ ಬಿರುದಿಗೆ ಪಕ್ಕಾಯಿತು. ಹದಗೆಟ್ಟ ಈ ಪರಿಸ್ಥಿತಿಯನ್ನು ಸುಧಾರಿಸಲು ನವೀನ ಯುಗಕ್ಕೆ ತಕ್ಕ ಆಂಗ್ಲ ವಿದ್ಯಾಪ್ರಸಾರವೇ ಏಕಮೇವ ಸಾಧನೆಯೆಂದು ಸುದೈವದಿಂದ ಆ ಕಾಲದ ಸಮಾಜ ನಾಯಕರಿಗೆ ತೋರಿತು. ತೀವ್ರವೆ ಅಲ್ಲಲ್ಲಿ ಶಿಕ್ಷಣ ಪ್ರಸಾರದ ಉದ್ದೇಶದಿಂದ ಧನನಿಧಿಗಳನ್ನು ಕೂಡಿಸುವ ಕಾರ್ಯಕ್ಕೆ ಆರಂಭವಾಯಿತು. ಉತ್ತರ ಕರ್ನಾಟಕಕ್ಕೆ ಧಾರವಾಡದಲ್ಲಿ, ಮೈಸೂರು ಪ್ರಾಂತಕ್ಕೆ ಬೆಂಗಳೂರಲ್ಲಿ, ಮದ್ರಾಸ್ ವಿಭಾಗಕ್ಕೆ ಬಳ್ಳಾರಿಯಲ್ಲಿ ಪ್ರತ್ಯೇಕ ಧನನಿಧಿಗಳೂ ಅವುಗಳ ವ್ಯವಸ್ಥೆಗೆ ವಿದ್ಯಾವರ್ಧಕ ಸಂಸ್ಥೆಗಳೂ ಸ್ಥಾಪಿತವಾಗಿ ಶಿಕ್ಷಣವನ್ನು ಪಡೆಯಲೆಳಸಿದ ವೀರಶೈವ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿ ಮುಂತಾದವುಗಳನ್ನು ಹಂಚುವ ಕಾರ್ಯ ನಡೆಯಿತು. ಮುಂದೆ ತುಸು ದಿವಸಗಳಲ್ಲಿಯೆ ಸಮಾಜದಲ್ಲಿ ಶಿಕ್ಷಣ ಪ್ರಗತಿ ಇನ್ನೂ ತೀವ್ರಗತಿಯಿಂದ ಸಾಗಬೇಕೆಂಬ ಆಕಾಂಕ್ಷೆಯಿಂದ ಪ್ರೇರಿತರಾದ ಕೊಡುಗೈ ದೊರೆಗಳನೇಕರು ಮುಕ್ತಹಸ್ತರಾಗಿ ಧಾರಾಳವಾಗಿ ಧನಸಹಾಯವನ್ನು ಮಾಡಲಾರಂಭಿಸಿದರು; ಶಿಕ್ಷಣಕ್ಕಾಗಿ ತಮ್ಮ ಆಸ್ತಿ–ಸೊತ್ತುಗಳನ್ನೆ ಧಾರೆಯೆರೆಯಲನು ವಾದರು. ಕಾಲೋಚಿತಕ್ಕನುಸರಿಸಿ ಸಮಾಜದ ಗುರುಗಳು, ಶೂನ್ಯ ಪೀಠಾಧಿಕಾರಿಗಳೇ ಮೊದಲಾದವರು ಅಲ್ಲಲ್ಲಿ ಪ್ರಸಾದನಿಲಯಗಳನ್ನು ಸ್ಥಾಪಿಸಿ ಶಿಕ್ಷಣ ಪ್ರಸಾರಕಾರ್ಯದಲ್ಲಿ

ನೆರವಾದರು. ಮುಂದೆ ಕಾಲಾನುಕ್ರಮದಿಂದ ಸಮಾಜದಲ್ಲಿ ಶಿಕ್ಷಣ ಪ್ರಸಾರ ಇನ್ನೂ ತ್ವರಿತಗತಿಯಿಂದ ಸಾಗಬೇಕಾದರೆ ಧನಸಹಾಯ, ಅನ್ನಸಹಾಯ ಇವುಗಳಲ್ಲದೆ ಪ್ರತ್ಯಕ್ಷ ಶಿಕ್ಷಣ ಕಾರ್ಯವನ್ನೆ ಸಮಾಜಪರವಾಗಿ ಕೈಕೊಳ್ಳುವುದು ಅವಶ್ಯಕವೆಂಬ ವಿಚಾರ ತಲೆದೋರಿ ಅಲ್ಲಲ್ಲಿ ಶಿಕ್ಷಣ ಸಂಸ್ಥೆಗಳು ವೀರಶೈವರಿಂದ ಸ್ಥಾಪಿತವಾದುವು. ಈಗ ನಮ್ಮ ನಾಡಿನ ಹಲವು ಭಾಗಗಳಲ್ಲಿ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಶಾಲೆಗಳಿಂದ ಮೊದಲು ಮಾಡಿ ಆಂಗ್ಲಭಾಷೆಯಲ್ಲಿ ಉಚ್ಚ ಶಿಕ್ಷಣವನ್ನು ನೀಡುವ ಕಾಲೇಜಿನಂತಹ ಸಂಸ್ಥೆಗಳು ಸ್ಥಾಪಿತವಾಗಿವೆ. ಇವುಗಳಲ್ಲಿ ಕೇವಲ ವೀರಶೈವರಿಗಷ್ಟೇ ಪ್ರವೇಶವಿರದೆ ಎಲ್ಲ ಸಮಾಜದವರಿಗೂ ಸರಿಯಾಗಿ ವಿದ್ಯಾವಿತರಣವು ನಡೆಯುತ್ತಿರುವುದು ವೀರಶೈವ ಸಮಾಜಕ್ಕೆಲ್ಲ ಹೆಮ್ಮೆಯ ಮಾತಾಗಿದೆ; ಸಮಾಜ ಪರಂಪರೆಗೆ ಅನುಗುಣವಾಗಿದೆ. ಹೀಗೆಯೇ ಸಂಸ್ಕೃತಾಭ್ಯಾಸಕ್ಕಾಗಿ ಪಾಠಶಾಲೆಗಳಿಂದ ಕಾಲೇಜುಗಳವರೆಗೆ ಸಂಸ್ಥೆಗಳಿವೆ; ಪ್ರತ್ಯೇಕವಾದ ಧಾರ್ಮಿಕ ಶಿಕ್ಷಣದ ಸಂಸ್ಥೆಗಳೂ ಕೆಲವಿವೆ. ಹೀಗೆ ಬಹುಮುಖವಾಗಿ ದೀರ್ಘಕಾಲ ನಡೆದ ಪ್ರಯತ್ನಗಳ ಪರಿಣಾಮವಾಗಿ, ಸಮಾಜ ನಾಯಕರ ಸಮಾಜ ಸೇವಕರ ಅವಿಶ್ರಾಂತ ಪರಿಶ್ರಮದ ಫಲವಾಗಿ, ಶ್ರೀಮಂತರ, ತ್ಯಾಗವೀರರ ಔದಾರ್ಯದ ಬೆಳಸಾಗಿ, ಮಹಾಸ್ವಾಮಿಗಳನೇಕರ ಆಶೀರ್ವಾದರೂಪಾಗಿ, ಈಗೀಗ ನಮ್ಮ ಸಮಾಜದ ಶಿಕ್ಷಣ ಕಣ್ಣಿಗೆ ಕಾಣುವಷ್ಟು ಪ್ರಗತಿಹೊಂದಿದೆಯೆನ್ನಲು ಬರುವಂತಾಗಿದೆ. ಅಂತೆಯೇ ಇಂದು ಮೈಸೂರು ವಿಶ್ವವಿದ್ಯಾನಿಲಯವೊಂದರಿಂದಲೆ ಸುಮಾರು 50 ಜನ ತರುಣ ಪದವೀಧರರು ಒಂದೇ ವರ್ಷದಲ್ಲಿ ಹೊರಬೀಳುವ ಸುಯೋಗ ಪ್ರಾಪ್ತವಾಗಿದೆ. ಇದೇ ರೀತಿ ಮುಂಬಯಿ, ಮದ್ರಾಸ್, ಆಂಧ್ರ, ಒಸ್ಮಾನಿಯಾ ಮುಂತಾದ ವಿಶ್ವವಿದ್ಯಾಲಯ ಗಳಿಂದಲೂ ಹೊರ ಹೊರಡುವ ಪದವೀಧರರ ಸಂಖ್ಯೆ ಉತ್ಸಾಹಜನಕವಾಗಿದೆ. ಆದುದರಿಂದ ವೀರಶೈವ ಸಮಾಜದ, ಒಟ್ಟಿನಲ್ಲಿಯ ಶಿಕ್ಷಣ ಪ್ರಗತಿ ಈಗ ಯಾವ ಮಟ್ಟಕ್ಕೆ ಮುಟ್ಟಿದೆ, ಪ್ರತಿ ವರ್ಷ ಯಾವ ಪ್ರಮಾಣದಲ್ಲಿ ಹೆಚ್ಚುತ್ತಿದೆ, ಈಗ ಯಾವ ದಿಶೆಗಳಲ್ಲಿ ಸಮಾಧಾನಕರವಾಗಿದೆ, ಇನ್ನು ಯಾವ ಯಾವ ಶಾಖೆಗಳಲ್ಲಿ ಪ್ರಯತ್ನ ಮಾಡಬೇಕಾಗಿದೆ–ಇವೇ ಮುಂತಾದ ಸಂಗತಿಯನ್ನು ಕುರಿತು ಸಮಾಲೋಚನೆ ಮಾಡಲು ಈ ಬಗೆಯ ಸತ್ಕಾರ ಸಮಾರಂಭಗಳು ಅನುಕೂಲವಾಗುವುವೆಂದೇ ನನ್ನ ಎಣಿಕೆ. ಆದುದರಿಂದ ಇಂತಹ ಸಮಾರಂಭಗಳು ಅಖಿಲ ವೀರಶೈವ ಪದವೀಧರರನ್ನು ಕುರಿತು ಏರ್ಪಡುವುದು ಅತ್ಯಾವಶ್ಯಕವೆಂದು ನನ್ನ ಭಾವನೆ; ಅಂತಹ ಏರ್ಪಾಟು ಕ್ಷಿಪ್ರದಲ್ಲಿಯೆ ಸಾಧಿಸಲೆಂದು ನನ್ನ ಬಯಕೆ.

ನೂತನ ವೀರಶೈವ ಪದವೀಧರರೇ, ಇದುವರೆಗಿನ ನಿಮ್ಮ ಶಿಕ್ಷಣದ ಬ್ರಹ್ಮಚರ್ಯವನ್ನು ಮುಗಿಸಿ, ಸ್ವತಂತ್ರ ಜೀವನದ ಸಿಹಿ ಕಹಿಗಳನ್ನು ಸವಿಯುವ ಹಂತಕ್ಕೆ ಬಂದು ಮುಟ್ಟಿರುವಿರಿ. ಇಂತಹ ಪ್ರಸಂಗದಲ್ಲಿ ನಿಮ್ಮ ಬಾಳ ಬಟ್ಟೆಯನ್ನು ಸದಾ ಬೆಳಗುವ ದಿವ್ಯ ಸಂದೇಶವನ್ನು ಕೊಡುವ ಅಧಿಕಾರವಾಗಲಿ ಯೋಗ್ಯತೆಯಾಗಲಿ ನನಗಿಲ್ಲ. ಆದರೆ ಜೀವನಪಥದಲ್ಲಿ

ಸೇವಾವೃತ್ತಿಯಾಗಲಿ, ಉದ್ಯೋಗವ್ಯವಹಾರವಾಗಲಿ ಆವ ಉಪಕ್ರಮವನ್ನು ಕೈಕೊಂಡರೂ ಹೊಟ್ಟೆ ಹೊರೆಯುವ, ಕುಟುಂಬವನ್ನು ಪೋಷಿಸುವ ಅವಶ್ಯ ಕರ್ತವ್ಯಗಳಾಚೆ ವಿಶಾಲವಾದ ಸಾರ್ವಜನಿಕ ಕ್ಷೇತ್ರವೊಂದು ಇದೆಯೆಂದೂ, ಅದರಲ್ಲಿ ಸಾಧ್ಯವಾದಮಟ್ಟಿಗೆ (ಮನಸ್ಸು ಮಾಡಿದರೆ ಯಾವಾಗಲೂ ಸಾಧ್ಯ) ಪ್ರತ್ಯಕ್ಷ ಕಾರ್ಯವನ್ನು ಎಸಗಲು ಬರುವಂತಿದೆಯೆಂದೂ ಸಾಧ್ಯವಿಲ್ಲದಿದ್ದರೆ ಅಂತಹ ಕಾರ್ಯದಲ್ಲಿ ತೊಡಗಿದವರಿಗೆ ಸಹಾಯ ಸಹಾನುಭೂತಿಯನ್ನು ತೋರಿಸಲು ಯಾವಾಗಲೂ ಶಕ್ಯವಿದೆ ಎಂದೂ ನಿಮ್ಮ ಅವಗಾಹನೆಗೆ ತರಲು ಬಯಸುತ್ತೇನೆ. ದಿನಚರ್ಯದ ಯಾವ ಕೆಲಸಗಳಲ್ಲಿ ನೀವು ತೊಡಗಿದ್ದರೂ, ನೀವು ವೀರಶೈವರು ಕನ್ನಡಿಗರು ಭಾರತೀಯರೆಂಬ ಅರಿವು ಸ್ಥಿರವಾಗಿ ನಿಮ್ಮಲ್ಲಿ ಮೈಗೊಂಡಿದ್ದರೆ ಸಮಾಜಪುರುಷನು ಸರ್ವಾಂಗಸುಂದರವಾಗಿ ವರ್ಧಿಸಲು ಅನುಕೂಲವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಬದುಕಿನ ಕಾರ್ಯರಂಗದಲ್ಲಿ ಪ್ರತಿಯೊಬ್ಬನಿಗೆ ಉಚ್ಚ ಅಧಿಕಾರವಾಗಲಿ ವಿಶಾಲ ಕ್ಷೇತ್ರವಾಗಲಿ ದೊರಕುವುದು ಸಾಧ್ಯವಿಲ್ಲ. ಅದಿಲ್ಲದಿದ್ದರೆ ಸಾರ್ವಜನಿಕ ಕಾರ್ಯಗಳನ್ನು ಗೈಯಲು ಸಾಧ್ಯವಿಲ್ಲವೆಂಬ ಸಾಮಾನ್ಯ ತಿಳಿವಳಿಕೆಗೆ ನೀವು ಎಡೆಗೊಡತಕ್ಕದ್ದಲ್ಲ. ನಿತ್ಯ ಜೀವನದಲ್ಲಿ ನಿಮ್ಮ ಹೆತ್ತಮ್ಮನಿಗೆ ಭಾರತಾಂಬೆಗೆ ಕೇವಲ ನೆನಪಿನ ಸೇವೆಯನ್ನು ಸಲ್ಲಿಸಿದರೂ ಸಾರ್ವಜನಿಕ ಕಾರ್ಯಗಳಿಗೆ ಹೆಚ್ಚು ಪುಷ್ಟಿ ದೊರೆಯುವುದೆಂಬುದು ನಮ್ಮ ಮನವರಿಕೆಯಾಗಿರಬೇಕು. ಸಮಾಜದ ಕಣ್ಣಿನಲ್ಲಿ ಎಲ್ಲ ಬಗೆಯ ಸೇವೆಗೆ ಒಂದೇ ಬೆಲೆ.

ಇಂದು, ನಾನು ಹೇಳಬಯಸಿರುವುದು ನಮ್ಮ ನಾಡಿನ ಗತವೈಭವದ ಹಿರಿಮೆಯನ್ನಲ್ಲ; ಉಜ್ವಲವಾದ ಸಾಹಿತ್ಯದ ಪರಂಪರೆಯನ್ನಲ್ಲ; ಆದರ್ಶ ಸಂಸ್ಕೃತಿಯ ವೈಶಿಷ್ಟ್ಯವನ್ನಲ್ಲ. ಇವೆಲ್ಲವನ್ನು ನೀವು ಕೇಳಿ, ಓದಿ ಮುಗಿಸಿರಬಹುದಾದ ಮಾತು. ಕನ್ನಡ ದೇಶ ಕನ್ನಡ ಜನ ಈ ಹಿಂದೆ ಬಾಳಿದಂತೆ ಇನ್ನು ಮುಂದೆಯೂ ಬಾಳಿ, ಬದುಕಿ ಬೆಳಗಬೇಕಾದರೆ ಅವರು ಮಾಡಬೇಕಾಗಿರುವ ಕಾರ್ಯದ ಅರಿವಾಗಬೇಕು. ಈ ಅರಿವು ಪ್ರತಿಯೊಬ್ಬನಲ್ಲಿ ಕರಿಗೊಂಡಷ್ಟು ಕಾರ್ಯರಂಗಕ್ಕಿಳಿದಷ್ಟು ಜನತೆಯ ಕಲ್ಯಾಣ, ದೇಶದ ಮುನ್ನಡೆ. ಅಂತೆಯೇ ನಮ್ಮ ಮುಂದಿರುವ ಕಾರ್ಯರಂಗವನ್ನು ಗುರುತಿಸಿ ಪ್ರಯತ್ನಶೀಲರಾಗಬೇಕಾಗಿದೆ.

ಕನ್ನಡದ ಸರ್ವತೋಮುಖ ವೃದ್ಧಿಗೆ ವಿವಿಧ ಸರಕಾರಗಳ ಆಡಳಿತೆಯ ಕೆಳಗೆ ಹರಿದು ಹಂಚಿಹೋದ ಕರ್ನಾಟಕವನ್ನು ಒಂದುಗೂಡಿಸುವುದು, ಅದಕ್ಕೊಂದು ವಿಶ್ವವಿದ್ಯಾನಿಲಯವನ್ನು ನಿರ್ಮಿಸುವುದು–ಇವೆರಡು ನಮ್ಮ ಮುಂದಿನ ಪ್ರಮುಖ ಪ್ರಶ್ನೆಗಳಾಗಿವೆ. ಇವು ಸಾಧ್ಯವಾಗದ ಹೊರತು ಯಾವ ಪ್ರಗತಿಯೂ ಶಕ್ಯವಿಲ್ಲ. ಈ ಬಗೆಗೆ ಹಲವಾರು ವರ್ಷಗಳಿಂದ ಪ್ರಯತ್ನಗಳು ನಡೆದಿವೆ. ಇಬ್ಬಗೆಯ ಅಭಿಪ್ರಾಯ ಈ ವಿಷಯದ ಮಟ್ಟಿಗೆ ಇಲ್ಲವೇ ಇಲ್ಲ; ಜನಜಾಗ್ರತೆಯೂ ವಿಶೇಷವಾಗಿ ಆಗಿದೆ; ಕನ್ನಡ ಕಂದನಿಗೂ ಗೊತ್ತು 'ಏಕೀಕರಣ–ವಿಶ್ವವಿದ್ಯಾನಿಲಯ'ಗಳು ನಾಡವರ ಕಾಮಧೇನು

ಕಲ್ಪವೃಕ್ಷಗಳೆಂಬುದು. ಆದರೆ ನಮ್ಮ ಈ ಕೂಗು, ಈ ಹಂಬಲ ಆಳುವವರ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಿಲ್ಲ. ಈ ಹೊಣೆಯನ್ನು ಹೊತ್ತು ಈಗಾಗಲೇ ಕಾರ್ಯಗೈಯುತ್ತಿರುವ ಸಂಘಸಂಸ್ಥೆಗಳೊಡನೆ ಸಹಕರಿಸಿ ಅದನ್ನು ನಿರ್ವಹಿಸುವಲ್ಲಿ ಪ್ರವೃತ್ತಿಶೀಲರಾಗುವುದೇ ನಮ್ಮ ನಿಮ್ಮ ಕರ್ತವ್ಯವಾಗಿದೆ.

ನಾಡಿನ ಸಂಪತ್ತು ಹೆಚ್ಚಾದಾಗಲೇ ನಾಡಿಗರ ಜೀವನ ಹಸನು. ಈಗಿನ ಯಂತ್ರ ಯುಗದಲ್ಲಿ ನಾನಾ ಬಗೆಯ ಔದ್ಯೋಗಿಕ ಯೋಜನೆಗಳನ್ನು ಕೈಕೊಳ್ಳುವುದು ವಿಹಿತವಾಗಿದೆ. ಕರ್ನಾಟಕದಲ್ಲಿ ಖನಿಜ ದ್ರವ್ಯವು ಬೇಕಾದಷ್ಟಿದೆ ಎಂದು ಬಲ್ಲವರು ಹೇಳುತ್ತಾರೆ. ಅದರ ಉಪಯೋಗವನ್ನು ಹೇರಳವಾಗಿ ಮಾಡಿಕೊಳ್ಳಬೇಕಾಗಿದೆ. ಕಾಜು, ಕಾಗದ ಕಾರ್ಖಾನೆಗಳನ್ನು ನಿರ್ಮಿಸಬಹುದಾಗಿದೆ. ಶೀಘ್ರ ಪ್ರಚಾರ ಸಾಧನವಾದ ಬಾನುಲಿಯ ಪ್ರಯೋಜನ ಪ್ರತಿಯೊಂದು ಹಳ್ಳಿಗೂ ಪ್ರತಿಯೊಬ್ಬ ನಾಗರಿಕನಿಗೂ ದೊರೆಯುವ ಸೌಲಭ್ಯ ಮಾಡಿಕೊಡಬೇಕಾಗಿದೆ. ಚಲಚ್ಚಿತ್ರ ವ್ಯವಸಾಯ, ವಿದ್ಯುಚ್ಛಕ್ತಿಯ ಉತ್ಪಾದನೆ, ಸಣ್ಣ ಪುಟ್ಟ ಕೈಗಾರಿಕೆ ಮೊದಲಾದವುಗಳ ಕಡೆಗೆ ಹೆಚ್ಚು ಲಕ್ಷ್ಯ ಪೂರೈಸಬೇಕಾಗಿದೆ. ಇವುಗಳಲ್ಲಿಯೇ ಸಂಪತ್ತಿದೆ. ಉನ್ನತ ಭವಿತವ್ಯವಿದೆ. ಇವನ್ನು ವಶಪಡಿಸಿಕೊಂಡು ದೇಶದ ಆರ್ಥಿಕ ಸ್ಥಿತಿಯನ್ನು ಸಮಾಧಾನಕರವಾಗಿ ಮಾರ್ಪಡಿಸಲು ಮುಂದುವರಿಯ ಬೇಕು. ವ್ಯವಸಾಯ, ಕೈಗಾರಿಕೆ, ವ್ಯಾಪಾರ, ಉದ್ಯೋಗಗಳ ಸೌಕರ್ಯಕ್ಕಾಗಿ ಒಂದು ಸ್ವತಂತ್ರ ಹಡಗು–ನಿಲ್ದಾಣ (ಬಂದರ)ದ ಅವಶ್ಯಕತೆಯನ್ನು ಕುರಿತು ಬೇರೆ ಹೇಳಬೇಕಾಗಿಲ್ಲ. ಈ ವಿಪುಲ ಕಾರ್ಯದ ವಿಶಾಲ ಅರಿವು ನಿಮ್ಮಲ್ಲಿ ಅಂಗವಿಸಿ ಮುಂದೆ ಅಡಿ ಇಡಿಸಲೆಂಬುದೇ ನನ್ನ ಬಯಕೆ.

ವಿಶ್ವವಿದ್ಯಾಲಯದ ಪದವಿಯನ್ನು ಪಡೆದು ಜೀವನದ ಹೊಸ್ತಿಲಲ್ಲಿ ಕಾಲಿಡುವ ಆಶಾವಾದಿಗಳಾದ ನಿಮ್ಮನ್ನು ಹಾಡಿ ಹರಸುವುದರ ಬದಲು ಕೂಡಿ–ಕೆಲಸ ಮಾಡಿರೆಂದು ಕೇಳುವುದು ಇಂದು ನಿಮಗೆ ಕಹಿಯಾಗಿ ತೋರಬಹುದು. 'ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿ'ಯಾದೀತು. ಭಾವೀ ನಾಡಿನ ಬಾಳುವೆಗೆ, ಅದರ ಪೀಳಿಗೆಯ ಮುನ್ನಡೆಗೆ, ಅದೊಂದು ಅಮೃತ ಬಟ್ಟಲಾದೀತು; ಚಿರಂತನ ಚಿಂತಾಮಣಿಯಾಗಿ ಫಲಿಸೀತು; ಈ ಆಶೆ ಆಕಾಂಕ್ಷೆಗಳ ಮುನ್ನೋಟದಿಂದ ಮುಂದುವರಿಯಿರಿ.

ದೈವವನ್ನು ಹಳಿದು ಮೂಲೆಗೊರಗುವ ಮೂಳನಿಗಲ್ಲ ಇಂದಿನ ಜಗತ್ತು. ಸಾಹಸದಿಂದ ಮುನ್ನುಗ್ಗಿ ಕಾರ್ಯಮಾಡುವ ಕರ್ಮಶೀಲನಿಗೆ ಮೀಸಲು ಅದು. ಕಾರಣ ನೀವು ಕೈಕೊಳ್ಳಬಹುದಾದ ಜೀವನದ ಪ್ರತಿಯೊಂದು ಹೋರೆಯಲ್ಲಿ ಅಖಿಲ ಕನ್ನಡದ ದೃಷ್ಟಿಯಿರಲಿ; ವಿಚಾರದ ವಿಮರ್ಶೆ ಇರಲಿ; ಸ್ವಾತಂತ್ರ್ಯದ ಉಸಿರಿರಲಿ; ವಿಶ್ವಮಾನವನ ಹೃದಯವಿರಲಿ. ಹೆತ್ತಮ್ಮನ ಮುಡಿಗೆ ಹೂ ತರುವ ಭಾಗ್ಯ, ಅವಳ ತುಂಬು ಸೊಬಗನ್ನು ಸವಿವ ಸ್ಥೈರ್ಯ ನಿಮ್ಮನ್ನು ಕೂಡಿದೆ.

ಇದಕ್ಕಾಗಿ ಆ ಮಹಾದೇವನ ಮಂಗಲಮಯ ಅನುಗ್ರಹ ಒದಗಿಬರಲಿ.

□

## ಕಾಯಕಯೋಗಿ ಗುರುದೇವರಿಗೆ

**ಡಾ. ದೊಡ್ಡರಂಗೇಗೌಡ**

**ಜ**ನಮನದ ದಿವ್ಯಾಂಬರದಲಿ....
ಹೊಳೆ ಹೊಳೆದು ಬೆಳಗುವ
ಬೆಳ ಬೆಳಗಿ ನಲಿಯುವ
ಶ್ರೀಗುರು ಶಿವರಾತ್ರಿ ರಾಜೇಂದ್ರ ಗುರುದೇವ
ಶರಣು ಶರಣು ಶರಣೆಂದಿದೆ ಈ ಜೀವಭಾವ ! ॥ ಪ ॥

ನಿಮ್ಮ ದಿವ್ಯ ತನುವಿಗೆ ನಿರ್ಮೋಹ ಸುಸ್ವಭಾವ
ಮನದಾಳವು ನಿರಹಂಕಾರ ನಲ್ಮೆ ಪ್ರಣವ;
ಪವಿತ್ರ ಪ್ರಾಣವು ನಿರ್ಭಯದ ತೇಜ ಸೌಷ್ಠವ
ದೃಢ ಚಿತ್ತವು ನಿರಪೇಕ್ಷೆ ಸೌಮ್ಯ ವಾಸ್ತವ! ॥ 1 ॥

ಪ್ರೀತಿಯ ಶಿವರಾತ್ರಿ ರಾಜೇಂದ್ರ ಗುರುದೇವ
ಶರಣು ಶರಣು ಶರಣೆಂದಿದೆ ಈ ಜೀವಭಾವ ॥ ಪ ॥

ವಿಷಯ ಸುಖಗಳ ಕಡೆಗಣಿಸಿದ ಆಧ್ಯಾತ್ಮ ಪಲ್ಲವ
ಕಣ್ತುಂಬ ಮನತುಂಬ ಹೃದಯತುಂಬ ಪರಶಿವ!
ಸುತ್ತೂರಲಿ ನೆಲೆಗೊಂಡ ಶ್ರೀ ರಾಜೇಂದ್ರ ಗುರುವ
ಸ್ಮರಿಸಲು ನಾವು ನೀವು ದೊರೆವುದು ಅನುಭಾವ !!

* * *

ಅನುಜಮ ಜ್ಞಾನದೇಗುಲ ನಿರ್ಮಿಸಿದ ಪೂಜ್ಯಭಾವ
ಅಕ್ಷರದಾಸೋಹದ ದೇಸಿಮೂಲದ ಮಹಾನುಭಾವ
ನಿಮಗಿದೋ ಅಭಿವಂದನೆ ಶಿವಯೋಗಿ ಗುರುದೇವ
ಅರ್ಪಿಸಿರುವೆ ನಾನಿಂದು ನಿಮಗೆ ನನ್ನ ಕಾವ್ಯಗೌರವ.

□

## ಸುತ್ತೂರು ಹೊಳೆದಂಡಿ ಸುತ್ತುಮಲ್ಲಿಗಿ ದಂಡಿ!

**ಪ್ರೊ. ಜಿ.ಎಚ್. ಹನ್ನೆರಡುಮಠ**

ಲಕ್ಷ ಕೋಟಿಯ ಪಕ್ಷಿ ಸುತ್ತೂರು ನಗೆಬಂಡಿ
ವೀರಭದ್ರನ ಚಂದ ಚಲುವ ಕಂಡೆ
ಮಾವು ಮಲ್ಲಿಗೆ ಕಂಡೆ ಜೇನು ಬಾಳೆಯ ಉಂಡೆ
ಸುತ್ತೂರು ರುದ್ರಾಕ್ಷಿ ಸುತ್ತಿ ಬಂದೆ

ಪಾತಾಳ ಗವಿಯಲ್ಲಿ ಪ್ರಾಚೀನ ತಳದಲ್ಲಿ
ಯಾತಾಳ ಶ್ರೀರುದ್ರ ಎದ್ದು ಬಂದ
ಸುತ್ತೂರು ಹೊಳೆದಂಡಿ ಸುತ್ತುಮಲ್ಲಿಗಿ ದಂಡಿ
ಕಡಲು ಕಾಡಿನ ಚಲುವು ಹೊತ್ತುತಂದ

ಢಮರು ಢಂಢಂ ಢಮಿಸಿ ಗೆಜ್ಜೆ ಝಿಂಝಿಂ ಕುಣಿಸಿ
ಅಂತರಾತ್ಮದ ಗಂಟೆ ಠಂಠಣಿಸಿದ
ಓಂಕಾರ ಸಾಕಾರ ನೆಲತುಂಬ ಝೇಂಕಾರ
ಜಗತುಂಬ ಯುಗತುಂಬ ಝುಂಝುಣಿಸಿದ

ಹತ್ತು ದಿಕ್ಕಿಗೆ ಹೋಗಿ ಕಾಲ ಕಾಲ್ಪಕೆ ಕೂಗಿ
ಬಾರಯ್ಯ ಓ ರುದ್ರ ಶರಣು ಶರಣೊ
ಕಡಲು ನಿನ್ನಯ ಪಾದ ಸೂರ್ಯ ಚಂದ್ರರೆ ಪುಷ್ಪ
ನಕ್ಷತ್ರ ಹೂಮಾಲೆ ನೂರು ಶರಣೊ
ಸುತ್ತೂರು ಶ್ರೀಮಠಕೆ ಕೋಟಿ ಶರಣೊ.... ಕೋಟಿ ಶರಣೊ.... ಕೋಟಿ ಶರಣೊ....

□

# ಸುತ್ತೂರ ವೀರಸನ್ಯಾಸಿ

ಡಾ. ಕೆ. ಲೀಲಾ ಪ್ರಕಾಶ್

**ಸು**ತ್ತೂರು ಸಂಸ್ಥಾನದ ವೀರ ಸಂನ್ಯಾಸಿ ನೀವು
ಕಲೆ, ಸಾಹಿತ್ಯ, ವೈದ್ಯಕೀಯವ ಶೃಂಗಕ್ಕೇರಿಸಿದಿರಿ ತಾವು ॥ 1 ॥

ಕಾಷಾಯ ವಸ್ತ್ರವ ಧರಿಸಿದರೂ ನೀವು
ಸಮಾಜೋದ್ಧಾರ ಕಾರ್ಯಕೆ ಶ್ರಮಿಸಿದಿರಿ ನೀವು ॥ 2 ॥

ಜಪಮಾಲೆಯ ಹಿಡಿಯುತ ಕೇವಲ ಗುಣಿಗುಣಿಸದೆ
ತಪವ ಮಾಡಿದಿರಿ ದಿನ ದಲಿತರೆಂದು ಎಣಿಸದೆ ॥ 3 ॥

ಶಾಲಾ ಕಾಲೇಜುಗಳಿರಲಿ, ವೈದ್ಯಕೀಯ ಆಧ್ಯಾತ್ಮ ಪೀಠಗಳಿರಲಿ
ಸಂಗೀತ ಸಾಹಿತ್ಯ ಗೋಷ್ಠಿಯಿರಲಿ ನಾವೀನ್ಯತೆ ಇಹುದು ಆ ಸಭೆಯಲಿ ॥ 4 ॥

ರಾಜರು ಅಂದೆಂದೊ ಸಮಾಜಮುಖಿ ಕಾರ್ಯಕ್ರಮಗಳ ಮಾಡುತ್ತಿದ್ದರು
ರಾಜಗುರುಗಳಾಗಿ ತೋರುತಿಹಿರಿ ಮಹೋನ್ನತಿಯ ತಾವು ॥ 5 ॥

ರಾಷ್ಟ್ರಪತಿ, ಪ್ರಧಾನಮಂತ್ರಿ ಯಾರೇ ಬರಲಿ ಮೈಸೂರಲಿ
ಸರ್ವರೂ ತಮ್ಮ ಆಶೀರ್ವಾದ ಶ್ರೀರಕ್ಷೆಗಾಗಿ ಹಂಬಲಿಸುವರಿಲ್ಲಿ ॥ 6 ॥

ವೈದ್ಯಕೀಯ, ಅಭಿಯಂತೆ, ನರ್ಸಿಂಗ್ ಎಲ್ಲ ಕ್ಷೇತ್ರಗಳಲು ಇಹವು ವಿದ್ಯಾಲಯ
ಇದೀಗ ಜೆಎಸ್‌ಎಸ್ ಸಂಸ್ಥೆಯಲ್ಲಿ ತಲೆ ಎತ್ತಿ ನಿಲ್ಲುತ್ತಿದೆ ವಿಶ್ವವಿದ್ಯಾಲಯ ॥ 7 ॥

ಕಲಾ, ವಿಜ್ಞಾನ, ಕೃಷಿ, ವಾಣಿಜ್ಯೋದ್ಯಮ ಎಲ್ಲದರಲು ಮುನ್ನಡೆದಿದೆ ಈ ಸಂಸ್ಥೆ
ಇದೀಗ ವಿದೇಶದಲೂ ಆಧ್ಯಾತ್ಮದಿಂದ ಹೆಸರು ಮಾಡುತಿದೆ ಜೆಎಸ್‌ಎಸ್ ವಿದ್ಯಾಸಂಸ್ಥೆ
॥ 8 ॥

ಅಮೆರಿಕ, ದುಬೈ ಮಾರಿಷಸ್‌ಗೆ ಅನೇಕ ವಿದೇಶಗಳಲಿ ಕೈಚಾಚಿಹುದು
ಸುಮಧುರ ಬಾಂಧವ್ಯಕೆ ಈ ಸಂಸ್ಥೆಯ ಹೃದಯ ವಿಶಾಲವಾದುದು ॥ 9 ॥

ಕೇವಲ ಅಧ್ಯಾತ್ಮಗುರುವಾಗಿ ಮೆರೆಯಲಿಲ್ಲ ಮಹೋನ್ನತಿಯ
ಸಾಮಾಜಿಕ ಕಳಕಳಿಯಲ್ಲಿ ತೋರಿದಿರಿ ಪರಮೋನ್ನತಿಯ ॥ 10 ॥

ನಿಮ್ಮ ಸಂಸ್ಥೆಯಲ್ಲಿ ದುಡಿಯುತಿಹರು ಸಕಲವರ್ಗದ ಜನರು ಇಂದು
ಬಸವಣ್ಣ ಅಂದು ನುಡಿದುದ ಕಾರ್ಯರೂಪದಲಿ ಮಾಡತಿಹಿರಿ ಇಂದು ॥ 11 ॥

ನೂರಾರು ಪ್ರತಿಷ್ಠಿತ ಸಂಸ್ಥೆಗಳ ಸಮರ್ಥ ಪೀಠಾಧ್ಯಕ್ಷರಾಗಿ
ಮೆಲುಮಾತು ಮೃದುಮಂದಹಾಸದಿ ಎಲ್ಲರ ಮನಗೆದ್ದವರಾಗಿ ॥ 12 ॥

ಸುತ್ತೂರು ಖ್ಯಾತಿಯನು ಸುತ್ತಲೂ ದೇಶದಿ ಹರಡಿ
ಮತ್ತದೇ ಉತ್ಸಾಹದಿ ಹೊಸ ಹೊಸ ಪ್ರಯೋಗಗಳ ಮಾಡಿ
ಸ್ತ್ರೀಸ್ವಾವಲಂಬನೆಗೂ ಮತ್ತು ಅವಕಾಶವ ನೀಡಿ
ಅಬಲ ಅನಾಥ ಸ್ತ್ರೀಯರಿಗೂ ಆಲಯವ ಮಾಡಿ ॥ 13 ॥

ದೇಶ ವಿದೇಶದಿ ಹಬ್ಬಿದೆ ನಿಮ್ಮ ಶ್ವೇತ ಕೀರ್ತಿ
ಆ ಅಲ್ಲಮನಂತೆ ತಾವು ವಿನಯದ ಸರ್ವಜ್ಞಮೂರ್ತಿ ॥ 14 ॥

□

# ಮಹೋದಧಿ

**ಡಾ. ಎನ್. ಎಂ. ಗಿರಿಜಾಪತಿ**

ದಿವ್ಯ ತೇಜೋಪುಂಜ ಶಿವಲೊಕ ಕೆ
ಣೆಯಾಯ್ತು ಭರತಖಂಡಕೆ ಧನ್ಯತೆ
ಯ ಬೆಳಕಿತ್ತು ಸೌಗಂಧ ಕಾಷ್ಠದೊ
ಳು ಹೊಮ್ಮೊ ಪರಿಮಳ ತೆರದಿ ತನ್ನನೆ
ತಾ ಸವೆಸಿ

ದ್ಯಾವಾಪೃಥಿವಿಯೊಳು ಲೀನವಾಯ್ತು
ಯುಗ-ಜುಗದ ಚೈತನ್ಯ ಸದ್ಧರ್ಮ ಧೀಶಕ್ತಿ
ಹಿಮಶೈಲ ಶೃಂಗಗಳಿಂದಿಳೆಗಿಳಿದ ಜಲಧಾರೆ
ಸ್ತುತಿಸುತಲಿರಲು ಮಗದೊಂದು ಸಾಗರದೊಳಿಳಿದು
ಮರೆಯಾಯ್ತು

ಕ್ರತುಶಕ್ತಿ ಶಿವಶಕ್ತಿಯಾಗೆ
ಐಕ್ಯ ಸ್ಥಲದಲಿ ನಿಜಾನಂದ ನಿರೂಪವಾಯ್ತು
ಈ ದೇಹ ತಾನಳಿದು ಆವಾತ್ಮ ಲೀನವಾಯ್ತು,
ಬದುಕಿ ಭಾವದೊಳಿದ್ದು ಅಳಿದು
ಮಹಾಬೆಳಕಾಯ್ತು

ಅರುಹು-ಕುರುಹಿನ ಹಾದಿ ಅನುಭಾವದಮೃತವಾಯ್ತು,
ಋತ
ಶ್ರೀ ಶಿವರಾತ್ರೀಶ್ವರ ರಾಜೇಂದ್ರಯೋಗಿವರ್ಯರಾಗಿ
ಜಗದ ಗುರುವಾಗಿ, ಯುಗದ ಜಂಗಮವಾಗಿ
ಮನುಕುಲದ ಕೂಡಲಸಂಗಮವಾಗಿ

ನಂಬಿಹುದು ಲೋಕ ಆತ್ಮ ಶಿವಾಂತರಾತ್ಮವೆಂದು,
ಅದರಿಂದೆ
ಅಶ್ರುಬಿಂದುಗಳು ಸಲ್ಲವು ಆಸ್ತಿಕತೆಗೆ ! ನಿಮ್ಮ ಶಿವತೇಜ
ಬೆಳಗುವುದು ಯುಗ–ಜುಗಾದಿಗಳ ಪರ್ಯಂತ
ಜ್ಞಾನ ಧಾತುವಾಗಿ,

ಮಹೋದಧಿಯ ಸೇತುವಾಗಿ
ಭಾಸ್ಕರನೆ ನೀನೇಳೇಳು
ಮಾರ್ತಾಂಡ ಮಂಡಲೋದಯದಿ ಜ್ಞಾನರಥವೇರಿ
ನಡೆವಂತೆ

ಅಜ್ಞಾನ ತಿಮಿರಾಂಧವ ಕಳೆಯೋ
ಮಂಗಳಾಕ್ಷರನಂತೆ ನವ ನವ್ಯ ಸೊಡರ ಸೊಗಸಿನಂತೆ
ಚೈತ್ರ ಚಿತ್ತಾರದಲಿ ದುಂಬಿಗಳುಲಿವಂತೆ
ಜಗದ ಜೀವಜಾಲದ ಕಲರವದಿ ಕಡಲ
ಒಡಲದು ಹಿಗ್ಗಿ

ಬುವಿ–ಬಾನ ಭಾಗ್ಯೋದಯದ ರಥವು
ಪೆರ್ಮೆಯಿಂದ ಪೆರ್ಚುವಂತೆ

□

## ಸುತ್ತೂರು ಸ್ಮರಣೆ

ಶಾಂತಮ್ಮ ಎಂ. ಕವಟಗಿಮಠ

**ನೋ**ಡು ಬಾ, ನೋಡು ಬಾ, ಅಂದದ ಸುತ್ತೂರು ।
ಮೈಸೂರು ತಾಯಿ ಚಾಮುಂಡೇಶ್ವರಿ ತವರೂರು ॥
ಸುತ್ತೂರು ಸುತ್ತಿಹಳು ಕಪಿಲೆ ಕಾವೇರಿ ಜೊತೆಗೂಡಿ ।
ಹರಿಯುತಿಹಳು ಪಶ್ಚಿಮವಾಹಿನಿ ಸ್ಫಟಿಕಾ ॥ 1 ॥

ಸೃಷ್ಟಿ ಸಂವರ್ಧನೆಯ ಸೌಂದರ್ಯದ ನೆಲೆಬೀಡು ಸುತ್ತೂರು ।
ಸೃಷ್ಟಿಸಿಹನು ಶಿವನಿಲ್ಲಿ ದೃಷ್ಟಿಗೆ ಅಪ್ಯಾಯಮಾನ ॥
ನೆರೆದಿಹುದಿಲ್ಲಿ ಪಕ್ಷಿಸಂಕುಲದ ಸಂಗಮದ ವಸುಂಧರೆ ।
ಅರಿವಿನಾ ಗುರುಮನೆ, ಭಕ್ತಿ ಜ್ಞಾನ ವೈರಾಗ್ಯದ ಸಾಗರಾ ॥ 2 ॥

ಶ್ರೀ ಜಗದ್ಗುರು ಶಿವರಾತ್ರೀಶ್ವರರು ಶಿವ – ಜೀವರ ಸಮ್ಮಿಲನ ।
ಪುಷ್ಕರಣಿಯ ಸಂಭ್ರಮಾ ಅನುಪಮ ಧಾರೆಯ ಅಮೃತಾ ॥
ಇವ ನಮ್ಮವ ಇವ ನಮ್ಮವನೆಂದ ವಿಶ್ವಕುಟುಂಬಿಗಳು ಶಿವರಾತ್ರೀಶ್ವರರು ।
ಬದುಕಿದರೆ ಬದುಕಿಲ್ಲಿ ಜೀವನ ಸಾರ್ಥಕತೆಯ ಬೀಡು ॥ 3 ॥

□

# ತ್ರಿವಿಧ ದಾಸೋಹಿ

**ಸಂಗೀತ ಶಾಂಭವೀ (ಮುತ್ತುಲಕ್ಷ್ಮಿ ರಾಮಚಂದ್ರ)**

**ಗು**ರುವೇ..... ಶಿವನೇ... ಶರಣು.... ಎಂದೇ....
ಕರುಣೆಯೇ..... ನಿನ್ನ ಉತ್ತರ.... ತಿಳಿಯಲೇ ಇಲ್ಲವೋ ॥ ಗುರುವೇ...॥

ವಿದ್ಯಾನಿಧಿಯಾಗಿ ನೀ ಬಂದೆ ಗುರುವೇ
ಸಂಗೀತವಾಗಿ..... ಹೊರ ಹೊಮ್ಮಿ ನಿಂದೇ...
ನಿನ್ನ ಸವಿ ನುಡಿಯು ಮಂತ್ರವಾಗಿರುವುದು....
ನನ್ನ ಮನದಲ್ಲಿ.... ನಿಮ್ಮ ಜಪ ತಂದೆ... ॥ ಗುರುವೇ....॥

ಜಗದ್ಗುರುವಾಗಿ.... ನೀ ಬಂದೆ ತಂದೆ....
ಶರಣೆಂದವಗೇ.... ಮಾತೃವಾಗಿ ನಿಂದೇ....
ನಿನ್ನ ಮಾತೃಹೃದಯ.... ವಾತ್ಸಲ್ಯ ಕರುಣೆ....
ನನಗೆ ಏಕೋ ತಿಳಿಯಲೇ ಇಲ್ಲ.... ॥ ಗುರುವೇ...॥

ವಿದ್ಯೆಯ ಹಸಿವು ನನ್ನ ಕಾಡಿಹುದು...
ನಿನ್ನ ಮಡಿಲಿನಲ್ಲಿ ಶಿಶುವಾದೆ ತಂದೇ...
ತ್ರಿವಿಧ ದಾಸೋಹಿ ನೀನಾದೆ ಗುರುವೇ.....
ಅಂಬರದಲ್ಲಿ.... ಚಂದಿರನಾದೇ.... ॥ ಗುರುವೇ...॥

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಅನೇಕ ರೋಗಗಳಿಗೆ ಆಯುರ್ವೇದದಲ್ಲಿಯೂ ಪರಿಣಾಮಕಾರಿ ಔಷಧಿಗಳಿವೆ**

ಕೋವಿಡ್ ಸೇರಿದಂತೆ ಹಲವಾರು ರೋಗಗಳಿಗೆ ಆಯುರ್ವೇದದಲ್ಲಿಯೂ ಸಹ ಪರಿಣಾಮಕಾರಿ ಔಷಧಿಗಳಿವೆ ಎಂದು ಮಾಜಿ ಮುಖ್ಯಮಂತ್ರಿಗಳು ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಜುಲೈ 1ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಸಿದ್ಧಪಡಿಸಲಾಗಿರುವ "ಹಿತಾಯು" ಪೋಸ್ಟ್ ಕೋವಿಡ್ ರೆಜುವಿನೇಶನ್ ಕಿಟ್ ಮತ್ತು "ಬಾಲರಸಾಯನ" ಇಮ್ಯೂನೊ ಕಿಡ್ಸ್ ಕಿಟ್‌ಗಳನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಿ ಮಾತನಾಡುತ್ತಾ ತಿಳಿಸಿದರು.

ಕೋವಿಡ್‌ನಿಂದ ಗುಣಮುಖರಾದ ಮೇಲೂ ಕೆಲವು ಆರೋಗ್ಯ ಸಮಸ್ಯೆಗಳು ಎದುರುಗಾಗುತ್ತವೆ. ನಾನು ಸಹ ಕೋವಿಡ್ ಸೋಂಕಿತನಾಗಿದ್ದೆ, ಗುಣಮುಖನಾದ ನಂತರ ಯೋಗಾಸನ ಮತ್ತು ವ್ಯಾಯಾಮಗಳನ್ನು ಮಾಡುತ್ತಿದ್ದೇನೆ. ಎಲ್ಲರೂ ಲಸಿಕೆಯನ್ನು ಪಡೆದುಕೊಳ್ಳಬೇಕು. ಲಸಿಕೆ ತೆಗೆದುಕೊಳ್ಳುವುದರಿಂದ ಯಾವುದೇ ತೊಂದರೆಗಳಾವುದಿಲ್ಲ. ಈ ರೋಗವನ್ನು ನಿರ್ಮೂಲನೆ ಮಾಡಲು ಲಸಿಕೆ ಒಂದೇ ಮದ್ದು. ಪ್ರಧಾನ ಮಂತ್ರಿಗಳೂ ತೆಗೆದುಕೊಂಡಿದ್ದಾರೆ. ಸ್ವಾಮೀಜಿಯವರು ಹಾಗೂ ನಾವೆಲ್ಲರೂ ತೆಗೆದುಕೊಂಡಿದ್ದೇವೆ. ಲಸಿಕೆ ಬಗೆಗೆ ತಪ್ಪು ಕಲ್ಪನೆಗಳನ್ನು ಬೆಳೆಸಿಕೊಳ್ಳಬಾರದು. ಆಯುರ್ವೇದದ ಔಷಧಗಳೂ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ತಜ್ಞರು ಹೇಳುವಂತೆ ಮೂರನೇ ಅಲೆ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರಬಹುದು ಎನ್ನಲಾಗುತ್ತಿದೆ. ಹಾಗಾಗಿ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಜೆಎಸ್‌ಎಸ್ ಆಯುರ್ವೇದ ಕಾಲೇಜು ಇಮ್ಯೂನೋ ಕಿಡ್ಸ್ ಕಿಟ್‌ಗಳನ್ನು ಸಿದ್ಧಪಡಿಸಿ ರಿಯಾಯಿತಿ ದರದಲ್ಲಿ ನೀಡುತ್ತಿರುವುದು ಅತ್ಯುತ್ತಮ ಕೆಲಸವಾಗಿದೆ. ಸುತ್ತೂರು ಶ್ರೀಗಳು ಅನುಪಮ ಸೇವೆ ಸಲ್ಲಿಸುತ್ತಿದ್ದು, ಸಾರ್ವಜನಿಕರು ಅದರ ಸದುಪಯೋಗ ಪಡೆದುಕೊಳ್ಳಬೇಕು. ಈಗ ಸದ್ಯ 18 ವರ್ಷ ಮೇಲ್ಪಟ್ಟವರಿಗೆ ಮಾತ್ರ ಲಸಿಕೆ ಲಭ್ಯವಿರುವುದರಿಂದ 18 ವರ್ಷದೊಳಗಿನನವರಿಗೆ ಈ ಕಿಡ್ಸ್ ಕಿಟ್ ಹೆಚ್ಚು ಉಪಯುಕ್ತವಾಗಲಿದೆ. ಲಸಿಕೆ

ತೆಗೆದುಕೊಂಡರೆ ಶೇ 80ರಷ್ಟು ಈ ರೋಗ ಬರುವುದಿಲ್ಲ, ಬಂದರೂ ಸಹ ಅಂತಹ ವ್ಯಾಪಕವಾದ ಪರಿಣಾಮವನ್ನು ಬೀರುವುದಿಲ್ಲ. ಸರ್ಕಾರ 12 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡಲು ಚಿಂತಿಸಬೇಕು. ಲಸಿಕೆ ತೆಗೆದುಕೊಂಡ ನಂತರವೂ ಮಾಸ್ಕ್ ಬಳಕೆ ಮತ್ತು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕು. ಕೋವಿಡ್ ಪರೀಕ್ಷೆಗಳನ್ನು ಹೆಚ್ಚಿಸಬೇಕು ಎಂದರು. ವೈದ್ಯರು ಮತ್ತು ಪತ್ರಿಕಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸುತ್ತಾ ವೈದ್ಯರು, ದಾದಿಯರು, ಆಶಾ ಕಾರ್ಯಕರ್ತೆಯರು, ಪೊಲೀಸರು ಹಾಗೂ ಪತ್ರಕರ್ತರು ಜೀವದ ಹಂಗು ತೊರೆದು ಕೋವಿಡ್ ವಿರುದ್ಧದ ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ ಅವರನ್ನು ಎಲ್ಲರೂ ಗೌರವಿಸಬೇಕು ಎಂದು ತಿಳಿಸಿದರು.

ಶಾಸಕರುಗಳಾದ ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಅನಿಲ್ ಚಿಕ್ಕಮಾದು, ಶ್ರೀ ಆರ್. ಧರ್ಮಸೇನ, ಡಾ. ಪುಷ್ಪ ಅಮರನಾಥ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್.ಪಿ. ಮಂಜುನಾಥ್ ಹಾಗೂ ಅನೇಕ ಗಣ್ಯರು, ಜೆಎಸ್ಎಸ್ ಆಯುರ್ವೇದ ಕಾಲೇಜು – ಆಸ್ಪತ್ರೆಯ ವೈದ್ಯರುಗಳು ಹಾಗೂ ಸಿಬ್ಬಂದಿ ಮೊದಲಾದವರು ಉಪಸ್ಥಿತರಿದ್ದರು. ವೈದ್ಯಕೀಯ ಶಿಕ್ಷಣ ವಿಭಾಗದ ಶ್ರೀ ಆರ್. ಮಹೇಶ್ ಸ್ವಾಗತಿಸಿದರು. ಪ್ರಾಂಶುಪಾಲರಾದ ಡಾ. ಸರ್ಬೇಶ್ವರ್‌ಕರ್ ಹಾಗೂ ಡಾ. ಶಿವಪ್ರಸಾದ್ ಹುಡೇದ್‌ರವರುಗಳು ಔಷಧಿ ಕಿಟ್‌ಗಳ ಕುರಿತು ಮಾಹಿತಿ ನೀಡಿದರು.

**ಮೈಸೂರು ನಾಗರಿಕ ವೇದಿಕೆಯ ಕಾರ್ಯಗಳು ಪ್ರಶಂಸನೀಯವಾಗಿವೆ**

ಮೈಸೂರು ನಾಗರಿಕ ವೇದಿಕೆ ಸಂಕಷ್ಟದ ಸಂದರ್ಭಗಳಲ್ಲಿ ಮಾಡಿರುವ ಕಾರ್ಯಗಳು ಪ್ರಶಂಸನೀಯವಾದಂತಹವು ಎಂದು ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಹೇಳಿದರು.

ಜುಲೈ 5ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಮೈಸೂರು ನಾಗರಿಕ ವೇದಿಕೆಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಕೋವಿಡ್‌ನಿಂದ ತೊಂದರೆಗೀಡಾಗಿರುವ ಕಲಾವಿದರು, ದಿನಗೂಲಿ ನೌಕರರು, ಪತ್ರಿಕಾ ವಿತರಕರುಗಳಿಗೆ ಸಾಂಕೇತಿಕವಾಗಿ ಆಹಾರದ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು. ಸುತ್ತೂರು ಮಠ ಹಾಗೂ ಮೈಸೂರು ನಾಗರಿಕ ವೇದಿಕೆಗಳು ಕೋವಿಡ್ ಸಂದರ್ಭದಲ್ಲಿ ಸರ್ಕಾರಕ್ಕೆ ಸಾಕಷ್ಟು ನೆರವು ನೀಡಿವೆ. ಸಾರ್ವಜನಿಕರ ಸಂಕಷ್ಟಕ್ಕೆ ಸ್ಪಂದಿಸಿವೆ. ಕಳೆದ ವರ್ಷವೂ ಸಹ ತೊಂದರೆಯಲ್ಲಿರುವವರಿಗೆ ಆಹಾರದ ಕಿಟ್‌ಗಳನ್ನು ವಿತರಿಸಲಾಗಿತ್ತು. ಇತ್ತೀಚೆಗೆ ಹೋಂ ಐಸೋಲೇಷನ್‌ನಲ್ಲಿರುವವರಿಗೆ ಸಹಾಯವಾಗಲೆಂದು ನಗರಪಾಲಿಕೆಗೆ ಔಷಧಿಯ ಕಿಟ್‌ಗಳನ್ನು ನೀಡಿದ ಕಾರ್ಯ ಶ್ಲಾಘನೀಯವಾದುದು. ಸುತ್ತೂರು ಶ್ರೀಗಳ ಮಾರ್ಗದರ್ಶನದಲ್ಲಿ ಈ ಎಲ್ಲ ಕಾರ್ಯಗಳು ನಿರಂತರವಾಗಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಸಂಸದರಾದ ಶ್ರೀ ಪ್ರತಾಪ್ ಸಿಂಹರವರು ಸುತ್ತೂರು ಶ್ರೀಗಳು ಎಲ್ಲ ಕ್ಷೇತ್ರಗಳಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕೋವಿಡ್ ಎದುರಿಸಲು ನಮಗೆಲ್ಲ ಅವರು ಸಾಕಷ್ಟು ಸಹಾಯಹಸ್ತ ಚಾಚಿದ್ದಾರೆ. ಆರೋಗ್ಯ ಕ್ಷೇತ್ರದಲ್ಲೂ ಅವರು ಕೈಗೊಂಡ ಕಾರ್ಯಗಳು ಮಾದರಿಯಾದಂತಹವು ಇದರಿಂದ ಜನರಿಗೆ ಸಾಕಷ್ಟು ಉಪಕಾರವಾಗಿದೆ ಎಂದು ಹೇಳಿದರು.

ಮೈಸೂರು ನಾಗರಿಕ ವೇದಿಕೆಯ ಕಾರ್ಯದರ್ಶಿಗಳಾದ ಶ್ರೀ ಆರ್. ವಾಸುದೇವ್ ಭಟ್‌ರವರು ಸ್ವಾಗತಿಸಿದರು. ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷರಾದ ಶ್ರೀ ಫಣೀಶ್, ಮೃಗಾಲಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಲ್.ಆರ್. ಮಹದೇವಸ್ವಾಮಿ, ಮಾಜಿ ಶಾಸಕರಾದ ಶ್ರೀಮತಿ ಸುನೀತಾ ವೀರಪ್ಪಗೌಡ ಹಾಗೂ ಶ್ರೀ ಟಿ.ಎಸ್. ಶ್ರೀವತ್ಸ ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಆರ್. ಮಹೇಶ್ ಮೊದಲಾದವರು ಉಪಸ್ಥಿತರಿದ್ದರು.

**ಶ್ರೀ ವಾಸುದೇವಮೂರ್ತಿಯವರದು ಸಜ್ಜನ ಸಾತ್ವಿಕ ವ್ಯಕ್ತಿತ್ವ**

ಶ್ರೀ ವಾಸುದೇವಮೂರ್ತಿಯವರದು ಸಜ್ಜನ ಮತ್ತು ಎಲ್ಲರನ್ನೂ ಗೌರವಿಸುವ ಸಾತ್ವಿಕ ವ್ಯಕ್ತಿತ್ವವನ್ನು ಹೊಂದಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಜುಲೈ 14ರಂದು ಮೈಸೂರಿನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಎಸ್‌ಪಿವಿಜಿಎಂಸಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮಹಾಜನ ವಿದ್ಯಾಸಂಸ್ಥೆಯ ಟ್ರಸ್ಟಿ ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಆರ್. ವಾಸುದೇವಮೂರ್ತಿಯವರ ಶ್ರದ್ಧಾಂಜಲಿ ಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಾ ಅವರೊಬ್ಬ ಶ್ರೇಷ್ಠ ಶಿಕ್ಷಣ ತಜ್ಞರು, ಕಲಾಪ್ರೇಮಿಗಳು ಆಗಿದ್ದರು. ಮೈಸೂರಿನಲ್ಲಿ ಯಾವುದೇ ಒಂದು ಒಳ್ಳೆಯ ಕೆಲಸ–ಕಾರ್ಯಗಳು ನಡೆಯುತ್ತಿದ್ದರೆ ಅದರ ಹಿಂದೆ ವಾಸುದೇವಮೂರ್ತಿಯವರು ಇರುತ್ತಿದ್ದರು. ಸಂಗೀತ ಪ್ರೇಮಿಗಳಾಗಿದ್ದ ಅವರು ಎಲ್ಲ ಕಲೆಗಳಿಗೂ ಪ್ರೋತ್ಸಾಹ ನೀಡುತ್ತಿದ್ದರು ಎಂದು ಹೇಳಿದರು.

ಮಾಜಿ ಶಾಸಕರಾದ ಶ್ರೀ ವಾಸು, ಶ್ರೀ ವಾಸುದೇವಮೂರ್ತಿಯವರ ಪುತ್ರಿ ಶ್ರೀಮತಿ ವಿಜಯಲಕ್ಷ್ಮಿ ಹಾಗೂ ಶ್ರೀ ಅಮೋಘ ನಾಗರಾಜ್, ಶ್ರೀ ಪಿ ವಿಶ್ವನಾಥ್, ಶ್ರೀ ಗುಂಡಪ್ಪ ಗೌಡ, ಶ್ರೀ ಇಮಾಮ್ ಶಾ, ಶ್ರೀ ಪ್ರಸಾದ್, ಶ್ರೀ ಪ್ರಶಾಂತ್‌ಗೌಡರವರುಗಳು ವಾಸುದೇವ ಮೂರ್ತಿಯವರೊಂದಿಗಿನ ಒಡನಾಟವನ್ನು ಸ್ಮರಿಸಿದರು. ವಾಸುದೇವ ಮೂರ್ತಿಯವರ ಅಳಿಯ ಶ್ರೀ ಮುರುಳಿಧರ್ ಭಾಗವತ್ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.

**ರೋಗಿಗಳಿಗೆ ಪುನರ್ಜನ್ಮ ನೀಡುವವರು ವೈದ್ಯರು**

ರೋಗಿಗಳಿಗೆ ಪುನರ್ಜನ್ಮ ನೀಡುವವರು ವೈದ್ಯರು. ಕೋವಿಡ್ ರೋಗಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಾಗ ಅವರಿಗೆ ಚಿಕಿತ್ಸೆ ನೀಡಿ ಗುಣಮುಖರಾಗಲು ಅವರು ಸಾಕಷ್ಟು ಶ್ರಮಿಸುತ್ತಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಜುಲೈ 22ರಂದು ಮೈಸೂರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಭ್ರಮರ ಟ್ರಸ್ಟ್ ವತಿಯಿಂದ ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಕರ್ತವ್ಯ ನಿರ್ವಹಿಸಿದ ಆಸ್ಪತ್ರೆಯ ಆಡಳಿತ, ಪ್ರಯೋಗಾಲಯ, ಸ್ವಚ್ಛತಾ ಮತ್ತು ಭದ್ರತಾ ಸಿಬ್ಬಂದಿಗಳನ್ನು ಅಭಿನಂದಿಸುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಆಸ್ಪತ್ರೆಯ ಸಿಬ್ಬಂದಿಗಳು ಮತ್ತು ವೈದ್ಯರ ಸೇವೆ ಅಮೂಲ್ಯವಾದುದು. ವೈದ್ಯೋ ನಾರಾಯಣ ಹರಿ ಎಂಬಂತೆ ದೇವರ ಇನ್ನೊಂದು ರೂಪವೇ ವೈದ್ಯರು. ರೋಗಿಗಳ ಸಂಬಂಧಿಕರು ಮಠಕ್ಕೆ ಆಗಮಿಸಿ ಅಥವಾ ದೂರವಾಣಿ ಮುಖಾಂತರ ಮಾತನಾಡಿ ನಮ್ಮ ಕಡೆಯವರ ಆರೋಗ್ಯ ತುಂಬಾ ಚಿಂತಾಜನಕವಾಗಿದೆ, ಅವರನ್ನು ಉಳಿಸಿ ನನ್ನ ಮಕ್ಕಳನ್ನು ನೋಡಿಕೊಳ್ಳಲು ತಾಯಿ ಇಲ್ಲದಂತಾಗುತ್ತಾಳೆ ಎಂದು ಕೇಳಿದ್ದುಂಟು. ಆ ಸಂದರ್ಭದಲ್ಲಿ ನಾವು ಆಸ್ಪತ್ರೆಯನ್ನು ಸಂಪರ್ಕಿಸಿದಾಗ ಅವರ ಆರೋಗ್ಯ ಪರಿಸ್ಥಿತಿ ವಿಷಮ ಸ್ಥಿತಿಯಲ್ಲಿದ್ದು, ಬದುಕುವುದು ಕಷ್ಟ ಎಂದು ತಿಳಿಸಿದಂತಹ ರೋಗಿಗಳೂ ವೈದ್ಯರುಗಳು ನೀಡಿದ ಉತ್ತಮ ಚಿಕಿತ್ಸೆಯಿಂದ ಬದುಕುಳಿದಿರುವುದು ನಮ್ಮ ಕಣ್ಣ ಮುಂದೆಯೇ ಇದೆ. ಆಸ್ಪತ್ರೆಯ ಎಲ್ಲಾ ಸಿಬ್ಬಂದಿಗಳ ಸೇವೆಯನ್ನು ಪರಿಗಣಿಸಿ ಅವರಿಗೆ ಸ್ಫೂರ್ತಿ ನೀಡಲು ಈ ಗೌರವ ಸಮರ್ಪಣೆಯನ್ನು ಭ್ರಮರ ಟ್ರಸ್ಟ್ ವತಿಯಿಂದ ನೀಡಲಾಗುತ್ತಿದೆ ಎಂದು ತಿಳಿಸಿದರು.

ಭ್ರಮರ ಟ್ರಸ್ಟ್‌ನ ಸಂಸ್ಥಾಪಕರಾದ ಶ್ರೀಮತಿ ಮಾಧುರಿ ತಾತಾಚಾರಿಯವರು ಜೆಎಸ್‌ಎಸ್ ಸಂಸ್ಥೆಯು ಆರೋಗ್ಯ ಕ್ಷೇತ್ರದಲ್ಲಿ ನೀಡುತ್ತಿರುವ ಸೇವೆ ಅಮೋಘವಾದುದು. ಪೂಜ್ಯರು ಸಮಾಜಕ್ಕೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹೀಗಾಗಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿಗಳಿಗೆ ತಮ್ಮ ಟ್ರಸ್ಟ್ ವತಿಯಿಂದ ಗೌರವ ಸಮರ್ಪಣೆ ಮಾಡುತ್ತಿರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ 100 ಸಿಬ್ಬಂದಿಗಳಿಗೆ ಪ್ರಶಂಸಾ ಪತ್ರ ಹಾಗೂ ಪ್ರೋತ್ಸಾಹಧನ ನೀಡಿ ಅಭಿನಂದಿಸಲಾಯಿತು. ಟ್ರಸ್ಟ್ ವತಿಯಿಂದ ಆಸ್ಪತ್ರೆಗೆ ವೆಂಟಿಲೇಟರ್ ಹಾಗೂ ಹ್ಯೂಮಿಡಿಫಯರ್‌ಗಳನ್ನು ಕೊಡುಗೆ ನೀಡಿದರು. ಡಾ. ಸಿ.ಜಿ ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಹೆಚ್. ಬಸವನಗೌಡಪ್ಪ ಮಾತನಾಡಿದರು. ಡಾ. ಕರ್ನಲ್ ಎಂ. ದಯಾನಂದರವರು ಸ್ವಾಗತಿಸಿದರು. ಡಾ. ಎಂ. ಗುರುಸ್ವಾಮಿಯವರು ಭ್ರಮರ ಟ್ರಸ್ಟ್ ಹಾಗೂ ಶ್ರೀಮತಿ ಮಾಧುರಿ ತಾತಾಚಾರಿಯವರ ಕಿರು ಪರಿಚಯ ಮಾಡಿದರು. ಕು. ಚಂದು ಬಾಯಿ ಪ್ರಾರ್ಥಿಸಿದರು. ಡಾ. ಮಂಜುನಾಥ್ ವಂದಿಸಿದರು. ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಗುರುವಿಗೆ ಮಹತ್ವದ ಸ್ಥಾನ ಕೊಟ್ಟಿದ್ದು ಭಾರತದ ವೈಶಿಷ್ಟ್ಯ

ಗುರುವಿಗೆ ಮಹತ್ವದ ಸ್ಥಾನ ಕೊಟ್ಟಿದ್ದು ಭಾರತದ ವೈಶಿಷ್ಟ್ಯ ಎಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾರವರು ತಿಳಿಸಿದರು.

ಜುಲೈ 24ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಮಾಧ್ಯಮದ ಮೂಲಕ ನಡೆದ ಗುರುಪೂರ್ಣಿಮಾ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ಜಗತ್ತಿನಲ್ಲಿ ಭಾರತಕ್ಕೆ ವಿಶಿಷ್ಟವಾದ ಸ್ಥಾನವಿದೆ. ಆಷಾಢ ಮಾಸದಲ್ಲಿ ಗುರುಪೂರ್ಣಿಮೆಯನ್ನು ಎಲ್ಲಕಡೆ ಆಚರಿಸುತ್ತಿರುವುದು ಬಹಳ ಅರ್ಥಪೂರ್ಣವಾಗಿದೆ. ಆದಿಕಾಲದ ಋಷಿಮುನಿಗಳು, ವ್ಯಾಸ ಮಹರ್ಷಿಗಳು, ಶಂಕರಾಚಾರ್ಯರು, ಬಸವೇಶ್ವರರು, ಪರಮಹಂಸರು, ಸ್ವಾಮಿ ವಿವೇಕಾನಂದರು ಹೀಗೆ ಮಹಾಸಂತರು ಅವರುಗಳ ಗುರುಗಳಿಂದ ಬಂದ ಪ್ರೇರಣೆ ಹಾಗೂ ಮಾರ್ಗದರ್ಶನದಿಂದ ಮಹಾಸಾಧಕರಾಗಲು ಸಾಧ್ಯವಾಯಿತು.

ಗುರುಗಳಾದವರು ಸಮಾಜಕ್ಕೆ ಉತ್ತಮ ಶಿಷ್ಯರನ್ನು ಕೊಟ್ಟಾಗ ಸಮಾಜ ಸುಧಾರಣೆಯಾಗಲು ಸಾಧ್ಯವಾಗುತ್ತದೆ. ಉತ್ತಮವಾದ ಗುರು ಮಾತ್ರ ಉತ್ತಮ ವಿದ್ಯಾರ್ಥಿಗಳನ್ನು ನಿರ್ಮಾಣ ಮಾಡಬಲ್ಲ. ಭಾರತದ ಭವ್ಯ ಪರಂಪರೆಗೆ ಧೀಮಂತ ಸಂಸ್ಕೃತಿಯೇ ಕಾರಣ. ಇಂಥ ಉತ್ತಮ ಸಂಸ್ಕೃತಿ ಉಳಿಯಲು, ಬೆಳೆಯಲು ಗುರುವಿನಿಂದ ಮಾತ್ರ ಸಾಧ್ಯ. ಈ ದಿಸೆಯಲ್ಲಿ ಧಾರ್ಮಿಕ ಗುರುಗಳನ್ನು ಭಾರತದಲ್ಲಿ ಹೆಚ್ಚಾಗಿ ಕಾಣುತ್ತೇವೆ. ಇಂಥ ಗುರುಗಳಿಗೆ ಪ್ರತಿಯೊಬ್ಬರೂ ಗೌರವವನ್ನು ಕೊಟ್ಟಾಗ ಗುರುವಿಗೆ ಧನ್ಯತಾಭಾವನೆ ಮೂಡುತ್ತದೆ. ಇದರಿಂದ ಶಿಷ್ಯರೂ ಮುಂದೆ ಉತ್ತಮ ಗುರುಗಳಾಗಿ ರೂಪುಗೊಳ್ಳುವರು. ಸುತ್ತೂರು ಶ್ರೀಮಠವು ಪರಮಪೂಜ್ಯರ ಸಾನ್ನಿಧ್ಯದಲ್ಲಿ ಅರ್ಥಪೂರ್ಣವಾಗಿ ಗುರುಪೂರ್ಣಿಮೆಯನ್ನು ಆಚರಿಸುತ್ತಿರುವುದು ಎಲ್ಲರಿಗೂ ಸಂತೋಷವನ್ನುಂಟು ಮಾಡಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು, ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ. ಡೇನಿಯಲ್, ಆಧ್ಯಾತ್ಮಿಕ ಜಿಜ್ಞಾಸುಗಳು, ಶ್ರೀಮಠದ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು.

**ವೈದ್ಯರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರ ಸೇವೆ ಶ್ಲಾಘನೀಯ**

ಕರೋನಾ ಸಮಯದಲ್ಲಿ ಜೀವದ ಹಂಗನ್ನು ತೊರೆದು ಕಾರ್ಯನಿರ್ವಹಿಸಿದ ವೈದ್ಯರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರ ಸೇವೆ ಶ್ಲಾಘನೀಯ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಜುಲೈ 31ರಂದು ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಕಲಾಮಂದಿರದಲ್ಲಿ ಶ್ರೀ ವೀರಶೈವ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ವತಿಯಿಂದ ಕರೋನಾ ಮುಂಚೂಣಿ ಸಾಲಿನ ಯೋಧರಿಗೆ ಗೌರವ ಸಮರ್ಪಣೆ ಹಾಗೂ ಆಶಾ ಮತ್ತು ಪೌರಕಾರ್ಮಿಕರಿಗೆ ದಿನಸಿ ಕಿಟ್‌ಗಳ ವಿತರಣಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ, ಕರೋನಾ ಎರಡನೇ ಅಲೆಯ ಸಂದರ್ಭದಲ್ಲಿ ಎದುರಾದ ಸಂಕಷ್ಟಗಳನ್ನು ಎಲ್ಲರೂ ಕಣ್ಣಾರೆ ನೋಡಿದ್ದಾರೆ. ರಾಜ್ಯದಲ್ಲಿ ಕರೋನಾ ವೈರಾಣು ಸೋಂಕು ವ್ಯಾಪಿಸಿ ಸಾಕಷ್ಟು ಸಾವು-ನೋವುಗಳು

ಸಂಭವಿಸಿದವು. ಅಂತಹ ಸಂದರ್ಭದಲ್ಲಿ ಕರೋನಾ ವಾರಿಯರ್ಸ್‌ಗಳು ಸಲ್ಲಿಸಿದ ಸೇವೆ ಅಪಾರ. ಅವರುಗಳನ್ನು ಈ ಸಂದರ್ಭದಲ್ಲಿ ಗೌರವಿಸುತ್ತಿರುವುದು ಉತ್ತಮ ಕಾರ್ಯ. ಪ್ರತಿಯೊಬ್ಬರೂ ಲಸಿಕೆ ಪಡೆಯುವ ಮೂಲಕ ವೈದ್ಯರ ಹಾಗೂ ಸರ್ಕಾರದ ಸೂಚನೆ ಪಾಲಿಸಿದರೆ ಮೂರನೇ ಅಲೆ ತಡೆಯಲು ಸಾಧ್ಯ. ನಂಜನಗೂಡು ಭಾಗದ ಬಹುದಿನಗಳ ಬೇಡಿಕೆಯಾಗಿದ್ದ ನುಗು ಏತ ನೀರಾವರಿ ಯೋಜನೆಯನ್ನು ಶಾಸಕರಾದ ಶ್ರೀ ಹರ್ಷವರ್ಧನ್‌ರವರು ಮಂಜೂರು ಮಾಡಿಸಿದ್ದಾರೆ. ಇದರಿಂದ ಸಾವಿರಾರು ರೈತರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಶಾಸಕರಾದ ಶ್ರೀ ಬಿ. ಹರ್ಷವರ್ಧನ್‌ರವರು ಕೋವಿಡ್ ಸಾಂಕ್ರಾಮಿಕ ರೋಗದಿಂದ ಲಾಕ್‌ಡೌನ್ ಮಾಡುವ ಪರಿಸ್ಥಿತಿ ಉಂಟಾಗಿದ್ದು ಬೇಸರದ ಸಂಗತಿ. ಎರಡನೇ ಅಲೆ ಬಹಳ ಗಂಭೀರ ಮತ್ತು ಅಪಾಯಕಾರಿಯಾಗಿತ್ತು. ಇದನ್ನು ಯಶಸ್ವಿಯಾಗಿ ನಿಭಾಯಿಸಲು ಅಧಿಕಾರಿಗಳು ಶ್ರಮಪಟ್ಟಿದ್ದಾರೆ. ನಂಜನಗೂಡಿನ ನಾಲ್ಕು ಭಾಗಗಳಲ್ಲಿ ಆಕ್ಸಿಜನ್ ಘಟಕಗಳನ್ನು ತೆರೆಯುವ ಮೂಲಕ ಆಕ್ಸಿಜನ್ ಕೊರತೆಯನ್ನು ಯಶಸ್ವಿಯಾಗಿ ನಿಭಾಯಿಸಲಾಗಿದೆ ಎಂದು ತಿಳಿಸಿದರು.

ನಗರಸಭಾಧ್ಯಕ್ಷರಾದ ಶ್ರೀ ಹೆಚ್.ಎಸ್. ಮಹಾದೇವಸ್ವಾಮಿ, ಸೊಸೈಟಿ ಅಧ್ಯಕ್ಷರಾದ ಶ್ರೀ ಎನ್.ಸಿ. ಬಸವಣ್ಣ, ಸನ್ಮಾನ ಸ್ವೀಕರಿಸಿ ತಹಶೀಲ್ದಾರರಾದ ಶ್ರೀಮತಿ ಮೋಹನಕುಮಾರಿ, ಡಾ. ಮಧುಸೂದನ್ ಹಾಗೂ ಶ್ರೀಮತಿ ಚಂದ್ರಕಲಾರವರುಗಳು ಮಾತನಾಡಿದರು. ಶ್ರೀಮತಿ ಮೀನಾಕ್ಷಿ ಪ್ರಾರ್ಥಿಸಿದರು. ಶ್ರೀ ಜಿ.ಎಸ್. ಶೇಖರಪ್ಪ ಸ್ವಾಗತಿಸಿದರು. ಶ್ರೀಮತಿ ಮಂಜುಳ ಮಧುರವರು ವಂದಿಸಿದರು.

**ಪ್ರಶಸ್ತಿಗಳು ಅರಸಿ ಬರಬೇಕು**

ಪ್ರಶಸ್ತಿಗಳು ಅರಸಿ ಬರಬೇಕೆ ಹೊರತು ಪ್ರಭಾವವನ್ನು ಬಳಸಿಕೊಂಡು ಪಡೆದುಕೊಳ್ಳುವುದಲ್ಲ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಆಗಸ್ಟ್ 1ರಂದು ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಮತ್ತು ಗ್ರಾಮಾಂತರ ಘಟಕಗಳು ಹಾಗೂ ಮೈಸೂರು ಕದಳಿ ಮಹಿಳಾ ವೇದಿಕೆಯ ಸಹಯೋಗದಲ್ಲಿ ಏರ್ಪಡಿಸಿದ್ದ 2019 ಮತ್ತು 2020ರ ಗೊರುಚ ದತ್ತಿ ನಿಧಿ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ, ಇತ್ತೀಚೀನ ದಿನಗಳಲ್ಲಿ ರಾಜಕೀಯ ಮತ್ತು ಪ್ರಭಾವಿ ವ್ಯಕ್ತಿಗಳ ಮೂಲಕ ಪ್ರಶಸ್ತಿಗಾಗಿ ಒತ್ತಡ ತರಲಾಗುತ್ತಿದೆ. ಒಳ್ಳೆಯ ಕೆಲಸ ಮಾಡುವವರಿಗೆ ಪ್ರಶಸ್ತಿ ತಾನಾಗೀಯೇ ಒಲಿದು ಬರುತ್ತದೆ. ಈ ನಿಟ್ಟಿನಲ್ಲಿ ಶರಣ ಸಾಹಿತ್ಯ ಪರಿಷತ್ತು ಒಳ್ಳೆಯ ಕೆಲಸ ಮಾಡುತ್ತಿದೆ. ಶರಣ ಸಾಹಿತ್ಯ ಪರಿಷತ್ತನ್ನು ಗೊರುಚರವರು ವಿಶಾಲವಾಗಿ ಬೆಳೆಸುತ್ತಿದ್ದಾರೆ. ನಿರಂತರವಾಗಿ ಸಾಮಾಜಿಕ

ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಜಾನಪದ ಅಕಾಡೆಮಿ ಮೊದಲಾದ ಸಂಸ್ಥೆಗಳ ಅಧ್ಯಕ್ಷರಾಗಿ ಅವುಗಳನ್ನು ಬೆಳೆಸಿದ ಶ್ರೇಯಸ್ಸು ಗೊರುಚರವರಿಗೆ ಸಲ್ಲಬೇಕು ಎಂದರು.

ಗದಗಿನ ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತನಷ್ಟೇ ಖ್ಯಾತಿ ಪಡೆದಿರುವ ಮತ್ತೊಂದು ಸಂಸ್ಥೆಯಾಗಿದೆ. ರಾಜೇಂದ್ರ ಮಹಾಸ್ವಾಮಿಗಳವರು ದೂರದೃಷ್ಟಿಯಿಂದ ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ನಮ್ಮ ನಾಡಿನ ಜನತೆ ಸ್ವಾಸ್ಥ್ಯದಿಂದ ಬದುಕಲು ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ಎಲ್ಲರಿಗೂ ತಲುಪಬೇಕು. ಶರಣ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೆಚ್ಚು ಕೃತಿಗಳು ರಚನೆಯಾಗಬೇಕು ಎಂದು ಹೇಳಿದರು.

ಅಭಿನಂದನಾ ನುಡಿಗಳನ್ನಾಡಿದ ಪ್ರೊ. ಮಲೆಯೂರು ಗುರುಸ್ವಾಮಿಯವರು ಇಂದಿನ ದಿನಮಾನಗಳಲ್ಲಿ ಪ್ರಶಸ್ತಿಗಳ ಸಂಖ್ಯೆ ಹೆಚ್ಚಿದಂತೆ, ಅದರ ಮೌಲ್ಯವೂ ಹೆಚ್ಚುತ್ತಿದೆ. ಪ್ರಶಸ್ತಿಯನ್ನು 'ಪಡೆಯುವವರು' ಮತ್ತು ತೆಗೆದುಕೊಳ್ಳುವವರು' ಎರಡು ರೀತಿ ಜನರನ್ನು ಇಂದು ಕಾಣುತ್ತಿದ್ದೇವೆ. ಆದರೆ ಗೊರುಚ ಪ್ರಶಸ್ತಿ ಹಾಗಲ್ಲ. ಅದಕ್ಕೆ ವಿಶೇಷ ಬೆಲೆಯಿದೆ. ಗೊರುಚರವರು ಸಾಹಿತ್ಯ ಕ್ಷೇತ್ರಕ್ಕೆ ಅದರಲ್ಲೂ ಶರಣ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ವಿಶ್ವವಿದ್ಯಾನಿಲಯದ ಮೆಟ್ಟಲನ್ನೇ ಏರದ ಅವರು ಜಾನಪದ ವಿಶ್ವವಿದ್ಯಾನಿಲಯ ವನ್ನು ಸ್ಥಾಪಿಸಲು ಕಾರಣಕರ್ತರಾಗಿದ್ದಾರೆ. ತ್ಯಾಗ ಮತ್ತು ಸೇವೆ ಎಂಬ ಮೌಲ್ಯಗಳ ಮೂಲಕ ನಾಡಿನ ಸಾಂಸ್ಕೃತಿಕ ಜಗತ್ತಿನ ಸಾಕ್ಷೀಪ್ರಜ್ಞೆಯಾಗಿದ್ದಾರೆ ಎಂದರು.

2019 ಮತ್ತು 2020ನೇ ಸಾಲಿನ ಗೊರುಚ ಶರಣ ಪ್ರಶಸ್ತಿಗೆ ಕ್ರಮವಾಗಿ ಡಾ. ಸಿ. ವೀರಣ್ಣ ಹಾಗೂ ಡಾ. ಬಸವರಾಜ ಸಾದರ, ಗೊರುಚ ಜಾನಪದ ಪ್ರಶಸ್ತಿಗೆ ಡಾ. ಬಿ.ಎಸ್. ಸ್ವಾಮಿ, ಡಾ. ಎಚ್.ಟಿ. ಪೋತೆ, ಗೊರುಚ ಶರಣ ಸಾಹಿತ್ಯ ಗ್ರಂಥ ಪ್ರಶಸ್ತಿಗೆ ಪ್ರೊ. ಬಿ.ಆರ್. ಪೊಲೀಸ ಪಾಟೀಲ ಮತ್ತು ಡಾ. ಬಸವರಾಜ ಸಬರದ ಹಾಗೂ ಗೊರುಚ ಜನಪದ ಗ್ರಂಥ ಪ್ರಶಸ್ತಿಗೆ ಶ್ರೀ ಪಿ.ಡಿ. ವಾಲೀಕಾರ ಹಾಗೂ ಡಾ. ಕುರುವ ಬಸವರಾಜ್‌ರವರು ಭಾಜನರಾದರು.

ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪುರಸ್ಕೃತರಾದ ಪ್ರೊ. ಬಿ.ಆರ್. ಪೊಲೀಸ ಪಾಟೀಲ, ಡಾ. ಎಚ್.ಟಿ. ಪೋತೆ, ಶ್ರೀ ಪಿ.ಡಿ. ವಾಲೀಕಾರ, ಡಾ. ಕುರುವ ಬಸವರಾಜ್‌ರವರುಗಳು ಮಾತನಾಡಿದರು. ಸಂಗೀತ ವಿವಿ ಕುಲಪತಿಗಳಾದ ಡಾ. ನಾಗೇಶ್ ವಿ. ಬೆಟ್ಟಕೋಟೆ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಶ್ರೀ ಕೆ.ವಿ. ನಾಗರಾಜಮೂರ್ತಿ, ಶ್ರೀಮತಿ ಮುಕ್ತಾ ಕಾಗಲಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಶೈಲಾ ಸಿದ್ಧರಾಮಪ್ಪ ತಂಡದವರು

ಪ್ರಾರ್ಥನೆ ಸಲ್ಲಿಸಿದರು. ಡಾ. ಸಿಂ.ರಾ. ಹೊನ್ನಲಿಂಗಯ್ಯನವರು ಸ್ವಾಗತಿಸಿದರು. ಶ್ರೀಮತಿ ಮಾಯಾಚಂದ್ರ ತಂಡದವರು ದತ್ತಿ ಸಾಕ್ಷ್ಯಚಿತ್ರ ಪ್ರದರ್ಶಿಸಿದರು. ಪವರ್ ಪಾಯಿಂಟ್ ಪ್ರಸೆಂಟೇಶನ್ ಮೂಲಕ ಪ್ರಶಸ್ತಿ ಪುರಸ್ಕೃತರ ಪರಿಚಯ ಮಾಡಲಾಯಿತು. ಶ್ರೀ ಮ.ಗು. ಸದಾನಂದಯ್ಯ ವಂದಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ನಿರೂಪಿಸಿದರು.

**ಮದ್ಯವ್ಯಸನಿಗಳು ಮುಕ್ತರಾಗಲು ಕೌನ್ಸಲಿಂಗ್ ಕೇಂದ್ರ ಪ್ರಾರಂಭ**

ಕುಡಿತದ ಚಟದಿಂದ ಉದ್ಭವಿಸುತ್ತಿರುವ ಸಾಮಾಜಿಕ ಮತ್ತು ಕೌಟುಂಬಿಕ ಸಮಸ್ಯೆಗಳಿಂದ ವ್ಯಸನಿಗಳನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ ಶ್ರೀಘ್ರದಲ್ಲೇ ಕೌನ್ಸಲಿಂಗ್ ಕೇಂದ್ರ ತೆರೆಯಲಾಗುವುದು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಆಗಸ್ಟ್ 1ರಂದು ಜೆಎಸ್‌ಎಸ್ ಮಹಾವಿದ್ಯಾಪೀಠ, ಸರ್ಕಾರದ ಇಲಾಖೆಗಳು, ಸಂಘಸಂಸ್ಥೆಗಳು ಹಾಗೂ ದಾನಿಗಳ ಸಹಯೋಗದಲ್ಲಿ ನಂಜನಗೂಡಿನ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಆಯೋಜಿಸಿದ್ದ ಒಂಬತ್ತನೇ ಕುಡಿತ ಬಿಡಿಸುವ ಶಿಬಿರದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ, ಕುಡಿತದ ದಾಸರಾಗಿರುವ ಗ್ರಾಮೀಣ ಜನರ ಬದುಕನ್ನು ತಹಬಂದಿಗೆ ತರುವ ನಿಟ್ಟಿನಲ್ಲಿ ಶ್ರೀಮಠದಿಂದ ಇಂತಹ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಶಿಬಿರದ ಬಳಿಕ ಅವರಿಗೆ ಎದುರಾಗುವ ಸಾಮಾಜಿಕ ಮತ್ತು ಕೌಟುಂಬಿಕ ಸಮಸ್ಯೆಗಳಿಂದ ಮುಕ್ತಗೊಳಿಸಿ ಸುಂದರ ಬದುಕನ್ನು ಕಟ್ಟಿಕೊಳ್ಳುವ ಬಗ್ಗೆ ನುರಿತ ತಜ್ಞರಿಂದ ಆಪ್ತ ಸಮಾಲೋಚನೆ, ಸಲಹೆ, ಮಾರ್ಗದರ್ಶನ ನೀಡಿದರೆ ಅವರಿಗೆ ಆತ್ಮಬಲ, ಮನೋಸ್ಥೈರ್ಯ ಹೆಚ್ಚುವುದರಿಂದ ಮೈಸೂರಿನಲ್ಲಿ ಕೌನ್ಸಲಿಂಗ್ ಕೇಂದ್ರ ತೆರೆಯಲಾಗುವುದೆಂದು ತಿಳಿಸಿದರು.

ಸಂಸದರಾದ ಶ್ರೀ ವಿ. ಶ್ರೀನಿವಾಸ್ ಪ್ರಸಾದ್‌ರವರು ಶ್ರಮಿಕವರ್ಗ ತಮ್ಮ ದೈಹಿಕ ಶ್ರಮ ಹೋಗಲಾಡಿಸಲು ಮದ್ಯವ್ಯಸನಿಗಳಾಗುತ್ತಿದ್ದರೆ, ಶ್ರೀಮಂತವರ್ಗ ಪ್ರತಿಷ್ಠೆ ಮತ್ತು ಖುಷಿಗಾಗಿ ಕುಡಿತಕ್ಕೆ ಬಲಿಯಾಗುತ್ತಿದ್ದಾರೆ. ಕುಡಿತದಿಂದ ಮನುಷ್ಯತ್ವವೇ ನಾಶವಾಗುತ್ತಿದೆ. ಈ ಚಟದಿಂದ ಜನರನ್ನು ಮುಕ್ತಗೊಳಿಸುವುದು ಅಷ್ಟು ಸುಲಭವಲ್ಲ. ಇಂತಹ ಶಿಬಿರಗಳಿಂದ ಮಾನಸಿಕ ಪರಿವರ್ತನೆಯ ಮೂಲಕ ಅದನ್ನು ದೂರಗೊಳಿಸಬಹುದಾಗಿದೆ ಎಂದರು.

ಶಾಸಕರಾದ ಶ್ರೀ ಬಿ. ಹರ್ಷವರ್ಧನ್‌ರವರು ನಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಮದ್ಯದಂಗಡಿಗಳನ್ನು ತೆರೆಯಲು ಸರ್ಕಾರ ಒತ್ತಡ ಹೇರುತ್ತಿದೆ. ಆದರೆ ಅದಕ್ಕೆ ನಾನು ಅವಕಾಶ ನೀಡುತ್ತಿಲ್ಲ. ಯುವಜನತೆ ಕುಡಿತಕ್ಕೆ ಹೆಚ್ಚು ಮಾರುಹೋಗುತ್ತಿದ್ದು, ಪಾಶ್ಚಿಮಾತ್ಯ ಜೀವನಶೈಲಿಯತ್ತ ವಾಲುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಕಳವಳ ವ್ಯಕ್ತಪಡಿಸಿದರು.

ಹತ್ತು ದಿನಗಳ ಕಾಲ ನಡೆದ ಶಿಬಿರದಲ್ಲಿ ಮೈಸೂರು, ಚಾಮರಾಜನಗರ ಸೇರಿದಂತೆ ನಾನಾ ಭಾಗಗಳಿಂದ ಬಂದ 34 ಜನ ಶಿಬಿರಾರ್ಥಿಗಳು ಭಾಗವಹಿಸಿ, ಶಿಬಿರದ

ಪ್ರಯೋಜನ ಪಡೆದುಕೊಂಡರು. ಶಿಬಿರಕ್ಕೆ ನೆರವು ನೀಡಿದ ದಾನಿಗಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಚುಂಚನಹಳ್ಳಿ ಶ್ರೀಗಳು, ತಹಶೀಲ್ದಾರರಾದ ಶ್ರೀಮತಿ ಮೋಹನಕುಮಾರಿ, ಉಪ ಪೋಲಿಸ್ ಅಧೀಕ್ಷಕರಾದ ಶ್ರೀ ಗೋವಿಂದರಾಜು, ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ. ಈಶ್ವರ್ ಬಿ. ಕನಾಟ್ಕಿ ಮತ್ತು ಪ್ರಥಮ ದರ್ಜೆ ಗುತ್ತಿಗೆದಾರರಾದ ಶ್ರೀ ಯು.ಎಸ್. ಪದ್ಮನಾಭರಾವ್ ಉಪಸ್ಥಿತರಿದ್ದರು. ಶ್ರೀ ಬಿ. ನಂಜುಂಡಸ್ವಾಮಿ (ಬೊಮ್ಮಾಯಿ) ಯವರು ಸ್ವಾಗತಿಸಿದರು. ಶ್ರೀ ಎಸ್. ಬಸವರಾಜು ಶಿಬಿರದ ವರದಿ ಮಂಡಿಸಿದರು. ಶ್ರೀ ಸಿ. ಜಗದೀಶ್‌ರವರು ವಂದಿಸಿದರು. ಡಾ. ಎಂ.ಪಿ. ಸೋಮಶೇಖರ್‌ರವರು ಕಾರ್ಯಕ್ರಮ ನಿರೂಪಿಸಿದರು.

**ತತ್ತ್ವಪದಕಾರರು ಸಾಧಕರೇ ಹೊರತು ಸಾಹಿತಿಗಳಲ್ಲ**

ತತ್ತ್ವಪದಕಾರರು ಸಾಹಿತಿಗಳಲ್ಲ ಅವರು ಸಾಧಕರು. ಸಾಧನೆಯ ಮಾರ್ಗದಲ್ಲಿ ಅವರು ಹಾಡಿದ ಹಾಡುಗಳು ತತ್ತ್ವಪದಗಳೆನಿಸಿದವು ಎಂದು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸಹ ಪ್ರಾಧ್ಯಾಪಕರು ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರರವರು ಹೇಳಿದರು.

ಆಗಸ್ಟ್ 8ರಂದು ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆನ್‌ಲೈನ್ ಮೂಲಕ ನಡೆದ ಶ್ರಾವಣಮಾಸದ ಪೂಜಾನುಷ್ಠಾನ ಹಾಗೂ ಪ್ರವಚನ ಉದ್ಘಾಟನೆಯ ಕಾರ್ಯಕ್ರಮದಲ್ಲಿ ಕನ್ನಡ ತತ್ತ್ವಪದಕಾರರು ವಿಷಯ ಕುರಿತು ಮಾತನಾಡುತ್ತಾ ತತ್ತ್ವಪದಕಾರರು ಸಮಾಜದ ಕಲ್ಯಾಣವನ್ನು ಬಯಸಿದ್ದರು. ತತ್ತ್ವಪದಗಳು ಏಕೀಭವಿಸುತ್ತವೆ ಹಾಗೂ ಇಹವನ್ನು ಪರವಾಗಿಸುವ ಪರಮಾತ್ಮನೆಡೆಗೆ ಸೆಳೆಯುತ್ತವೆ. ಇಹದ ಮೂಲಕವೇ ಪರ. ದೇಹದಲ್ಲೇ ದೇವರನ್ನು ಕಾಣಬೇಕು ಎಂದು ತತ್ತ್ವಪದಕಾರರು ತಿಳಿಸಿದರು. ಇವರಲ್ಲಿ ಮುಖ್ಯರಾದವರು ಹಂಪಿಯ ಕೊಡೇಕಲ್ಲ ಬಸವಣ್ಣನವರು. ಮಡದಿಯ ಮರಣದ ಬಳಿಕ ಗುರು ಸಂಗಮನಾಥನ ಮಾರ್ಗದರ್ಶನದಲ್ಲಿ ಜ್ಞಾನಸಂಪಾದನೆಗಾಗಿ ಪರಿವ್ರಾಜಕರಾಗಿ ಬಳ್ಳಿಗಾವೆಗೆ ಬರುತ್ತಾರೆ. ಭಾರತದ ಇತಿಹಾಸವನ್ನು ಗಮನಿಸಿದಾಗ ಯಾವ ಸಂದರ್ಭದಲ್ಲಿ ಕತ್ತಲು ಆವರಿಸಿ ಅಧ್ಯಾತ್ಮ ಕಾಡು ಪಾಲಾಗಿರುತ್ತದೆಯೋ ಅಂತಹ ಸಂದರ್ಭದಲ್ಲಿ ಬೆಳಕಿನ ದಾರಿ ತೋರುವ, ಪತನವಾದ ಭಾರತವನ್ನು ಮೇಲೆತ್ತುವ ದಾರ್ಶನಿಕರು ಉದಯಿಸುತ್ತಲೇ ಇರುತ್ತಾರೆ. ಶಿವಪಥವನರಿವಡೆ ಗುರುಪಥವೇ ಮೊದಲು ಎಂಬಂತೆ ತತ್ತ್ವಪದಕಾರರು ಗುರುವಿಗೆ ಬಹಳ ಮಹತ್ವದ ಸ್ಥಾನವನ್ನು ನೀಡಿದ್ದಾರೆ. ಅವರು ಸಂಸಾರಿಗಳು, ಅಲ್ಲಿದ್ದುಕೊಂಡೆ ಸಾಧನೆ ಮಾಡಿದವರು. ಯಾವುದನ್ನೂ ನಿರಾಕರಿಸದೆ ಗುರುವಿನ ಉಪದೇಶದ ಮೂಲಕ ಅನುಭಾವವನ್ನು ಪಡೆದುಕೊಂಡರು. ತತ್ತ್ವಪದಕಾರರು ಅದ್ವೈತವನ್ನು ಅನುಭವಿಸುವಂತಹ ಸಚ್ಚಿದಾನಂದಸ್ವರೂಪಿಗಳು. ದೇಹ–ಆತ್ಮ ಬೇರೆ

ಅಲ್ಲ. ದೇಹ ಇರವುದು ಆತ್ಮದ ಕಲ್ಯಾಣಕ್ಕಾಗಿ ಎಂದು ಪ್ರತಿಪಾದಿಸಿದರು. ಸತ್–ಚಿತ್ ಅಭಿನ್ನವಾದಾಗ ಆನಂದ ದೊರಕುತ್ತದೆ. ಅರಿವು ವಿಕಾಸದಿಂದ ಗಳಿಸಬೇಕಾದ ಸಿದ್ಧಿ. ಸಾಮರಸ್ಯದ ಚಿಂತನೆಯಿಂದ ಮಾತ್ರ ಸಿದ್ಧಿ ಸಾಧ್ಯ. ತರತಮಗಳು ಮನುಷ್ಯನನ್ನು ಸಣ್ಣವನನ್ನಾಗಿಸುತ್ತವೆ. ಕೊಡೇಕಲ್ ಬಸವಣ್ಣನವರು 15–16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ವೈಭವದಿಂದ ಮೆರೆಯುತ್ತಿದ್ದಂತಹ ಸಂದರ್ಭ, ಬಹುಮನಿ ಸುಲ್ತಾನರ ದಾಳಿಗಳು ನಡೆಯುತ್ತಿದ್ದಂತಹ ಕಾಲಘಟ್ಟದಲ್ಲಿ ಛಿದ್ರಛಿದ್ರವಾಗಿದ್ದ ಸಮಾಜವನ್ನು ಒಂದಾಗಿಸುವ ಕಾರ್ಯಕ್ಕೆ ಮುಂದಾಗಿದ್ದಂಥವರು ಎಂದು ಹೇಳಿದರು.

ಶ್ರೀ ಜಯರಾಜೇಂದ್ರರು ರೈತಾಪಿ ವರ್ಗದ ಜನರೇ ಹೆಚ್ಚಾಗಿರುವ ಭಾರತದಲ್ಲಿ ಆಷಾಢ ಮಾಸದಲ್ಲಿ ಕೃಷಿ ಚಟುವಟಿಕೆಗಳು ಬಹುತೇಕ ಪೂರ್ಣಗೊಂಡು ಶ್ರಾವಣ ಮಾಸದಲ್ಲಿ ಬಿಡುವು ದೊರೆಯುವ ಸಂದರ್ಭ. ಇಂತಹ ಸಮಯದಲ್ಲಿ ಹಿಂದಿನಿಂದಲೂ ಪುರಾಣ–ಪ್ರವಚನಗಳನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ. ಭಾರತೀಯ ಸಂಸ್ಕೃತಿಯಲ್ಲಿ ಶ್ರಾವಣ ಮಾಸಕ್ಕೆ ಅತ್ಯಂತ ವಿಶಿಷ್ಟವಾದ ಸ್ಥಾನವಿದೆ. ಜ್ಞಾನ ಸಂಪಾದನೆಗೆ ಅತ್ಯಂತ ಉತ್ತಮವಾದ ಕಾಲವಿದು. ಶ್ರವಣ, ಮನನ ಮತ್ತು ನಿಧಿಧ್ಯಾಸನದ ಮೂಲಕ ಈ ಮಾಸದಲ್ಲಿ ಪಡೆದ ಜ್ಞಾನವನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು. ಹಿಂದಿನ ಕಾಲದಲ್ಲಿ ಅಧ್ಯಯನಕ್ಕೆ ಅವಕಾಶಗಳು ಕಡಿಮೆಯಿದ್ದವು. ಗುರುಕುಲಗಳನ್ನು ಹುಡುಕಿಕೊಂಡು ಹೋಗಬೇಕಿತ್ತು. ಅಲ್ಲಿ ಅಧ್ಯಯನ ಆರಂಭಿಸಲು ಶ್ರಾವಣ ಮಾಸದ ಆರಂಭದಂದೆ ಪೋಷಕರು ತಮ್ಮ ಮಕ್ಕಳನ್ನು ಸೇರಿಸುತ್ತಿದ್ದರು. ಶ್ರಾವಣ ಮಾಸದ ಎಲ್ಲ ದಿನಗಳು ಅತ್ಯಂತ ಪ್ರಶಸ್ತವಾದವು. ಸಾಲುಸಾಲು ಹಬ್ಬಗಳು ಸಹ ಆಚರಿಸಲ್ಪಡುತ್ತವೆ. ಮಠ–ಮಾನ್ಯಗಳು, ಧಾರ್ಮಿಕ ಕೇಂದ್ರಗಳಲ್ಲಿ ಪುರಾಣ, ಪ್ರವಚನ, ಉಪನ್ಯಾಸಗಳನ್ನು ಏರ್ಪಡಿಸಿಕೊಂಡು ಬರಲಾಗುತ್ತದೆ. ಮನುಷ್ಯನ ಮನಸ್ಸು ಮನೆಯ ರೀತಿ. ಮನೆಯನ್ನು ಹೇಗೆ ಸ್ವಚ್ಛವಾಗಿಟ್ಟುಕೊಳ್ಳುತ್ತೇವೋ ಹಾಗೆ ಮನಸ್ಸನ್ನು ಶುದ್ಧವಾಗಿರಿಸಿಕೊಳ್ಳಬೇಕು. ಉತ್ತಮ ವಿಚಾರಗಳು ನಮ್ಮ ಮನಸ್ಸನ್ನು ಹೊಕ್ಕಾಗ ಮಾತ್ರ ಶುದ್ಧತೆ ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ತಿನ ಮುಖ್ಯಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ, ಡಾ. ಸಿ.ಜಿ. ಬೆಟಸೂರಮಠ, ವಿದ್ಯಾಪೀಠದ ಅಧಿಕಾರಿಗಳು, ಗುರುಕುಲ ಸಾಧಕರು ಹಾಗೂ ಶ್ರೀಮಠದ ಸೇವಾ ಸಿಬ್ಬಂದಿಗಳು ಉಪಸ್ಥಿತರಿದ್ದರು. ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥನೆ ಸಲ್ಲಿಸಿದರು. ಆಲಮಟ್ಟಿಯ ಶ್ರೀ ಪುರವರ ಹಿರೇಮಠದ ಡಾ. ಶ್ರೀ ರುದ್ರಮುನಿ ದೇವರು ಸ್ವಾಗತಿಸಿದರು. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ನಿರೂಪಿಸಿದರು.

□

# ಲೇಖಕರ ವಿಳಾಸ

**ಡಾ॥ ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ್
ಆಯುರ್ವೇದ ಚಿಕಿತ್ಸಾಲಯ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ಬಿ.ಹೆಚ್. ರಸ್ತೆ
ತುಮಕೂರು 572102
ಮೊ: 9880996196

**ಡಾ. ದೊಡ್ಡರಂಗೇಗೌಡ**
ನಂ. 140, 'ಶ್ರೀಸನ್ನಿಧಿ'
3ನೇ ಮೇನ್, 4ನೇ ಹಂತ
ಕತ್ರಿಗುಪ್ಪೆ ಅಂಚೆ
ಬನಶಂಕರಿ
ಬೆಂಗಳೂರು 560085
ಮೊ: 9900253495

**ಪ್ರೊ. ಜಿ.ಎಚ್. ಹನ್ನೆರಡುಮಠ**
ನಂ. 5, 'ಮಾವುಮಲ್ಲಿಗೆ'
ಇಂದ್ರಪ್ರಸ್ಥ ಕಾಲನಿ
ಗೊಟ್ಟಿಗೆರೆ ಅಂಚೆ
ಬೆಂಗಳೂರು 560082
ಮೊ: 9945701108

**ಡಾ. ಕೆ. ಲೀಲಾಪ್ರಕಾಶ್**
ನಂ. 22, ಚಿರಂತನ, 1ನೇ ಮುಖ್ಯ ರಸ್ತೆ,
ಕೃಷ್ಣಮೂರ್ತಿ ಲೇಔಟ್
ಮೈಸೂರು 570009
ಮೊ: 9448553797

**ಡಾ. ಎಂ.ಎನ್. ಗಿರಿಜಾಪತಿ**
ಸಹಾಯಕ ಪ್ರಾಧ್ಯಾಪಕರು
ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ
ಮೊ: 9844582238

**ಶ್ರೀಮತಿ ಶಾಂತಮ್ಮ ಎಂ. ಕವಟಗಿಮಠ**
ನಂ. 355, 'ಶಿವಬಸವ ಕೃಪಾ'
ಧರ್ಮ ಮಾರ್ಗ, ಶಿವಬಸವ ನಗರ
ಬೆಳಗಾವಿ 590010
ಮೊ: 0831-2472077

**ಶ್ರೀಮತಿ ಎಂ. ಮುತ್ತುಲಕ್ಷ್ಮಿ ರಾಮಚಂದ್ರ**
ನಂ. 588, 17ನೇ ಮುಖ್ಯ ರಸ್ತೆ
'ಇ' ಬ್ಲಾಕ್, ಜೆ.ಪಿ.ನಗರ
ಮೈಸೂರು 570008
ಮೊ: 9448905451

- ಮಾಡುವ ಕರ್ತವ್ಯದಲ್ಲಿ ಎಚ್ಚರವಿರಬೇಕು. ಅದಕ್ಕಾಗಿ ಏನು ಮಾಡಬೇಕು ಎಂಬುದನ್ನು ಮರೆಯಬಾರದು.
- ದುಡಿಯದೇ ಸುಖ ಬಯಸುವ ಮನೋಭಾವವನ್ನು ಬಿಟ್ಟು, ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಿದರೆ ಸಮಸ್ಯೆಗಳು ಉದ್ಭವಿಸುವುದಿಲ್ಲ.

**– ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು**



ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಸಿದ್ಧಪಡಿಸಲಾಗಿರುವ "ಹಿತಾಯು" ಪೋಸ್ಟ್ ಕೋವಿಡ್ ರೆಜುವಿನೇಶನ್ ಕಿಟ್ ಮತ್ತು "ಬಾಲರಸಾಯನ" ಇಮ್ಯೂನೊ ಕಿಡ್ಸ್ ಕಿಟ್‌ಗಳನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಬಿಡುಗಡೆಗೊಳಿಸಿದರು. ಡಾ. ಪುಷ್ಪ ಅಮರನಾಥ್, ಶಾಸಕರುಗಳಾದ ಶ್ರೀ ಅನಿಲ್ ಚಿಕ್ಕಮಾದು, ಡಾ. ಯತೀಂದ್ರ ಸಿದ್ದರಾಮಯ್ಯ, ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರುಗಳು ಹಾಗೂ ಇತರರು ಇದ್ದಾರೆ (1.7.2021)







ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಕೇಂದ್ರ ಸರ್ಕಾರದ ಗಣಿ ಮತ್ತು ಕಲ್ಲಿದ್ದಲು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿಯವರು ಭೇಟಿನೀಡಿ ಪೂಜ್ಯರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳು ಸನ್ಮಾನಿಸಿ ಆಶೀರ್ವದಿಸುತ್ತಿರುವುದು. ಡಾ. ಪ್ರಭಾಕರ್ ಕೋರೆ, ಶ್ರೀ ಮಹಾಂತೇಶ್ ಕವಟಗಿಮಠ, ಶಾಸಕರಾದ ಶ್ರೀ ಎಲ್. ನಾಗೇಂದ್ರ ಮೊದಲಾದವರಿದ್ದಾರೆ (3.7.2021)




ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಮೈಸೂರು ನಾಗರಿಕ ವೇದಿಕೆಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಕೋವಿಡ್‌ನಿಂದ ತೊಂದರೆಗೀಡಾಗಿರುವ ಕಲಾವಿದರು, ದಿನಗೂಲಿ ನೌಕರರು, ಪತ್ರಿಕಾ ವಿತರಕರುಗಳಿಗೆ ಸಾಂಕೇತಿಕವಾಗಿ ಆಹಾರದ ಕಿಟ್‌ಗಳನ್ನು ವಿತರಿಸಿದರು. ಶ್ರೀ ಹೆಚ್.ವಿ. ರಾಜೀವ್, ಸಂಸದರಾದ ಶ್ರೀ ಪ್ರತಾಪ್ ಸಿಂಹ, ಶ್ರೀ ಆರ್. ವಾಸುದೇವ್ ಭಟ್, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಫಣೀಶ್, ಶ್ರೀಮತಿ ಅಶ್ವಿನಿ ಶರತ್, ಶ್ರೀ ಎಲ್.ಆರ್. ಮಹದೇವಸ್ವಾಮಿ ಮೊದಲಾದವರುಗಳಿದ್ದಾರೆ (5.7.2021)







ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಗೃಹ ಸಚಿವರಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಹಾಗೂ ಕಂದಾಯ ಸಚಿವರಾದ ಶ್ರೀ ಆರ್. ಅಶೋಕರವರು ಭೇಟಿ ನೀಡಿ ಪೂಜ್ಯರ ದರ್ಶನಾಶೀರ್ವಾದ ಪಡೆದು ಸಮಾಲೋಚಿಸುತ್ತಿರುವುದು. ಶ್ರೀ ತನ್ವೀರ್ ಸೇಠ್, ಶ್ರೀ ಪ್ರತಾಪ ಸಿಂಹ, ಶ್ರೀ ಎಲ್. ನಾಗೇಂದ್ರ ಹಾಗೂ ಮೊದಲಾದವರಿದ್ದಾರೆ (14.7.2021)



ಮೈಸೂರು ಶ್ರೀ ಸುತ್ತೂರು ಶಾಖಾಮತಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಸಂಸದರಾದ ಶ್ರೀ ನಳೀನ್‌ಕುಮಾರ್ ಕಟೀಲ್‌ರವರು ಭೇಟಿ ನೀಡಿ ಪೂಜ್ಯರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳು ಸನ್ಮಾನಿಸಿ ಆಶೀರ್ವದಿಸುತ್ತಿರುವುದು (14.7.2021)







ಮೈಸೂರಿನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಎಸ್‌ಪಿವಿಜಿಎಂಸಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮಹಾಜನ ವಿದ್ಯಾಸಂಸ್ಥೆಯ ಟ್ರಸ್ಟಿ ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಆರ್. ವಾಸುದೇವಮೂರ್ತಿಯವರ ಶ್ರದ್ಧಾಂಜಲಿ ಸಭೆಯಲ್ಲಿ ಪರಮಪೂಜ್ಯ ಜಗದ್ಗುರುಗಳು ಆಶೀರ್ವಚನ ನೀಡುತ್ತಿರುವುದು. ಶ್ರೀ ವಾಸುದೇವಮೂರ್ತಿಯವರ ಪುತ್ರಿ ಶ್ರೀಮತಿ ವಿಜಯಲಕ್ಷ್ಮಿ, ಅಳಿಯಂದಿರು ಹಾಗೂ ಕೈಗಾರಿಕೋದ್ಯಮಿಗಳು ಆದ ಶ್ರೀ ಮುರುಳಿಧರ್ ಭಾಗವತ್, ಮಾಜಿ ಶಾಸಕರಾದ ವಾಸುರವರುಗಳಿದ್ದಾರೆ (14.7.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಸಚಿವರಾದ ಶ್ರೀ ಬೈರತಿ ಬಸವರಾಜುರವರು ಭೇಟಿ ನೀಡಿ ಪೂಜ್ಯರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳು ಸನ್ಮಾನಿಸಿ ಆಶೀರ್ವದಿಸಿದರು (16.7.2021)








ಮೈಸೂರು ಜೆಎಸ್‌ಎಸ್ ಆಸ್ಪತ್ರೆಗೆ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಭ್ರಮರ ಟ್ರಸ್ಟ್ ವತಿಯಿಂದ ವೆಂಟಿಲೇಟರ್ ಹಾಗೂ ಹ್ಯೂಮಿಡಿಫಯರ್‌ಗಳನ್ನು ಶ್ರೀಮತಿ ಮಾಧುರಿ ತಾತಾಚಾರಿಯವರು ಕೊಡುಗೆ ನೀಡಿದರು ಹಾಗೂ ಕರೋನಾ ವಾರಿಯರ್ಸ್‌ಗಳಿಗೆ ಪ್ರಶಂಸನಾ ಪತ್ರ ಹಾಗೂ ಪ್ರೋತ್ಸಾಹಧನ ನೀಡಿ ಅಭಿನಂದಿಸಿದರು. ಡಾ. ಬಿ. ಸುರೇಶ್, ಡಾ. ಕರ್ನಲ್ ಎಂ. ದಯಾನಂದ, ಡಾ. ಸಿ.ಜಿ. ಬೆಟಸೂರಮಠ, ಡಾ. ಹೆಚ್. ಬಸವನಗೌಡಪ್ಪ, ಡಾ. ಎಂ. ಗುರುಸ್ವಾಮಿರವರುಗಳಿದ್ದಾರೆ (22.7.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಲೋಕೋಪಯೋಗಿ ಸಚಿವರಾದ ಶ್ರೀ ಸಿ.ಸಿ. ಪಾಟೀಲ್‌ರವರು ಕುಟುಂಬ ಸಮೇತ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು (6.8.2021)







ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ನೂತನ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರಾದ ಶ್ರೀ ಮುನಿರತ್ನರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (6.8.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಕುಟುಂಬ ಸಮೇತ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು (6.8.2021)



ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಗೆ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಸಚಿವರುಗಳಾದ ಡಾ. ಕೆ. ಸುಧಾಕರ್ ಶ್ರೀ ಮುರುಗೇಶ್ ನಿರಾಣಿ ಹಾಗೂ ಶ್ರೀ ಭೈರತಿ ಬಸವರಾಜ್‌ರವರುಗಳಿದ್ದಾರೆ (9.8.2021)



Registered with the Registrar of Newspapers in India Under No. 50622/86
'Prasada' Bi-Monthly, Vol. 36 Issue No. 4, July-August 2021

ಬಿಡಿ ಪ್ರತಿ: ರೂ. 10

e-mail: prasadamagazine@gmail.com * www.jssonline.org